

epaper - karnatakamalla.com

# ಕರ್ನಾಟಕ ಮಲ್ಲ

TEL: 24715208, Fax:24715237

ಮುಂಬಯಿಯಿಂದ ಪ್ರಕಟಿತ ಏಕೈಕ ಸಮಗ್ರ ಕನ್ನಡ ದೈನಿಕ

KARNATAKA MALLA, MUMBAI

ಸಂಪುಟ : 35 ಸಂಚಿಕೆ : 35 ಸೋಮವಾರ 09-03-2026 ಬೆಲೆ : ₹ 6 ಪುಟಗಳು - 12

ಸಂಪಾದಕ: ಚಂದ್ರಶೇಖರ ಪಾಲೆತ್ತಾಡಿ

ಶ್ರೀ ಮಹಾಲಕ್ಷ್ಮೀ ಜ್ಯೋತಿಷಾಲಯ
ಕಲ್ಯಾಣ್‌ನಲ್ಲಿ ಖಾಯಂ ಆಗಿ ಇದ್ದಾರೆ
ಗುರೂಜಿ : ಪಂಡಿತ ವಾಸುದೇವ ಗುರೂಜೀ
ಒಮ್ಮೆ ಭೇಟಿ ಕೊಡಿ, ಇದು ನಿಮ್ಮ ಕೊನೆಯ ಪ್ರಯತ್ನ
ನೌಕರಿ, ಮದುವೆ, ಸಂತಾನ, ಹೋಟೆಲ್, ಅಂಗಡಿಯಲ್ಲಿ ಅಡಚಣೆ, ಸಾಲಾಭಾದೆ, ಗಂಡ ಹೆಂಡತಿ ಜಗಳ, ಆರೋಗ್ಯ ಸಮಸ್ಯೆ, ಡೈವೋರ್ಸ್ ಪ್ರಾಬ್ಲಮ್, ಪ್ರೀತಿಯಲ್ಲಿ ಮೋಸ ಸ್ತ್ರೀ ಪುರುಷ ವಶೀಕರಣ
ಇನ್ನೂ ಯಾವುದೇ ಕಠಿಣ ಸಮಸ್ಯೆಗಳಿಗೆ 9 ದಿನದಲ್ಲಿ ಪರಿಹಾರ
ಸಂಪರ್ಕ - 9922771788
ವಿಳಾಸ - ಅಂಗಡಿ ನಂ. 9, ಚಂದ್ರಭೂಷಣ ಪ್ಲಾಜಾ, ಬಾಟಾ ಶೋರೂಮ್ ಹಿಂದೆ ಸದಾನಂದ ಚೌಕ, ಕಲ್ಯಾಣ್ (ಪ)
ಸಮಯ - ಬೆಳಿಗ್ಗೆ 10.30ರಿಂದ ಸಂಜೆ 7.00

ಈಗಿನ ಕಾಲದ ಪ್ರಕಾರ ಸತ್ಯದ ಮಾತುಗಳು ಮುಳ್ಳುಗಳಾಗುತ್ತವೆ. ಬಣ್ಣದ ಮಾತುಗಳು ಮುತ್ತುಗಳಾಗಿರುತ್ತವೆ.

3 ಡೊಂಬಿವಲಿ : ಮಹಿಳೆಯರ ಲೆಝೀಮ್ ವಿಶ್ವದಾಖಲೆ

ಸಿಂಹಗಢ ಕೋಟೆಯಲ್ಲಿ ಜೇನುನೊಣಗಳ ದಾಳಿ; ಮಗು ಸೇರಿದಂತೆ 8 ಜನರಿಗೆ ಗಾಯ 7

ಅವಕಾಶ ಸಿಕ್ಕಾಗ ಇನ್ನೊಬ್ಬರಿಗೆ ನಾವು ಸಾರಥಿ ಆಗಬೇಕು ವಿನಃ ಸ್ವಾರ್ಥಿ ಆಗಬಾರದು.

## ಕಿವೀಸ್ ಕನಸು ಭಗ್ನ; ಭಾರತಕ್ಕೆ ಚಾರಿತ್ರಿಕ ಮೂರನೇ ಬಾರಿ ಟಿ20 ವಿಶ್ವಕಪ್ ಕಿರೀಟ







ಅಹಮದಾಬಾದ್, ಮಾ.8 - ಅಗ್ರ ತ್ರಿಮೂರ್ತಿ ಬ್ಯಾಟರ್‌ಗಳಾದ ಸಂಜು ಸ್ಯಾಮ್ಸನ್, ಅಭಿಷೇಕ್ ಶರ್ಮಾ ಹಾಗೂ ಇಶಾನ್ ಕಿಶನ್ ಅವರ ರಣಾರ್ಭಟ ಅರೆಶತಕದ ಬಳಿಕ ಬುಮ್ರಾ ಹಾಗೂ ಅಕ್ಷರ್ ಅವರ ಶ್ರೇಷ್ಠ ಬೌಲಿಂಗ್ ದಾಳಿ ನೆರವಿನಿಂದ ಹಾಲಿ ಚಾಂಪಿಯನ್ ಭಾರತ ಇಲ್ಲಿನ ಅಹಮದಾಬಾದ್‌ನ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ನಡೆದ 2026ರ ಟಿ20 ವಿಶ್ವ ಕಪ್ ಫೈನಲ್‌ನಲ್ಲಿ ನ್ಯೂಜಿಲೆಂಡ್ ಎದುರು ದಾಖಲೆಯ 96 ರನ್ ಗಳಿಂದ ಗೆಲುವು ಸಾಧಿಸಿತು. ಆ ಮೂಲಕ ಟಿ20 ವಿಶ್ವಕಪ್ ಇತಿಹಾಸದಲ್ಲಿ ಮೂರು ಬಾರಿ ಪ್ರಶಸ್ತಿ ಗೆದ್ದ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಅಲ್ಲದೇ ಸತತ ಎರಡನೇ ಬಾರಿ ಹಾಗೂ ಟಿ20 ವಿಶ್ವಕಪ್ ಗೆದ್ದ ಮೊದಲ ಆತಿಥೇಯ ತಂಡವೆನಿಸಿತು. ಮೂರು ಬಾರಿ ಚಾಂಪಿಯನ್ ಎನಿಸಿದ ಸೂರ್ಯಕುಮಾರ್ ನೇತೃತ್ವದ ಭಾರತ ತಂಡಕ್ಕೆ 27.58 ಕೋಟಿ ರೂ. ನಗದು ಬಹುಮಾನ ಲಭಿಸಿದರೆ, ರನ್ನರ್-ಅಪ್ ಕಿವೀಸ್ ತಂಡವು 14.70 ಕೋಟಿ ರೂ. ಬಹುಮಾನ ಪಡೆದುಕೊಂಡಿತು.

ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರು ನೆರದಿದ್ದ ನರೇಂದ್ರ ಮೋದಿ ಸ್ಟೇಡಿಯಂನಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಭಾರತ ಕಿವೀಸ್ ಬೌಲರ್‌ಗಳ ದಾಳಿಯನ್ನು ಧೂಳೀಪಟ ಮಾಡಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಬೃಹತ್ 255 ರನ್ ಕಲೆಹಾಕಿತು. ಆ ಮೂಲಕ ಭಾರತ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಅತಿ ಹೆಚ್ಚು ರನ್ ಕಲೆಹಾಕಿದ ಮೊದಲ ತಂಡವೆನಿಸಿತು. ಗುರಿ ಹಿಂಬಾಲಿಸಿದ ಕಿವೀಸ್ ಪಡೆ 19 ಓವರ್‌ಗಳಲ್ಲಿ 159 ರನ್ ಗಳಿಗೆ ಸರ್ವ ಪತನ ಗೊಂಡಿತು.

7ನೇ ಪುಟಕ್ಕೆ





## ಕೊಲ್ಲಿ ಯುದ್ಧ ವಿಷಮದತ್ತ ; ಟೆಹರಾನ್ ತೈಲ ಸಂಗ್ರಹಾಗಾರಕ್ಕೆ ಬಾಂಬು ದಾಳಿ ಇರಾನ್‌ನಿಂದ ಇಸ್ರೇಲ್ ಮೇಲೆ ತೀವ್ರ ಕ್ಷಿಪಣಿ ದಾಳಿ



ಟೆಹರಾನ್/ಜೆರುಸಲೇಮ್/ದುಬಾಯಿ, ಮಾ.8- ಮಧ್ಯಪ್ರಾಚ್ಯದಲ್ಲಿ ಯುದ್ಧದ ತೀವ್ರತೆ ಹೆಚ್ಚುತ್ತಿರುವಂತೆಯೇ ಇಸ್ರೇಲ್ ಮಿಲಿಟರಿ ರವಿವಾರ ದಕ್ಷಿಣ ಲೆಬನಾನ್, ಬೆರೂತ್ ಮತ್ತು ಇರಾನಿನ ಟೆಹರಾನ್‌ನಲ್ಲಿರುವ ತೈಲ ಸಂಗ್ರಹ ಸ್ಥಾವರಗಳ ಮೇಲೆ ಬಾಂಬು ದಾಳಿ ನಡೆಸಿದ್ದು, ಭಾರೀ ಸಾವು ನೋವಿನ ಜತೆಗೆ ಆಸ್ತಿಪಾಸ್ತಿ ಹಾನಿಯಾಗಿದ್ದು, ಟೆಹರಾನ್ ನಗರವಿಡೀ ದಟ್ಟ ಹೊಗೆಯಿಂದ ತುಂಬಿ ಹೋಗಿದೆ.

ಯುದ್ಧದ ಮುಂದಿನ ಹಂತದಲ್ಲಿ ಇನ್ನಷ್ಟು ಆಶ್ಚರ್ಯಗಳು ಕಾದಿವೆ ಎಂದು ಇರಾಕಿಗೆ ಇಸ್ರೇಲ್ ಪ್ರಧಾನಿ ನ್ಯಾತನ್ಯಾಹು ಇದೇ ವೇಳೆ ಎಚ್ಚರಿಕೆ ನೀಡಿದ್ದಾರೆ.

ಇರಾನ್ ಕೂಡ ತನ್ನ ದಾಳಿಯನ್ನು ಮತ್ತಷ್ಟು ಕಠಿಣಗೊಳಿಸಿದ್ದು, ಬಹ್ರೈನ್‌ನಲ್ಲಿನ ನಿರ್ಲವಣೀಕರಣ (ಡಸಲೀಕರಣ) ಸ್ಥಾವರವನ್ನು ಧ್ವಂಸಮಾಡಿದೆ. ಇರಾನಿನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಅವರು, ಅಮೆರಿಕದ ವಾಯುಪಡೆ ನಡೆಸಿರುವ ದಾಳಿಯಲ್ಲಿ ಇರಾನಿನ ಕ್ವೇಶ್ಮ್ ದ್ವೀಪದಲ್ಲಿರುವ ನಿರ್ಲವಣೀಕರಣ ಸ್ಥಾವರ ಹಾನಿಗೀಡಾಗಿದೆ ಎಂದು ಇಂದು ಬೆಳಿಗ್ಗೆ ಹೇಳಿದ್ದಾರೆ.

ಅಮೆರಿಕವೇ ಇಂತಹ ದಾಳಿಯನ್ನು ಆರಂಭಿಸಿದ್ದು, ಇರಾನ್ ಅಲ್ಲ ಎಂದು ಹೇಳಿರುವ ಅವರು, ಇರಾನ್ ತನ್ನ ರಕ್ಷಣೆಗಾಗಿ ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಎಲ್ಲ ರೀತಿಯ ಪ್ರತೀ ದಾಳಿ ನಡೆಸಲಿದೆ ಎಂದು ಅವರು ಎಚ್ಚರಿಸಿದ್ದಾರೆ.

ಇರಾನ್ ಮತ್ತು ಬಹ್ರೈನ್‌ನಲ್ಲಿ ನಿರ್ಲವಣೀಕರಣ ಸ್ಥಾವರಗಳಂತಹ ಮೂಲ ಸೌಕರ್ಯಗಳ ಮೇಲೆ ಪರಸ್ಪರ ದಾಳಿಯಾದರೆ, ಕೊಲ್ಲಿ ರಾಷ್ಟ್ರಗಳಲ್ಲಿ ಕುಡಿಯುವ ನೀರಿನ ಸರಬರಾಜಿಗೆ ದೊಡ್ಡ ಸಮಸ್ಯೆ ಉಂಟಾಗಲಿದೆ.

ಇಸ್ರೇಲ್ ಟೆಹರಾನ್‌ನಲ್ಲಿ ತೈಲ ಸಂಗ್ರಹಾಗಾರದ ಮೇಲೆ ನಡೆಸಿರುವ ಬಾಂಬು ದಾಳಿಗೆ ತೈಲ ಸಂಗ್ರಹ ಸ್ಥಾವರದಲ್ಲಿ ಬೆಂಕಿ ಹತ್ತಿಕೊಂಡಿದ್ದು, ಭಾರೀ ಎತ್ತರಕ್ಕೆ ದಟ್ಟ ಹೊಗೆ ಎದ್ದಿದೆ. ಟೆಹರಾನ್ ನಗರವಿಡೀ ಕಪ್ಪು ಹೊಗೆಯಿಂದ ಆವರಿಸಲ್ಪಟ್ಟಿದೆ. ಗಲ್ಫ್ ಯುದ್ಧ ಆರಂಭವಾದ ಬಳಿಕ ನಾಗರಿಕ 7ನೇ ಪುಟಕ್ಕೆ

### ಇರಾನ್ ಕ್ಷಿಪಣಿ ದಾಳಿಗೆ ಸೌದಿಯಲ್ಲಿ ಭಾರತೀಯರಿಬ್ಬರು ಬಲಿ

ರಿಯಾದ್, ಮಾ. 8- ಸೌದಿ ಅರೇಬಿಯಾದ ಜನವಸತಿ ಪ್ರದೇಶದ ಮೇಲೆ ರವಿವಾರ ಇರಾನ್ ಕ್ಷಿಪಣಿ ದಾಳಿಗೆ ಇಬ್ಬರು ಭಾರತೀಯರು ಮತ್ತು ಒಬ್ಬ ಬಾಂಗ್ಲಾದೇಶದ ಪ್ರಜೆ ಮೃತಪಟ್ಟಿದ್ದು ಇತರ 12 ಜನರು ಗಾಯಗೊಂಡಿರುವುದಾಗಿ ಸೌದಿ ಅರೇಬಿಯಾ ಸರಕಾರ ತಿಳಿಸಿದೆ.

ಕಳೆದ 9 ದಿನಗಳಿಂದ ನಡೆಯುತ್ತಿರುವ ಯುದ್ಧದಲ್ಲಿ ಇರಾನ್ ನೆರೆಯ ಕೊಲ್ಲಿ ರಾಷ್ಟ್ರಗಳಲ್ಲಿ ಇರುವ ಅಮೆರಿಕದ ಮಿಲಿಟರಿ ನೆಲೆಗಳು ಮತ್ತು ರಾಯಭಾರಿ ಕಚೇರಿಗಳ ಮೇಲೆ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸುತ್ತಿದೆ. 7ನೇ ಪುಟಕ್ಕೆ

## ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅಪಮಾನ ಮಾಡಿದ ಟಿಎಂಸಿಯನ್ನು ಬಂಗಾಳದ ಜನತೆ ಕ್ಷಮಿಸಲಾರರು : ಪಿಎಂ.ಮೋದಿ

ಹೊಸದಿಲ್ಲಿ, ಮಾ.8- ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಪಶ್ಚಿಮ ಬಂಗಾಳದ ಟಿಎಂಸಿ ಸರಕಾರ ಅಗೌರವ ತೋರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪ.ಬಂಗಾಳದ ಮಮತಾ ಬ್ಯಾನರ್ಜಿ ಅವರ ಸರಕಾರದ ವಿರುದ್ಧ ರವಿವಾರ ಇಲ್ಲಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಪ.ಬಂಗಾಳದ 'ಪ್ರಬುದ್ಧ ಜನರು' ಒಬ್ಬರು ಮಹಿಳಾ ಬುಡಕಟ್ಟು ನಾಯಕರ ಹಾಗೂ ದೇಶದ ರಾಷ್ಟ್ರಪತಿಗೆ 'ಅವಮಾನ ಮಾಡಿದ' ಪಕ್ಷವನ್ನು ಯಾವತ್ತೂ ಕ್ಷಮಿಸಲಾರರು ಎಂದು ಹೇಳಿದ್ದಾರೆ.

ಇಂದು ಇಡೀ ದೇಶ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸುತ್ತಿದೆ. ಆದರೆ, ಕೇವಲ ನಿನ್ನೆಯಷ್ಟೇ ಪ.ಬಂಗಾಳದ ಟಿಎಂಸಿ ಸರಕಾರವು ಭಾರತದ ಗೌರವಾನ್ವಿತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಅತ್ಯಂತ ಅವಮಾನ ಮಾಡಿದೆ ಎನ್ನುವುದು ಅತ್ಯಂತ ಕಳವಳಕಾರಿಯಾಗಿದೆ ಎಂದು ಮೋದಿ ಹೇಳಿದ್ದಾರೆ.



ಅವರು ದಿಲ್ಲಿಯಲ್ಲಿ ಎರಡು ಹೊಸ ಮೆಟ್ರೋ ಕಾರಿಡಾರ್‌ಗಳು ಮತ್ತು ಇತರ ಯೋಜನೆಗಳನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಪ.ಬಂಗಾಳದಲ್ಲಿ ಶನಿವಾರ ಬುಡಕಟ್ಟು ಸಂತಾಲ್ ಸಮುದಾಯದ ಸಮ್ಮೇಳನದ ಸ್ಥಳ ಬದಲಾವಣೆ ಮತ್ತು ತನ್ನ ಭೇಟಿ ವೇಳೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಅವರು ಸಂಪುಟ ಸದಸ್ಯರ ಗೈರು ಹಾಜರಿ ಬಗ್ಗೆ ರಾಷ್ಟ್ರಪತಿ ಮುರ್ಮು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ ಪ್ರಧಾನಿ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.

ರಾಷ್ಟ್ರಪತಿ ಅವರು ಮಮತಾ ಬ್ಯಾನರ್ಜಿ ಅವರ ಅನುಪಸ್ಥಿತಿ ಮತ್ತು ಸಂತಾಲ್ ಬುಡಕಟ್ಟು ಸಮುದಾಯದ ಸಮ್ಮೇಳನದ ಸ್ಥಳದ ಬದಲಾವಣೆ ಬಗ್ಗೆ ಅಸಮಾಧಾನ ಪಾತ್ರ ವಹಿಸಿದ್ದು, ಬೆನ್ನಲ್ಲೇ ಅದಕ್ಕೆ ಪ್ರತಿಕ್ರಿಯೆ ನೀಡಿದ್ದ ಮಮತಾ ಬ್ಯಾನರ್ಜಿ ಅವರು, ರಾಷ್ಟ್ರಪತಿಯ ಮಾತುಗಳು ಬಿಜೆಪಿಯ ಸಲಹೆಯಾಗಿದೆ ಎಂದು ಆಪಾದಿಸಿದ್ದಲ್ಲದೆ ಮಣಿಪುರ ಮತ್ತು ಛತ್ತೀಸ್‌ಗಢದಲ್ಲಿ ಬುಡಕಟ್ಟು ಜನರ ಮೇಲಿನ ದೌರ್ಜನ್ಯಗಳ ಬಗ್ಗೆ ರಾಷ್ಟ್ರಪತಿ ಯಾಕೆ ಮೌನವಾಗಿದ್ದಾರೆ ಎಂದು ಪ್ರಶ್ನಿಸಿದ್ದಾರೆ.

ರಾಷ್ಟ್ರಪತಿ ಮುರ್ಮು ಅವರಿಗೆ ಟಿಎಂಸಿ ಸರಕಾರ 'ಅವಮಾನ ಮಾಡಿದೆ' ಎಂದು ಬಿಜೆಪಿ ಟೀಕಿಸಿದರೆ, ಪ್ರಧಾನಿ ಮೋದಿ ಅವರು ಟಿಎಂಸಿ ಸರಕಾರದ ವರ್ತನೆ ನಾಚಿಕೆಗೇಡು ಮತ್ತು ಯಾವತ್ತೂ 7ನೇ ಪುಟಕ್ಕೆ

## ಮಹಿಳೆಯರು ಬಲಿಷ್ಠರು, ಇತರರಿಗಿಂತ ಕಡಿಮೆಯಿಲ್ಲ : ಅಂತಾರಾಷ್ಟ್ರೀಯ ಮಹಿಳಾ ದಿನದಂದು ರಾಷ್ಟ್ರಪತಿ ಮುರ್ಮು

ಹೊಸದಿಲ್ಲಿ, ಮಾ.8 - ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ ಮಹಿಳೆಯರ ಶಕ್ತಿ ಮತ್ತು ಸಾಧನೆಗಳನ್ನು ಶ್ಲಾಘಿಸಿದ್ದು, 'ನಾವು ಯಾರಿಗೂ ಕಡಿಮೆ ಇಲ್ಲ' ಎಂದು ಹೇಳುತ್ತಾ ಅವರ ಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳುವಂತೆ ಪ್ರೋತ್ಸಾಹಿಸಿದರು. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಷ್ಟ್ರಪತಿಗಳು, ಇದು ಮಹಿಳೆಯರ ಸಾಧನೆಗಳನ್ನು ಗೌರವಿಸಲು ಮಾತ್ರವಲ್ಲದೆ ಅವರ ಸಬಲೀಕರಣಕ್ಕೆ ದೇಶದ ಬದ್ಧತೆಯನ್ನು ಪುನರುಚ್ಚರಿಸಲು ಒಂದು ಸಂದರ್ಭವಾಗಿದೆ ಎಂದು ಹೇಳಿದರು.

ಶಿಕ್ಷಣ, ಆಡಳಿತ, ನ್ಯಾಯಾಂಗ, ಸಶಸ್ತ್ರ ಪಡೆಗಳು, ವೈದ್ಯಕೀಯ, ವಿಜ್ಞಾನ, ತಂತ್ರಜ್ಞಾನ, ಕಲೆ, ಉದ್ಯಮಶೀಲತೆ ಮತ್ತು ಕ್ರೀಡೆಗಳಲ್ಲಿ ಮಹಿಳೆಯರ ಪ್ರಮುಖ ಪಾತ್ರಗಳನ್ನು ಮುರ್ಮು ಒತ್ತಿ ಹೇಳಿದರು.

ಗ್ರಾಮೀಣ ಮಹಿಳೆಯರು ಸ್ವಸಹಾಯ ಗುಂಪುಗಳ



ಮೂಲಕ ಆರ್ಥಿಕವಾಗಿ ಸ್ವಾವಲಂಬಿಗಳಾಗುತ್ತಿದ್ದಾರೆ ಮತ್ತು ಗ್ರಾಮ ಅಭಿವೃದ್ಧಿಯಲ್ಲಿ ನಾಯಕತ್ವವನ್ನು ಒದಗಿಸುತ್ತಿದ್ದಾರೆ, ಆದರೆ ಮಹಿಳೆಯರು ಉದ್ಯೋಗ, ನವೋದ್ಯಮಗಳು ಮತ್ತು ಕಾರ್ಪೊರೇಟ್ ವಲಯದಲ್ಲಿ ನಾಯಕಿಯರಾಗಿ ಹೊರಹೊಮ್ಮುತ್ತಿದ್ದಾರೆ ಎಂದು ಅವರು ಹೇಳಿದರು. 'ಅವಕಾಶ ಮತ್ತು ಬೆಂಬಲವಿದ್ದರೆ, ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ಸಾಧನೆ ಮಾಡಬಹುದು' ಎಂದು ಅವರು ಹೇಳಿದರು. 'ಮಹಿಳಾವೋ ಮೇ ದಮ್ ಹೈ, ಹಮ್ ಕಿಸಿ ಸೆ ಕಮ್ ನಹಿ. ಹಮ್ ಮೇ ಭಿ ದಮ್ ಹೈ (ಮಹಿಳೆಯರು ಶಕ್ತಿಶಾಲಿಗಳು, ನಾವು ಇತರರಿಗಿಂತ ಕಡಿಮೆಯಿಲ್ಲ. ನಮಗೂ ಶಕ್ತಿ ಇದೆ)'. ಅನೇಕ ಸಾಧನೆಗಳನ್ನು ಮಾಡಲಾಗಿದ್ದರೂ, ಸಮಾಜದಲ್ಲಿ ಮಹಿಳೆಯರ ಸಮಾನ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಹಲವಾರು ಅಡೆತಡೆಗಳು ಇನ್ನೂ ಅಸ್ತಿತ್ವದಲ್ಲಿವೆ ಎಂದು ಅಧ್ಯಕ್ಷರು ಒತ್ತಿ ಹೇಳಿದರು. 'ಈ ಸವಾಲುಗಳನ್ನು ಕಾನೂನಿನಿಂದ ಮಾತ್ರ ಪರಿಹರಿಸಲಾಗುವುದಿಲ್ಲ. ನಮ್ಮ ಮನಸ್ಥಿತಿಯನ್ನು ಬದಲಾಯಿಸುವುದು ಅವಶ್ಯಕ' ಎಂದು ಅವರು ಹೇಳಿದರು.

ಪೋಷಕರು ಮನೆಯಲ್ಲಿ ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳ ನಡುವೆ ತಾರತಮ್ಯ ಮಾಡಬಾರದು ಎಂದು ಅವರು ಒತ್ತಿ ಹೇಳಿದರು. ಅತ್ತೆಯಂದಿರು ತಮ್ಮ ಹೆಣ್ಣು ಮಕ್ಕಳು ಮತ್ತು ಸೊಸೆಯಂದಿರ ನಡುವೆ ತಾರತಮ್ಯ ಮಾಡಬಾರದು ಮತ್ತು ಸೊಸೆಯಂದಿರನ್ನು ಹೆಣ್ಣು ಮಕ್ಕಳಂತೆ ನಡೆಸಿಕೊಳ್ಳಬೇಕು ಎಂದು ಅವರು ಹೇಳಿದರು.

## ಇಂದಿನಿಂದ ಸಂಸತ್ತಿನ ಬಜೆಟ್ ದ್ವಿತೀಯಾರ್ಧದ ಅಧಿವೇಶನ; ಸ್ಪೀಕರ್ ಬಿರ್ಲಾ ವಿರುದ್ಧ ಅವಿಶ್ವಾಸ ನಿರ್ಣಯ, ಸದನದಲ್ಲಿ ಗದ್ದಲ ನಿರೀಕ್ಷೆ

ಹೊಸದಿಲ್ಲಿ, ಮಾ. 8- ಸಂಸತ್ತಿನ ಬಜೆಟ್ ಅಧಿವೇಶನದ ದ್ವಿತೀಯಾರ್ಧದ ಕಲಾಪಗಳು ನಾಳೆ ಆರಂಭವಾಗಲಿದ್ದು, ಲೋಕಸಭೆಯಲ್ಲಿ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧದ ವಿಪಕ್ಷಗಳ ಅವಿಶ್ವಾಸ ನಿರ್ಣಯದ ನೋಟೀಸನ್ನು ಚರ್ಚೆಗೆ ಸ್ವೀಕರಿಸುವ ಮೂಲಕ ಸದನದಲ್ಲಿ ಭಾರೀ ಗದ್ದಲವನ್ನು ನಿರೀಕ್ಷಿಸಲಾಗಿದ್ದು ಭಾರತ-ಅಮೆರಿಕ ನಡುವಿನ ಮಧ್ಯಂತರ ವ್ಯಾಪಾರ ಒಪ್ಪಂದ, ಗಲ್ಫ್ ಯುದ್ಧ ಹಿನ್ನೆಲೆಯಲ್ಲಿ ರಷ್ಯಾದಿಂದ ಭಾರತ ತೈಲ ಖರೀದಿಸಲು 30 ದಿನಗಳ ರಿಯಾಯಿತಿ ನೀಡಲಾಗಿದೆ ಎಂಬ ಅಮೆರಿಕದ ಹೇಳಿಕೆ ಸೇರಿದಂತೆ ಹಲವು ವಿಚಾರಗಳು ಸಂಸತ್ತಿನ ಎರಡನೇ ಚರಣದ ಬಜೆಟ್ ಅಧಿವೇಶನದಲ್ಲಿ ಭಾರೀ ಕೋಲಾಹಲ ನಿರೀಕ್ಷಿಸುವ ಸಾಧ್ಯತೆಯಿದೆ.

ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ನಡೆಸಿರುವ ಮಿಲಿಟರಿ ದಾಳಿಯನ್ನು ಖಂಡಿಸದೇ ಇರುವ ಸರಕಾರದ ನೀತಿಯನ್ನು ಪ್ರಶ್ನಿಸಿರುವ ವಿರೋಧ ಪಕ್ಷಗಳು ಸರಕಾರದ ವಿದೇಶಾಂಗ ನೀತಿ ಬದಲಾಗಿದೆಯೇ ಎಂದು ಸರಕಾರವನ್ನು ಟೀಕಿಸಿವೆ.

ವಿಧಾನಭಾ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್)ಯಲ್ಲಿ 60 ಲಕ್ಷಕ್ಕೂ ಹೆಚ್ಚು ಮತದಾರರ ಹೆಸರುಗಳನ್ನು ಅಳಿಸಿರುವ ವಿಚಾರವೂ ಸದನದಲ್ಲಿ ಪ್ರತಿಧ್ವನಿಸಲಿದೆ.

ಸ್ಪೀಕರ್ ಓಂ ಬಿರ್ಲಾ ಅವರು ಸದನದಲ್ಲಿ ಪಕ್ಷಪಾತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ವಿರೋಧ ಪಕ್ಷದ ನಾಯಕ ಮತ್ತು ಇತರ ವಿರೋಧ ಪಕ್ಷಗಳ ನಾಯಕರಿಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ ಎಂದು ವಿರೋಧ ಪಕ್ಷಗಳು ಅವರ ವಿರುದ್ಧ ಅವಿಶ್ವಾಸ ನಿರ್ಣಯ ನೋಟೀಸ್ ನೀಡಿದ್ದು, ನಾಳೆ ಕಲಾಪ ಪಟ್ಟಿಯಲ್ಲಿ ಚರ್ಚೆಗೆ ಸ್ವೀಕಾರವಾಗುವ ಬಗ್ಗೆ ಉಲ್ಲೇಖವಾಗಿದೆ.

ರಾಷ್ಟ್ರಪತಿಗಳ ಭಾಷಣ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಉತ್ತರಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಗೆ ಬಾರದೇ ಇರುವ ಬಗ್ಗೆ ಸ್ಪೀಕರ್ ಬಿರ್ಲಾ ಅವರು ನೀಡಿದ್ದ ಕಾರಣಗಳು ಮತ್ತು ಪಕ್ಷಗಳ ಮಹಿಳಾ ಸದಸ್ಯೆಯರ ಬಗ್ಗೆ ಆಡಿದ್ದ ಆರೋಪಗಳನ್ನು ವಿಪಕ್ಷಗಳು ಸ್ಪೀಕರ್ ವಿರುದ್ಧ ಅವಿಶ್ವಾಸ ನಿರ್ಣಯ ನೋಟೀಸಲ್ಲಿ ಪ್ರಸ್ತಾಪ ಮಾಡಿವೆ.

ಪ್ರಧಾನಿ ಮೋದಿ ಅವರು ರಾಷ್ಟ್ರಪತಿ ಭಾಷಣದ ಚರ್ಚೆಗೆ ಉತ್ತರಿಸಲು ಲೋಸಕಭೆಗೆ ಬಂದಿದ್ದಲ್ಲಿ ಅವರ ಮೇಲೆ ಕಾಂಗ್ರೆಸ್ ಸದಸ್ಯರಿಂದ ಹಲ್ಲೆಯಾಗುವ ಮತ್ತು ಮಹಿಳಾ ಸದಸ್ಯರಿಂದ ಅನುಚಿತ ವರ್ತನೆ ನಡೆಯುವ ಮಾಹಿತಿ ತನಗೆ ಇತ್ತು ಎಂದು ಬಿರ್ಲಾ ಹೇಳಿದ್ದರು. ಬಿರ್ಲಾ ಅವರ ವಿರುದ್ಧ ವಿಪಕ್ಷಗಳು ಅವಿಶ್ವಾಸ ನಿರ್ಣಯ ನೋಟೀಸ್ ನೀಡಿದ ಬಳಿಕ ಅವರು ಕಲಾಪ ನಡೆಸಲು ಲೋಕಸಭೆಗೆ ಪ್ರವೇಶಿಸಿಲ್ಲ. ಅವಿಶ್ವಾಸ ನಿರ್ಣಯದ ನೋಟೀಸಿನ ವಿಷಯ ಕಲಾಪ ಪಟ್ಟಿಯಿಂದ ರದ್ದಾದ ಬಳಿಕವೇ ಬಿರ್ಲಾ ಸದನಕ್ಕೆ ಸಭಾಧ್ಯಕ್ಷತೆ ವಹಿಸಲು ಹಾಜರಾಗುತ್ತಾರೆಂದು ಲೋಕಸಭಾ ಸಚಿವಾಲಯ ಹೇಳಿದೆ. 7ನೇ ಪುಟಕ್ಕೆ

## ಮಹಿಳಾ ನಾಯಕತ್ವ ಸಾಮಾಜಿಕ ಪ್ರಗತಿಗೆ ಪ್ರಮುಖ, ಮಹಿಳಾ ಸಬಲೀಕರಣಕ್ಕೆ ಸರ್ಕಾರ ಬದ್ಧ : ಫಡ್ನವಿಸ್

**ಉತ್ತಾನ್‌ನಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನದಂದು ಆಯೋಜಿಸಲಾದ 'ವಿಕಸಿತ್ ಭಾರತ್ ನಾರಿ ಶಕ್ತಿ ಸಂಗಮ್' ಸಮ್ಮೇಳನ ಉದ್ಘಾಟನೆ**

ಥಾಣೆ, ಮಾ. 8 - ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವಿಸ್ ಭಾನುವಾರ ಮಹಿಳಾ ನಾಯಕತ್ವ ಸಾಮಾಜಿಕ ಪ್ರಗತಿಗೆ ಪ್ರಮುಖ ಎಂದು ಹೇಳಿದ್ದಾರೆ ಮತ್ತು ಉದ್ದೇಶಿತ ಯೋಜನೆಗಳು ಮತ್ತು ಹೆಚ್ಚಿದ ಅವಕಾಶಗಳ ಮೂಲಕ ಮಹಿಳಾ ಸಬಲೀಕರಣವನ್ನು ಬೆಳೆಸಲು ತಮ್ಮ ಸರ್ಕಾರ ಬದ್ಧವಾಗಿದೆ ಎಂದು ಪ್ರತಿಪಾದಿಸಿದರು.

ಇಲ್ಲಿನ ಮೀರಾ-ಭಾಯಂದರ್ ಪ್ರದೇಶದ ಉತ್ತಾನ್‌ನಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನದಂದು ಆಯೋಜಿಸಲಾದ ಎರಡು ದಿನಗಳ 'ವಿಕಾಸಿತ್ ಭಾರತ್ ನಾರಿ ಶಕ್ತಿ ಸಂಗಮ್' ಗ್ರಾಮೀಣ ಮಹಿಳಾ ನಾಯಕತ್ವ ಸಮ್ಮೇಳನವನ್ನು ಉದ್ಘಾಟಿಸಿದ ನಂತರ ಅವರು ಮಾತನಾಡುತ್ತಿದ್ದರು. ಈ ಕಾರ್ಯಕ್ರಮವು ಸಮಾಜ ಸುಧಾರಕಿ ಡಾ. ಮುತ್ತುಲಕ್ಷ್ಮಿ ರೆಡ್ಡಿ ಅವರ ಮದ್ರಾಸ್ ವಿಧಾನ ಪರಿಷತ್ತಿಗೆ



ಐತಿಹಾಸಿಕ ಪ್ರವೇಶದ ಶತಮಾನೋತ್ಸವವನ್ನು ಸಹ ಗುರುತಿಸಿತು.

''ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವುದು ಈ ಸಮಯದ ಅಗತ್ಯವಾಗಿದೆ. ಸರಿಯಾದ ಅವಕಾಶಗಳನ್ನು ಒದಗಿಸಿದಾಗ, ಮಹಿಳೆಯರು ಅಸಾಧಾರಣವಾಗಿ ಸಮರ್ಥ ನಾಯಕತ್ವವನ್ನು ಪ್ರದರ್ಶಿಸುತ್ತಾರೆ'' ಎಂದು ಫಡ್ನವಿಸ್ ಹೇಳಿದರು.

'ಲಖಪತಿ ದೀದಿ' ಯೋಜನೆಯಡಿ ಈ ವರ್ಷ 37 ಲಕ್ಷ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಮಹತ್ವಾಕಾಂಕ್ಷೆಯ ಗುರಿಯನ್ನು ಮಹಾರಾಷ್ಟ್ರ ಹೊಂದಿದೆ ಎಂದು ಅವರು ಹೇಳಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಜಯಕುಮಾರ್ ಗೋರೆ, ಈ ಸಂದರ್ಭದಲ್ಲಿ ಮಾತನಾಡುತ್ತಾ, ತಳಮಟ್ಟದಲ್ಲಿ ಉತ್ತಮ ಆಡಳಿತವನ್ನು ಬಲಪಡಿಸಲು ಚುನಾಯಿತ ಮತ್ತು ಮಹತ್ವಾಕಾಂಕ್ಷಿ ಮಹಿಳಾ ಸರಪಂಚರಿಗೆ ರಂಭೌ ಮಲ್ಗಿ ಪ್ರಬೋಧಿನಿಯಲ್ಲಿ ತರಬೇತಿ ಶಿಬಿರಗಳನ್ನು ಆಯೋಜಿಸುವ ಪ್ರಸ್ತಾಪವನ್ನು ಮಾಡಿದರು.

## ನಿತೀಶ್ ಕುಮಾರ್ ಮಗ ನಿಶಾಂತ್ ಜೆಡಿಯುಗೆ ಸೇರ್ಪಡೆ ಪಕ್ಷವನ್ನು ಬಲವಡಿಸುವುದು ನನ್ನ ಕೆಲಸ : ನಿಶಾಂತ್ ಕುಮಾರ್

ಪಾಟ್ನ, ಮಾ.8- ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರ ಮಗ ನಿಶಾಂತ್ ಕಮಾರ್ ಅವರು ರವಿವಾರ ಇಲ್ಲಿ ಸಂಯುಕ್ತ ಜನತಾ ದಳ (ಜೆಡಿಯು)ಕ್ಕೆ ಸೇರ್ಪಡೆಗೊಂಡಿದ್ದು, ಪಕ್ಷದ ಸಂಘಟನೆಯನ್ನು ಬಲಪಡಿಸಲು ತಾನು ಕೆಲಸ ಮಾಡುವುದಾಗಿ ಹೇಳಿದ್ದಾರೆ.

ಇಂಜಿನಿಯರಿಂಗ್ ಪದವೀಧರರಾದ 40ರ ಹರೆಯದ ನಿಶಾಂತ್ ಕುಮಾರ್ ಅವರು ಜೆಡಿಯು ಪ್ರಧಾನ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಅಧಿಕೃತವಾಗಿ ಜೆಡಿಯು ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಮಂತ್ರಿ ರಾಜೀವ್ ರಂಜನ್ ಸಿಂಗ್ 'ಲಲನ್' ಮತ್ತು ಜೆಡಿಯು ರಾಷ್ಟ್ರೀಯ ರಾಜ್ಯಾಧ್ಯಕ್ಷ ಸಂಜಯ್ ಝಾ ಸಹಿತ ಪಕ್ಷದ ಹಿರಿಯ ನಾಯಕರುಗಳು ಉಪಸ್ಥಿತರಿದ್ದರು.

ಜೆಡಿಯು ಸೇರಿದ ಬಳಿಕ ಮಾತನಾಡಿದ ನಿಶಾಂತ್ ಕುಮಾರ್ ಅವರು, ನನ್ನ ತಂದೆ ರಾಜ್ಯಸಭೆಗೆ ಹೋಗಲು ನಿರ್ಧರಿಸಿದರು.ಅದು ಅವರು ವೈಯಕ್ತಿಕ ನಿರ್ಧಾರವಾಗಿದೆ. ಅದನ್ನು ನಾವೆಲ್ಲರೂ ಗೌರವಿಸುತ್ತೇವೆ.



ಅವರ ಮಾರ್ಗದರ್ಶನದಲ್ಲಿ ನಾವು ಕೆಲಸ ಮುಂದುವರಿಸುತ್ತೇವೆ. ಸಂಘಟನೆಯನ್ನು ಬಲಪಡಿಸಲು ನಾನು ಕೆಲಸ ಮಾಡುತ್ತೇನೆ ಎಂದು ಹೇಳಿದರು.

ತನ್ನ ತಂದೆ , ಬಿಹಾರದ ದೀರ್ಘಕಾಲದ ಮುಖ್ಯಮಂತ್ರಿಯಾಗಿದ್ದು, ಕಳೆದ 20 ವರ್ಷಗಳಲ್ಲಿ ಅವರು ರಾಜ್ಯಕ್ಕಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ ಎಂದು ನಿಶಾಂತ್ ತಿಳಿಸಿದರು.

ರಾಜ್ಯದ ಅಭಿವೃದ್ಧಿಗೆ ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ನೀಡಿದ ಕೊಡುಗೆಯನ್ನು ಬಿಹಾರದ ಜನರು ಯಾವತ್ತೂ ಮರೆಯಲಾರರು ಎಂದು ಅವರು ಹೇಳಿದರು.

ನಾವು ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ನನ್ನ ಮೇಲಿಟ್ಟಿರುವ ವಿಶ್ವಾಸಕ್ಕೆ ನಾನು ಆಭಾರಿಯಾಗಿದ್ದೇನೆ. ಕಳೆದ 20 ವರ್ಷಗಳಿಂದ ನನ್ನ ತಂದೆಯವರು ದೇಶಕ್ಕಾಗಿ ನಮ್ಮ ರಾಜ್ಯಕ್ಕಾಗಿ ನೀಡಿರುವ ಕೊಡುಗೆಗಾಗಿ ನಾವೆಲ್ಲರೂ ಹೆಮ್ಮೆ ಪಡುತ್ತೇವೆ. ಮುಖ್ಯಮಂತ್ರಿಯಾಗಿ ನಿತೀಶ್ ಕುಮಾರ್ ಮಾಡಿರುವ ಅಭಿವೃದ್ಧಿ ಕೆಲಸವನ್ನು ನಾನು ಜನರಿಗೆ ತಲುಪಿಸುತ್ತೇವೆ ಎಂದು ಅವರು ನುಡಿದರು.

ನಿಶಾಂತ್ ಕುಮಾರ್ ಜೆಡಿಯು ಕಚೇರಿಗೆ ತಲುಪಿದಾಗ ಅವರಿಗೆ ಅದ್ದೂರಿ ಸ್ವಾಗತ ನೀಡಲಾಯಿತು. ಪಕ್ಷದ ಕಾರ್ಯಕರ್ತರು ಕಚೇರಿಯ ಹೊರಗಡೆ ಸೇರಿದ್ದು, ಪಕ್ಷದ ಬಾವುಟಗಳನ್ನು ಹಿಡಿದುಕೊಂಡು ನಿತೀಶ್ ಕುಮಾರ್ ಮತ್ತು ನಿಶಾಂತ್ 7ನೇ ಪುಟಕ್ಕೆ

# ಬಂಟರ ಸಂಘ ಪಿಂಪ್ರಿ - ಚಿಂಚ್ವಾಡ್ ಇದರ ವಾರ್ಷಿಕೋತ್ಸವ ಸಂಭ್ರಮ

## ಧನಾತ್ಮಕ ಚಿಂತನೆಯೊಂದಿಗೆ ಸಮಾಜಕ್ಕೆ ಪೂರಕ ಮಾನವೀಯತೆಯ ಸೇವಾ ಕಾರ್ಯಗಳು ನಡೆಯಲಿ : ಉದಯ್ ಶೆಟ್ಟಿ ಮುನಿಯಾಲ್


ಬಂಟರ ಸಂಘ ಪಿಂಪ್ರಿ- ಚಿಂಚ್ವಾಡ್ ಇದರ ವಾರ್ಷಿಕೊತ್ಸವನ ಸಮಾರಂಭವನ್ನು ಉದ್ಘಾಟಿಸಿದಾಗ


ಉದಯ್ ಶೆಟ್ಟಿ ಮುನಿಯಾಲ್ ಅವರನ್ನು ಸನ್ಮಾನಿಸಿದಾಗ



(ವರದಿ : ಹರೀಶ್ ಮೂಡಬಿದ್ರಿ ಪುಣೆ)

ಪುಣೆ , ಮಾ.8- ಹಿಂದಿನ ಕೂಡು ಕುಟುಂಬದ ಶಕ್ತಿಯೇ ನಮ್ಮ ಬಂಟ ಸಮಾಜದ ಶಕ್ತಿಯಾಗಿತ್ತು. ಅಂತಹ ಕೂಡು ಕುಟುಂಬದ ಬಾಂಧವ್ಯ ಇರುವುದರಿಂದ ಶಕ್ತಿಯುತವಾಗಿ ಬೆಳೆದು ನಿಂತವರು ನಾವುಗಳು . ನಮ್ಮ ಸಂಸ್ಕಾರ ಸಂಸ್ಕೃತಿಯನ್ನು ಎಲ್ಲಿಯೂ ಬಿಟ್ಟು ಕೊಡದೆ ಸ್ವ ಸಾಮರ್ಥ್ಯದಿಂದ ಸಮಾಜದಲ್ಲಿ ಶಕ್ತಿಯನ್ನು ತೋರಿಸಿದ ನಾವುಗಳು ನಮಗೇ ಸಾಟಿ. ತ್ಯಾಗ ಮತ್ತು ಸೇವೆ ಎಂಬ ಆದರ್ಶಗಳನ್ನು ಪ್ರಜಾ ಪ್ರಭುತ್ವದ ವ್ಯವಸ್ಥೆಗೆ ಅನುಗುಣವಾಗಿ ಎಲ್ಲಾ ಸಮಾಜದ ಜೊತೆ ಉತ್ತಮ ಬಾಂಧವ್ಯವನ್ನು ಪಾಲಿಸಿಕೊಂಡು ಸಮಾಜ ಒಳಿತಿಗಾಗಿ ಸೇವೆಯಲ್ಲಿರುವವರು ನಾವು. ಸಾಮರ್ಥ್ಯಕ್ಕೆ ಅನುಗುಣವಾಗಿ ನಮ್ಮಲ್ಲಿರುವ ದೊಡ್ಡ ಮನಸ್ಸು ,ವ್ಯಕ್ತಿತ್ವ,ಸೇವಾ ಮನೋಭಾವನೆ ಇರುವುದರಿಂದ ನಾವು ಇಂದು ಮೇಲ್ದರ್ಜೆಗೆ ಏರಿದವರು . ಸಮಾಜದಲ್ಲಿ ಶಾಂತಿ ಸೌಹಾರ್ದತೆಯಿಂದ ಮನುಷ್ಯತ್ವ ಎಂಬ ಪದಕ್ಕೆ ಅನುಗುಣವಾಗಿ ಬದುಕಿ ನಾವು ಸಮಾಜಕ್ಕೆ ಮಾದರಿಯಾಬೇಕು , ಜೀವನದಲ್ಲಿ ತೃಪ್ತಿ ಎಂಬುದು ಇದ್ದರೆ ದುರಾಸೆ ಬರುವುದಿಲ್ಲ ಹಾಗೂ ಜೀವನ ಸಮಾಧಾನಕರವಾಗಿರುತ್ತದೆ. ವ್ಯಕ್ತಿಯ ಮೌಲ್ಯ ಮಾಪನ ಅವನ ಚಹರೆ ಅಥವಾ ವಸ್ತ್ರದಿಂದ ಕಾಣುವುದಿಲ್ಲ ಮನಸ್ಸು ಮತ್ತುಅವನ ಸೇವಾ ಕಾರ್ಯ ,ಧರ್ಮ ಕಾರ್ಯದಲ್ಲಿ ಕಾಣಬೇಕು . ಧನಾತ್ಮಕ ಚಿಂತನೆಯನ್ನು ಬೆಳೆಸಿಕೊಂಡಾಗ ಅದರ ಬಗ್ಗೆ ತಿಳಿದುಕೊಳ್ಳಲು ಸಾಧ್ಯ. ಶಾಂತಿ ಸೌಹಾರ್ದತೆ ಸಮಾಜದಲ್ಲಿ ನೆಲೆಯಾದರೆ ದೇಶ ಸದೃಡವಾಗಲು ಸಾಧ್ಯ .ಈ ನಿಟ್ಟಿನಲ್ಲಿ ನಾವು ಮುಂದುವರಿಯಬೇಕು .ನಮ್ಮ ಬಂಟ ಸಮುದಾಯ ಇಂದು ಎಲ್ಲೇ ಇದ್ದರು ಯಾವುದೇ ಕ್ಷೇತ್ರದಲ್ಲಿ ಇದ್ದರೂ ಸಾಧನೆ ಮಾಡಿ ಒಂದಂಶವನ್ನು ಸಮಾಜಕ್ಕಾಗಿ ಅರ್ಪಿಸಿಕೊಂಡವರು ಎಂದು ಕಾರ್ಕಳ ಉದಯ ಕೃಷ್ಣ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಉದಯ್ ಶೆಟ್ಟಿ ಮುನಿಯಾಲ್ ನುಡಿದರು .

ಬಂಟರ ಸಂಘ ಪಿಂಪ್ರಿ- ಚಿಂಚ್ವಾಡ್ ಇದರ ವಾರ್ಷಿಕೊತ್ಸವನ ಸಮಾರಂಭವು ಮಾರ್ಚ್ 6 ರಂದು ನಿಗ್ಡಿಯ ಜಿ .ಡಿ. ಮದ್ಗುಲ್ಕರ್ ನಾಟ್ಯಗೃಹದಲ್ಲಿ ಜರಗಿತು . ಈ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿದ ಉದಯ ಶೆಟ್ಟಿಯವರು ಸಮಾಜ ಸೇವೆ ,ಸಾರ್ವಜನಿಕ ಸೇವೆಗಾಗಿ ನಾವು ಸಮಾಜದಲ್ಲಿ ಗುರುತಿಸಿಕೊಂಡಿದ್ದೇವೆ . ಕಾರ್ಯ ಯಾವುದೇ ಇರಲಿ ಸಮಾಜಕ್ಕಾಗಿ ಧನಾತ್ಮಕ ಚಿಂತನೆ ನಮ್ಮಲ್ಲಿಯ ಹೃದಯದ ವೈಶಾಲ್ಯತೆಯನ್ನು ಬೆಳೆಸುತ್ತದೆ .ಪಿಂಪ್ರಿ - ಚಿಂಚ್ವಾಡ್ ಬಂಟರ ಸಂಘದ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತುಂಬಾ ಖುಷಿಯಾಗಿದೆ ,ಸಮಾಜದ ಬದಲಾವಣೆಯ ಜೊತೆ ನಾವು ಕೂಡಾ ಹೇಗೆ ಬದಲಾಗಿ ಕೊಂಡು ಬಂದಿದ್ದೇವೆ ಎಂಬುದನ್ನು ಉತ್ತಮ ಸಾಂಸ್ಕೃತಿಕ ರೂಪಕದಲ್ಲಿ ಇಲ್ಲಿ ತೋರಿಸಿಕೊಟ್ಟಿದ್ದಾರೆ .ಪಿಂಪ್ರಿ ಬಂಟರ ಸಂಘ ಸಮಾಜದ ಅಭಿವೃದ್ಧಿಗೋಸ್ಕರ ಮತ್ತು ಸಮಾಜ ಬಾಂಧವರ ಬೆಳವಣಿಗೆಗಾಗಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದು ಮುಂದೆ ಸಂಘದ ಭವನ ನಿರ್ಮಾಣವಾಗಿ ಮತ್ತಷ್ಟು ಬೆಳವಣಿಗೆ ಕಾಣಲಿ . ನನ್ನ ಸಹಕಾರ ಕೂಡಾ ನಿಮ್ಮೊಂದಿಗೆ ಇರಲಿದೆ . ನನಗೆ ಇಲ್ಲಿ ಪ್ರೀತಿಯಿಂದ ಸನ್ಮಾನ ಮಾಡಿ ಗೌರವಿಸಿದ್ದೀರಿ. ಚಿರಋಣಿಯಾಗಿದ್ದೇನೆ ಎಂದರು.

ಪಿಂಪ್ರಿ - ಚಿಂಚ್ವಾಡ್ ಬಂಟರ ಸಂಘದ ಅಧ್ಯಕ್ಷರಾದ ಜಗದೀಶ್ ಶೆಟ್ಟಿ ಯವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಗೌರವ ಅತಿಥಿ ಪನ್ವೇಲ್ ಮುನ್ಸಿಪಲ್ ಕಾರ್ಪೊರೇಶನ್ ನಗರ ಸೇವಕ ಸಂತೋಷ್ ಶೆಟ್ಟಿ ,ಸಂಘದ ನಿಕಟಪೂರ್ವ ಅಧ್ಯಕ್ಷ ರಾಕೇಶ್ ಶೆಟ್ಟಿ ಬೆಳ್ಳಾರೆ , ಉಪಾಧ್ಯಕ್ಷರುಗಳಾದ ಪ್ರಸಾದ್ ಶೆಟ್ಟಿ ,ಹರೀಶ್ ಶೆಟ್ಟಿ ಕುರ್ಕಾಲ್ ,ಪ್ರಧಾನ ಕಾರ್ಯದರ್ಶಿ ರವಿ ಶೆಟ್ಟಿ , ಕಾರ್ಯಾಧ್ಯಕ್ಷರುಗಳಾದ ಲೀಲಾಧರ್‌ಶೆಟ್ಟಿ ,ಮಹೇಶ್ ಎಸ್ . ಶೆಟ್ಟಿ ,ಕೋಶಾಧಿಕಾರಿ ದಿನೇಶ್ ಶೆಟ್ಟಿ ಉಜಿರೆ , ಸಮಾಜ ಕಲ್ಯಾಣ ಮತ್ತು ಶಿಕ್ಷಣ ಸಮಿತಿಯ ಕಾರ್ಯಾಧ್ಯಕ್ಷ ಸುಧಾಕರ ಶೆಟ್ಟಿ ಪೆಲತ್ತೂರು, ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷ ರಾಜೇಶ್ ಶೆಟ್ಟಿ , ಮಹಿಳಾ ವಿಬಾಗದ ಕಾರ್ಯಾಧ್ಯಕ್ಷೆ ಪ್ರಭಾ ಎಸ್ .ಶೆಟ್ಟಿ , ಕ್ರೀಡಾ ಸಮಿತಿಯ ಕಾರ್ಯಾಧ್ಯಕ್ಷ ಜಯ ಶೆಟ್ಟಿ ರೆಂಜಾಳ , ಯುವ ವಿಭಾಗದ ಕಾರ್ಯಾಧ್ಯಕ್ಷ ಶುಭಂ ಶೆಟ್ಟಿ , ಕಾರ್ಯಾಧ್ಯಕ್ಷೆ ಅನ್ವಿತಾ ವೈ ಶೆಟ್ಟಿಯವರು ಉಪಸ್ಥಿತರಿದ್ದರು .

ಕಾರ್ಯಕ್ರಮದ ಮೊದಲಿಗೆ ವೇದಿಕೆಯಲ್ಲಿದ್ದ ಅತಿಥಿ ಗಣ್ಯರು.ಸಂಘದ ಅಧ್ಯಕ್ಷರು ,ಪದಾಧಿಕಾರಿಗಳು ದೀಪ ಪ್ರಜ್ವಲಿಸಿ , ಕಲ್ಪವೃಕ್ಷದ ಹೂ ಅರಳಿಸಿ ವಾರ್ಷಿಕೋತ್ಸವ ಸಮಾರಂಭಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಪಿಂಪ್ರಿ -ಚಿಂಚ್ವಾಡ ಬಂಟರ ಸಂಘದ ಮಾಜಿ ಅಧ್ಯಕ್ಷರುಗಳಾದ ವಿಶ್ವನಾಥ್ ಡಿ.ಶೆಟ್ಟಿ ,ಎರ್ಮಾಳ್ ಸೀತಾರಾಮ್ ಶೆಟ್ಟಿ ,ಮಹೇಶ್ ಹೆಗ್ಡೆ, ವಿಜಯ್ ಶೆಟ್ಟಿ ಬೋರ್ಕಟ್ಟೆ ಯವರು ಉಪಸ್ಥಿತರಿದ್ದರು .

ನಿಕಟ ಪೂರ್ವ ಅಧ್ಯಕ್ಷ ರಾಕೇಶ್ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು . ಸಂಘದ ವಾರ್ಷಿಕ ಕಾರ್ಯ ಚಟುವಟಿಕೆಗಳ ವರದಿಯನ್ನು ಅವಿನಾಶ್ ಶೆಟ್ಟಿ ಹಾಗೂ ಮಹಿಳಾ ವಿಭಾಗದ ವರದಿಯನ್ನು ದೀಪಾ ಪಿ .ಶೆಟ್ಟಿ ಸಭೆಯಲ್ಲಿ ಮಂಡಿಸಿದರು . ಅತಿಥಿ ಗಣ್ಯರನ್ನು ಅಧ್ಯಕ್ಷರಾದ ಜಗದೀಶ್ ಶೆಟ್ಟಿ ಮತ್ತು ಪದಾಧಿಕಾರಿಗಳು ಪುಷ್ಪ ಗುಚ್ಛ ನೀಡಿ ಗೌರವಿಸಿದರು , ಮೀರಾ -ಭಾಯಿಂದರ್ ಜಿಲ್ಲಾ ಬಿ ಜೆ ಪಿ ಉಪಾಧ್ಯಕ್ಷ ಉದಯ್ ಶೆಟ್ಟಿ ಪೆಲತ್ತೂರ್‌ಹಾಗೂ ಪುಣೆ ಪಿಂಪ್ರಿ -ಚಿಂಚ್ವಾಡ್‌ನ ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರುಗಳು ,ಪದಾಧಿಕಾರಿಗಳನ್ನು ಗೌರವಿಸಲಾಯಿತು .


ಪನ್ವೇಲ್ ಮುನ್ಸಿಪಲ್ ಕಾರ್ಪೊರೇಶನ್‌ನ ನಗರ ಸೇವಕರಾದ ಸಂತೋಷ್ ಶೆಟ್ಟಿ ಅವರನ್ನು ಸನ್ಮಾನಿಸಿದಾಗ

ಸನಾತನ ಹಿಂದೂ ಧರ್ಮಿಗಳು ,ದೇಶ ಪ್ರೇಮಿಗಳು ಅದ ನಮಗೆ ಸಮಾಜ ಪ್ರೇಮ ಕೂಡಾ ಮುಖ್ಯ .ಹಿಂದುತ್ವದ ಬೇರು ,ನಮ್ಮ ಸಂಸ್ಕೃತಿ , ಕಲೆಯ ನೆಲೆಯಲ್ಲಿ ನಮ್ಮಲ್ಲಿ ದೇಶ ಪ್ರೇಮ ಕೂಡಾ ಇರಲಿ .ನಮ್ಮ ಬಂಟ ಸಮಾಜದ ಅಸ್ತಿತ್ವವನ್ನು ಎಲ್ಲ ಹೋದರೂ ತೋರಿಸಿಕೊಟ್ಟವರು ನಾವುಗಳು . ಮಹಾರಾಷ್ಟ್ರದ ಮಣ್ಣಿನ ಮೇಲಿನ ಪ್ರೀತಿ ಮತ್ತು ಮರಾಠಿಗರು ನೀಡುವ ಪ್ರೀತಿ ವಿಶ್ವಾಸಕ್ಕೆ ಧಕ್ಕೆ ಬಾರದಂತೆ , ಯಾವುದೇ ರೀತಿಯ ಅಡತಡೆ ಬಂದರೂ ಎದೆ ತಟ್ಟಿ ಎದುರಿಸಿ ನಿಂತು ನಮ್ಮ ಸಮಾಜದ ಶಕ್ತಿಯಾಗಿ ಬೆಳೆದುನಿಂತು ಸಮಾಜದ ಸೇವೆಯಲ್ಲಿದ್ದೇವೆ .ಧಾರ್ಮಿಕ, ಸಾಮಾಜಿಕ,ಶೈಕ್ಷಣಿಕ ,ವೈದ್ಯಕೀಯ ,ರಾಜಕೀಯ ,ಸಾಂಸ್ಕೃತಿಕ ,ಕಲಾ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಇರುವ ನಮ್ಮ ಸಮಾಜ,ನಮ್ಮ ಬಾಂಧವರಿಗಾಗಿ ಅದೇ ರೀತಿಯ ಪ್ರೋತ್ಸಾಹ ,ಸಹಕಾರ ಕೂಡಾ ನೀಡುತಿದ್ದೇವೆ. ಇಂದಿನ ಕಾಲಘಟ್ಟದಲ್ಲಿ ಪ್ರತಿಯೊಬ್ಬ ನಾಗರಿಕರೂ ದೇಶದ ಅಭಿವೃದ್ಧಿ ,ಶಾಂತಿ ಸೌಹಾರ್ದತೆ ,ಸಾಂಸ್ಕೃತಿಕ ಪರಂಪರೆಯನ್ನು ಕಾಪಾಡುವ ಮೂಲಕ ದೇಶ ಭಕ್ತಿಯನ್ನು ತೋರಬೇಕು .ಇದು ನಮ್ಮ ತಾಯ್ನಾಡಿನ ಮೇಲಿನ ಭಕ್ತಿ , ಶ್ರೇಷ್ಠತೆಯ ಒಲವು ,ಮತ್ತು ತ್ಯಾಗ ಮನೋಭಾವವನ್ನು ತೋರಿಸಿಕೊಡುತ್ತದೆ .ಅದಕ್ಕೆ ಬದ್ದರಾಗಿ ನಾವು ನಡೆಯೋಣ . ನಮ್ಮ ನಾಡಿನ ಕಲೆ ಸಂಸ್ಕೃತಿಯನ್ನು ಬೆಳೆಸಿ ಪೋಷಿಸುತಿರುವ ಪಿಂಪ್ರಿ- ಚಿಂಚ್ವಾಡ್ ಬಂಟರ ಸಂಘದ ಸಾಂಸ್ಕೃತಿಕ ಕಾರ್ಯಕ್ರಮ ಬಹಳ ಸೊಗಸಾಗಿ ನಡೆದಿದೆ. ಮನಸ್ಸಿಗೆ ಆನಂದವಾಗಿದೆ .ನಾನು ಮೊದಲಬಾರಿಯಾಗಿ ಪಿಂಪ್ರಿ -ಚಿಂಚ್ವಾಡ್ ಬಂಟರ ಸಂಘದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೇನೆ . ನಿಮ್ಮ ಪ್ರೀತಿ ನೀಡಿದ ಗೌರವ ಸನ್ಮಾನ ಮನ ತುಂಬಿ ಬಂತು . ಸಂಘದ ಅಭಿವೃದ್ಧಿಗೆ ಶುಭ ಹಾರೈಸುತ್ತೇನೆ.

**: ಸಂತೋಷ್ ಶೆಟ್ಟಿ , ನಗರ ಸೇವಕರು ,ಪನ್ವೇಲ್ ಮುನ್ಸಿಪಲ್ ಕಾರ್ಪೊರೇಶನ್.**

ಸಮಾಜದ ಸಂಘದ ಕಾರ್ಯಕ್ರಮ ಎಂದಾಗ ನಮ್ಮ ಎಲ್ಲಾ ಬಾಂಧವರ ಕೂಡುವಿಕೆ ಮತ್ತು ಸಂಭ್ರಮ .ಸಂಘ ಸ್ಥಾಪನೆಯ ಉದ್ದೇಶ ಏನಿದೆಯೋ ಅದನ್ನು ಮನದಲ್ಲಿಟ್ಟುಕೊಂಡು ಸಮಾಜ ಬಾಂಧವರ ಕಷ್ಟ ಸುಖಗಳಲ್ಲಿ ಬಾಗಿಯಾಗುತ್ತ ಸಮಾಜಾಭಿವೃದ್ಧಿಗೆ ಒತ್ತುನೀಡಿ ಸಂಘಟನೆಯನ್ನು ಬಲ ಪಡಿಸುವ ಕಾರ್ಯ ಎಲ್ಲರಿಂದಲೂ ಆಗಬೇಕು .ನಮ್ಮ ಪಿಂಪ್ರಿ -ಚಿಂಚ್ವಾಡ್ ಬಂಟರ ಸಂಘದ ಮೂಲಕ ಸಮಾಜಕ್ಕೆ ಸಹಕಾರಿಯಾಗುವ ಹಲವಾರು ಸೇವಾ ಕಾರ್ಯಗಳು ನಡೆಯುತ್ತಾ ಬರುತಿದೆ . ಧಾರ್ಮಿಕ , ಸಾಂಸ್ಕೃತಿಕ ,ಕಲೆ ,ಕ್ರೀಡಾ ,ಶೈಕ್ಷಣಿಕ ಸೇವಾ ಕಾರ್ಯಗಳು ನಡೆಯುತಿದ್ದು . ಕಷ್ಟ ಕಾಲದಲ್ಲಿ ಆಶಕ್ತ ಕುಟುಂಬಗಳಿಗೆ ಸಹಾಯ ಹಸ್ತ ನೀಡುವಲ್ಲಿ ,ಪ್ರತಿಭಾವಂತರಿಗೆ ಪ್ರೋತ್ಸಾಹ ,ಸಾಧಕರಿಗೆ ಗೌರವ ನೀಡುವಲ್ಲಿ ಸಂಘ ಶ್ರಮಿಸುತಿದೆ . ಮಾಜಿ ಅಧ್ಯಕ್ಷರುಗಳು , ದಾನಿಗಳು ತುಂಬು ಮನಸ್ಸಿನಿಂದ ಸಹಕಾರ ಪ್ರೋತ್ಸಾಹ ನೀಡಿ ಸಂಘವನ್ನು ಬೆಳೆಸಿದ್ದಾರೆ .ಸಮಿತಿಯ ಪದಾಧಿಕಾರಿಗಳ ನಿಸ್ವಾರ್ಥ ಸೇವೆ ,ಮಹಿಳಾ ವಿಭಾಗ ,ಯುವ ವಿಭಾಗದ ಸಹಕಾರದಿಂದ ಉತ್ತಮ ಕಾರ್ಯಕ್ರಮಗಳ ಮೂಲಕ ನಮ್ಮ ವಿಶೇಷತೆಯ ಕೆಲವು ಕಾರ್ಯಕ್ರಮಗಳು ನಡೆದಿದೆ . ಈ ವಾರ್ಷಿಕೋತ್ಸವಕ್ಕೆ ಅತಿಥಿಗಳಾಗಿ ಬಂದ ಸಮಾಜದ ಗಣ್ಯರು ಮೌಲ್ಯಯುತವಾದ ಹಿತನುಡಿಗಳನ್ನೂ ನೀಡಿ ಪ್ರೋತ್ಸಾಹಿಸಿದ್ದಾರೆ . ಶಿಸ್ತು ಬದ್ಧವಾಗಿ ಕಾರ್ಯಕ್ರಮ ನಡೆಯುವಲ್ಲಿ ಪ್ರೋತ್ಸಾಹ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದಳನ್ನು ಅರ್ಪಿಸುತ್ತೇನೆ.

**: ಜಗದೀಶ್ ಶೆಟ್ಟಿ -ಅಧ್ಯಕ್ಷರು ಬಂಟರ ಸಂಘ ಪಿಂಪ್ರಿ- ಚಿಂಚ್ವಾಡ್.**

ಮುಖ್ಯ ಅತಿಥಿಗಳಾದ ಉದಯ್ ಶೆಟ್ಟಿ ಮುನಿಯಾಲ್ ಮತ್ತು ಗೌರವ ಅತಿಥಿಗಳಾದ ಸಂತೋಷ್ ಶೆಟ್ಟಿಯವರನ್ನು ಶಾಲು ,ಹಾರ , ಸ್ಮರಣಿಕೆ ,ಭಕ್ತಿ ಶಕ್ತಿ ಪ್ರತಿಮೆ ನೀಡಿ ಸಂಘದ ವತಿಯಿಂದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಸನ್ಮಾನಿಸಿದರು ,ಇವರ ಪರಿಚಯವನ್ನು ಕ್ರಮವಾಗಿ ಅನುಸೂಯ ಎಸ್ ಶೆಟ್ಟಿ ಮತ್ತು ಮಲ್ಲಿಕಾ ಡಿ .ಶೆಟ್ಟಿಯವರು ಓದಿದರು

ಎರ್ಮಾಳ್ ತೆಂಕ ಬಡ ಕಂಬಳದ ಆಯೋಜಕರಲ್ಲಿ ಪ್ರಮುಖರು ಹಾಗೂ ಕಂಬಳ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ ಹಾಗೂ ಎರ್ಮಾಳ್ ಕಂಬಳದಲ್ಲಿ ಪ್ರಥಮ ಬಂಗಾರ ಪದಕ ಪಡೆದ ನಮ್ಮ ಸಂಘದ ಪ್ರಮುಖರುರಾದ ಪುಚ್ಚೊಟ್ಟು ಬೀಡು ಎರ್ಮಾಳ್ ಬಾಲಚಂದ್ರ ಶೆಟ್ಟಿ ಹಾಗೂ ಸಂಘದ ಮಾಜಿ ಅಧ್ಯಕ್ಷರಾದ ಸಮಾಜ ಸೇವಕ ಸೀತಾರಾಮ್ ಶೆಟ್ಟಿ ಎರ್ಮಾಳ್‌ರವರನ್ನು ಅತಿಥಿ ಗಣ್ಯರ ಸಮ್ಮುಖದಲ್ಲಿ ಸತ್ಕರಿಸಲಾಯಿತು . ವೇದಿಕೆಯಲ್ಲಿದ್ದ ಗಣ್ಯರು ಸಮಾಜಕ್ಕೆ ಮತ್ತು ಸಮಾಜ ಸೇವೆಗೆ ಉತ್ತೇಜನ ನೀಡುವಂತಹ ನುಡಿಗನ್ನಾಡಿದರು .ಈ ಬಾರಿ ಬಂಟ್ಸ್ ಒಲಿಂಪಿಕ್ ಕ್ರೀಡಾ ಕೂಟವನ್ನು ಯಶಸ್ವಿಯಾಗಿ ಆಯೋಜಿಸುವಲ್ಲಿ ಕೆಲಸ ಮಾಡಿದ ಯುವ ವಿಬಾಗದ ಪದಾಧಿಕಾರಿಗಳನ್ನು ಸಂಘದ ವತಿಯಿಂದ ಸತ್ಕರಿಸಲಾಯಿತು . ಇವರ ವರದಿಯನ್ನು ಸುಧಾಕರ್ ಶೆಟ್ಟಿ ಪೇಲತ್ತೂರ್ ಓದಿದರು.

ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಸುಧಾಕರ್‌ಶೆಟ್ಟಿ ಪೆಲತ್ತೂರು ರವರ ನಿರ್ದೇಶನದಲ್ಲಿ ಸಮಾಜದ ಏಳಿಗೆಯ ಮತ್ತು ಸಮಾಜ ಸೇವೆಯ ಬಗ್ಗೆ ಅರ್ಥಪೂರ್ಣ ಸಾಂಸ್ಕೃತಿಕ ಕಥಾ ನೃತ್ಯ ವೈಭವ ರೂಪಕ ನಡೆಯಿತು .

ಹೆಚ್ಚಿನ ಸಂಖ್ಯೆಯ ಬಂಟ ಸಮಾಜ ಭಾಂದವರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡರು .ಪಿಂಪ್ರಿ ಚಿಂಚ್ವಾಡ್ ಬಂಟರ ಸಂಘದ ಮಾಜಿ ಅಧ್ಯಕ್ಷರುಗಳು ,ಹಿರಿಯರು , ಧಾನಿಗಳು ,ಸಮಿತಿ ಪದಾಧಿಕಾರಿಗಳು ,ಮಹಿಳಾ ವಿಭಾಗದವರು,ಯುವ ವಿಭಾಗದ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಿದರು . ಕಾರ್ಯಕ್ರಮದ ನಂತರ ತುಳುನಾಡ ಶೈಲಿಯ ಪ್ರೀತಿ ಭೋಜನ ನಡೆಯಿತು . ಅರ್ಪಿತಾ ಪಿ ಶೆಟ್ಟಿ ಅವಿನಾಶ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು . ರಾಜೇಶ್ ಶೆಟ್ಟಿ ಯವರು ವಂದಿಸಿದರು.

# ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ನಾಲ್ಕನೇ ದಿನದ ಸಮಾರಂಭ

## ಕ್ಷೇತ್ರದ ಭಗವದ್ಭಕ್ತರಿಗೆ ಸಕಲ ಸೌಲಭ್ಯ ನೀಡಲು ಸರ್ವ ಪ್ರಯತ್ನ : ವೇದಪ್ರಕಾಶ್ ಎಂ. ಶ್ರೀಯಾನ್


ಧರ್ಮಪಾಲ ಯು ದೇವಾಡಿಗ, ಎಲ್. ವಿ. ಅಮೀನ್ ಮತ್ತು ಜಯ ಸಾಲ್ಯಾನ್ ಅವರನ್ನು ಸನ್ಮಾನಿಸಿದಾಗ


ಸೂರ್ಯಕಾಂತ್ ಜಯ ಸುವರ್ಣರಿಗೆ ಗೌರವ


ಸಸಿಹಿತ್ಲು ಗುಲಾಬಿ ಲೀಲಯ್ಯ ಕೋಟ್ಯಾನ್ ಅವರನ್ನು ಸನ್ಮಾನಿಸಿದಾಗ


ಬ್ರಹ್ಮಕಲಶೋತ್ಸವ ಮುಂಬಯಿ ಸಮಿತಿಯ ಅಧ್ಯಕ್ಷ ವೇದಪ್ರಕಾಶ್ ಎಂ. ಶ್ರೀಯಾನ್ ಮತ್ತು ಕವಿತಾ ದಂಪತಿಯನ್ನು ಬೆಳ್ಳಿ ಕಿರೀಟದೊಂದಿಗೆ ಸನ್ಮಾನಿಸಿದಾಗ


ಸುನಿಲ್ ಬಂಗೇರ ಮುಂಬಯಿ ಅವರನ್ನು ಸನ್ಮಾನಿಸಿದಾಗ


ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿಯವರಿಗೆ ಗೌರವ

(ಚಿತ್ರ, ವರದಿ : ದಿನೇಶ್ ಕುಲಾಲ್)

ಮಂಗಳೂರು, ಮಾ.8- ಸಸಿಹಿತ್ಲು ಶ್ರೀ ಭಗವತೀ ಮಾತೆಯ ಪಾದಚರಣದಲ್ಲಿ ಜನಿಸಿ ಬೆಳೆದವ ನಾನು. ಮಾತೆ ಭಗವತಿಯ ಅಪ್ಪಣೆಯಂತೆ ನನಗೆ ಜನ್ಮ ನೀಡಿದ ತಾಯಿ ಮಾತೆಯೆ ಸಂದೇಶದಂತೆ ಭಗವತೀ ಮಾತೆಯ ಸೇವೆ ಮಾಡುವ ಭಾಗ್ಯ ನನಗೆ ದೊರಕಿದೆ. ಭಗವತಿಯ ದರ್ಶನ ಪಡೆಯಲು ಇಲ್ಲಿಗೆ ದೂರದಿಂದ ಬರುವ ಭಕ್ತರ ಅನುಕೂಲಕ್ಕಾಗಿ ಯಾತ್ರಿ ನಿವಾಸ ಮತ್ತು ಸಮುದಾಯ ಭವನದ ಹಾಗೂ ಇತರ ಸೌಲಭ್ಯದ ಅಗತ್ಯವಿದ್ದು ಈ ಬಗ್ಗೆ ಡಾ. ಜಿ. ಶಂಕರ್ ಅವರಲ್ಲಿ ಮಾತನಾಡಿದ್ದು ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ನಾವು ಪ್ರಯತ್ನಿಸುತ್ತೇವೆ, ಅದಕ್ಕೆ ಅವರು ಭರವಸೆ ನೀಡಿದ್ದು ,ಕ್ಷೇತ್ರದ ಭಗವದ್ಭಕ್ತರಿಗೆ ಸಕಲ ಸೌಲಭ್ಯ ನೀಡಲು ಸರ್ವ ಪ್ರಯತ್ನ ಮಾಡುವ ಪ್ರಯತ್ನವನ್ನು ಊರಿನವರು ಹಾಗೂ ಭಕ್ತರು ಪ್ರಯತ್ನ ಪಡುವಲ್ಲಿ ಶ್ರಮಿಸುತ್ತೇವೆ ಎಂದು ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸವ ಮುಂಬಯಿ ಸಮಿತಿಯ ಅಧ್ಯಕ್ಷ ವೇದಪ್ರಕಾಶ್ ಎಂ. ಶ್ರೀಯಾನ್ ನುಡಿದರು.

ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಮಾರಂಭದ ನಾಲ್ಕನೇ ದಿನವಾದ ಮಾರ್ಚ್ 7 ಶನಿವಾರ ರಂದು ನಡೆದ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ವಹಿಸಿದ ಮಾತನಾಡಿದ ಅವರು, ನನ್ನ ತಾಯಿ ಮಾತ್ರವಲ್ಲದೆ ನನ್ನ ಹಿರಿಯ ಸಹೋದರ ಯಶವಂತ ಶ್ರೀಯಾನ್ ಕೂಡಾ ಈ ಕ್ಷೇತ್ರಕ್ಕೆ ವಿಶೇಷ ಸೇವೆಯನ್ನು ಮಾಡಿದ್ದನ್ನು ನೆನಪಿಸುತ್ತಾ ಮುಂಬಯಿಯ ಸಮಿತಿಯ ಎಲ್ಲಾ ಸದಸ್ಯರು ದೇಣಿಗೆ ಸಂಗ್ರಹದ ಗುರಿಯನ್ನು ತಲಪಿಸುವಲ್ಲಿ ತುಂಬಾ ದುಡಿದಿದ್ದಾರೆ. ಅಲ್ಪ ಸಮಯದಲ್ಲಿ ಬ್ರಹ್ಮಕಲಶೋತ್ಸವದ ಹೆಚ್ಚಿನ ಎಲ್ಲಾ ಯೋಜನೆಗಳು ಕಾರ್ಯರೂಪಕ್ಕೆ ಬರಲು ಪ್ರತಿಯೊಬ್ಬರ ಕೊಡುಗೆ ಇದೆ . ಮುಂದೆಯು ಈ ರೀತಿ ಅಮ್ಮನ ಸೇವೆ ಮಾಡುವ ಭಾಗ್ಯ ದೊರೆಯಲಿ ಎಂದರು.

ಮುಂಬಯಿಂದಾಗಮಿಸಿದ ಉದ್ಯಮಿಗಳು ಹಾಗೂ ಸಮಾಜ ಸೇವಕರಾದ ದೇವಾಡಿಗ ಮಹಾಮಂಡಲದ ಅಧ್ಯಕ್ಷ ಧರ್ಮಪಾಲ ಯು ದೇವಾಡಿಗ, ಬಿಲ್ಲವರ ಅಸೋಸಿಯೇಷನ್ ಗೌರವ ಅಧ್ಯಕ್ಷ ಎಲ್. ವಿ. ಅಮೀನ್ ಮತ್ತು ಜಯ ಸಾಲ್ಯಾನ್ ಇವರನ್ನು ವಿಶೇಷವಾಗಿ ಸನ್ಮಾನಿಸಲಾಯಿತು.

ಆ ನಂತರ ಮಾತನಾಡಿದ ಧರ್ಮಪಾಲ ಯು. ದೇವಾಡಿಗ ಅವರು ನನ್ನ ಜೀವನದಲ್ಲಿ ಸುಮಾರು 7 / 8 ಬ್ರಹ್ಮಕಲಶ ನೋಡಿದ್ದೇನೆ. ಇಲ್ಲಿಯೂ ಭಾರೀ ಅದ್ದೂರಿಯಿಂದ ಬ್ರಹ್ಮಕಲಶ ನಡೆಯುತ್ತಿದ್ದೆ. ಚಂದ್ರಶೇಖರ ಬೆಳ್ಚಡ ಹಾಗೂ ವೇದಪ್ರಕಾಶ್ ಶ್ರೀಯಾನ್ ನಂತಹ ಉದ್ಯಮಿಗಳು ತಮ್ಮ ಉದ್ಯಮದೊಂದಿಗೆ ಮಾತೆ ಭಗವತಿಯ ಸೇವೆ ಮಾಡುತ್ತಿದ್ದು ಅವರೆಲ್ಲರನ್ನೂ ದೇವರು ಹರಸಲಿ ಎಂದರು.

ಎಲ್. ವಿ. ಅಮೀನ್ ಅವರು ಮಾತನಾಡುತ್ತಾ, ಈ ಮೊದಲು ನಾನು ಕುದ್ರೋಳಿ ಮತ್ತು ಕನಿಲ ಭಗವತೀ ದೇವಸ್ಥಾನದ ಬ್ರಹ್ಮಕಲಶದಲ್ಲಿ ಭಾಗಿಯಾಗಿದ್ದೆ. ಇದೀಗ ಸಸಿಹಿತ್ಲು ಕ್ಷೇತ್ರದ ಬ್ರಹ್ಮಕಲಶದಲ್ಲಿ ಭಾಗವಹಿಸುವ ಸೌಭಾಗ್ಯ ನನಗೆ ದೊರಕಿದೆ. ಮುಂಬಯಿಂದ ಊರಿಗಾಗಮಿಸಿ ವಿವಿಧ ರೀತಿಯಲ್ಲಿ ಭಗವತಿಯ ಸೇವೆ ಮಾಡಿದವರನ್ನು ಸನ್ಮಾನಿಸಿದ್ದು ಅದನ್ನು ನೋಡುವ ಭಾಗ್ಯ ನನಗೆ ದೊರಕಿದೆ. ತುಳುನಾಡಿನ ಸಸಿಹಿತ್ಲುವಿನ ಸಮುದ್ರ ತೀರದಲ್ಲಿ ಗಂಗಾರತಿಯಾಗುತ್ತಿವುದು ನಿಜಕ್ಕೂ ವಿಶೇಷವಾಗಿದೆ ಎಂದರು.

ಸಸಿಹಿತ್ಲು ಶ್ರೀ ಭಗವತೀ ಕ್ಷೇತ್ರದ ಆಡಳಿತ ಮೊಕ್ತೇಸರ ಗಂಪಮನೆ ಕಟೀಲು ಚಂದ್ರಶೇಖರ ಬೆಳ್ಚಡ ಸ್ವಾಗತಿಸಿದರು.

ಬ್ರಹ್ಮಕಲಶೋತ್ಸವ ಮುಂಬಯಿ ಸಮಿತಿಯ ಅಧ್ಯಕ್ಷ ವೇದಪ್ರಕಾಶ್ ಎಂ. ಶ್ರಿಯಾನ್ ಮತ್ತು ಕವಿತಾ ದಂಪತಿಯನ್ನು ಬೆಳ್ಳಿ ಕಿರೀಟದೊಂದಿಗೆ ವಿಶೇಷವಾಗಿ ಸನ್ಮಾನಿಸಲಾಯಿತು.

ಸಸಿಹಿತ್ಲು ಶ್ರೀ ಭಗವತೀ ತೀಯಾ ಸಂಘ ಮುಂಬಯಿಯ ಗಣ್ಯರನ್ನು ಹಾಗೂ ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸವ ಮುಂಬಯಿ ಸಮಿತಿಯ ಗಣ್ಯರನ್ನು ಮತ್ತು ವಿವಿಧ ರೀತಿಯಲ್ಲಿ ಸೇವೆ ಮಾಡುತ್ತಿರುವ ಭಕ್ತರನ್ನು ಹಾಗೂ ಸುನಿಲ್ ಬಂಗೇರ ಮುಂಬೈ ಇವರನ್ನು ಸನ್ಮಾನಿಸಲಾಯಿತು.

ಸಸಿಹಿತ್ಲು ಗುಲಾಬಿ ಲೀಲಯ್ಯ ಕೋಟ್ಯಾನ್ ಇವರನ್ನು ವಿಶೇಷವಾಗಿ ಗೌರವಿಸಲಾಯಿತು, ಸಂದೀಪ್ ಸಸಿಹಿತ್ಲು ಇವರನ್ನು ಗೌರವಿಸಲಾಯಿತು.

ವೇದಿಕೆಯಲ್ಲಿ ಇತರ ಗಣ್ಯರೊಂದಿಗೆ ಸಸಿಹಿತ್ಲು ಶ್ರೀ ಭಗವತಿ ಕ್ಷೇತ್ರದ ಅನುವಂಶಿಕ ಮೊಕ್ತೇಸರ ಹಾಗೂ ಪ್ರಧಾನ ಅರ್ಚಕರಾದ ಶ್ರೀನಿವಾಸ ಯಾನೆ ಅಪ್ಪು ಪೂಜಾರಿ, ಮೊಗವೀರ ಮಹಾಜನ ಸೇವಾ ಸಮಿತಿಯ ಅಧ್ಯಕ್ಷ ಸಂತೋಷ್ ಪುತ್ರನ್, ಮುಂಬಯಿ ಉದ್ಯಮಿ ಸಿ. ಬಿ. ಕರ್ಕೇರ, ಚಂದ್ರಕಾಂತ್ ಎಸ್ ಪುತ್ರನ್, ರವೀಂದ್ರನಾಥ್ ಎಲ್ ಕರ್ಕೇರ, ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿಯ ಮಾಜಿ ಅಧ್ಯಕ್ಷ ಅಜಿತ್ ಸುವರ್ಣ, ಸಸಿಹಿತ್ಲು ಶ್ರೀ ಭಗವತೀ ತೀಯಾ ಸಂಘ ಮುಂಬಯಿಯ ಚಂದ್ರಹಾಸ ಪಾಲನ್, ಭಾರತ್ ಬ್ಯಾಂಕಿನ ಕಾರ್ಯಾಧ್ಯಕ್ಷ ಸೂರ್ಯಕಾಂತ್ ಜಯ ಸುವರ್ಣ, ಚಂದ್ರಶೇಖರ ಸಾಲ್ಯಾನ್, ಅಡ್ಕ ಭಗವತೀ ಕ್ಷೇತ್ರದ ಕೃಷ್ಣ ಕಾರ್ನವರ್, ವಾಮನ್ ಇಡ್ಯಾ, ಮತ್ತು ಬ್ರಹ್ಮಕಲಶೋತ್ಸವ ಸಮಿತಿಯ ಉಪಸಮಿತಿಗಳ ಸುನಿಲ್ ಆಳ್ವ, ವಿನಯಾನಂದ ಜೋಗಿ, ಜಗನ್ನಾಥ್ ಆರ್. ಕೋಟ್ಯಾನ್, ಅರವಿಂದ ಸಾಲ್ಯಾನ್, ಶೋಭೇಂದ್ರ ಸಸಿಹಿತ್ಲು, ವಿಕೆ ಯಾದವ್, ಎಸ್ ಅರ್ ಪ್ರದೀಪ್ ಮೊದಲಾದವರು ಉಪಸ್ಥಿತರಿದ್ದರು. ನವೀನ್ ಶೆಟ್ಟಿ ಎಡ್ಮೆಮಾರ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಸಂಜೆ ಪದ್ಮನಾಭ ಸಸಿಹಿತ್ಲು ಮುಂಬಯಿ ಬಳಗದವರಿಂದ ಗಾನಸುಧೆ, ವಿದುಷಿ ಚಿತ್ರಾಕ್ಷೀ ಅಜಿತ್ ಕುಮಾರ್ ಬಳಗದವರಿಂದ ನೃತ್ಯರೂಪಕ ಶಕ್ತಿ ಪೀಠ, ರಾತ್ರಿ ತ್ರಿನೇತ್ರ ಕಲಾವಿದರು ಮಂಗಳೂರು ಇವರಿಂದ 'ಅಕ್ಕಸದ ರಕ್ಷಸೆ' ನಾಟಕ ಪ್ರದರ್ಶನಗೊಂಡಿತು.

### ಭಗವತೀ ಸೃಷ್ಟಿಯ ಮೂಲರೂಪ : ರಾಜಶೇಖರಾನಂದ ಸ್ವಾಮೀಜಿ

ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿಯವರು ಇತರ ಗಣ್ಯರೊಂದಿಗೆ ದೀಪ ಬೆಳಗಿಸಿ ಚಾಲನೆ ನೀಡಿ ಆಶೀರ್ವದಿಸುತ್ತಾ, ಅನುಕೂಲಕ್ಕೆ ತಕ್ಕಂತೆ ದೈಬಿತ್ತಿಲು ಸಸಿಹಿತ್ಲು ಎಂಬುದಾಗಿ ಪುನರ್ನಾಮಕರಣ ಗೊಂಡಿದೆ. ಕೇರಳದ ಮೂಲಕ ಆಗಮಿಸಿದ ಭಗವತೀ ಮಹಾತಾಯಿಯಾಗಿ ನಮಗೆ ದೊರಕಿದೆ. ಭಗವಂತನ ರೂಪದಲ್ಲಿರುವ ಭಗವತೀ ಸೃಷ್ಟಿಯ ಮೂಲರೂಪ. ತೀಯ ಸಮಾಜ ಎಂದು ಕರೆಯಲ್ಪಡುವ ಮಲೆಯಾಳಿ ಬಿಲ್ಲವ ಸಮಾಜ ಆರಾಧನಾ ಸಮಾಜದಲ್ಲಿ ಧೀಮಂತ ಸಮಾಜ ಎಂದರು.

# ಸಾವರ್ಕರ್ ಕಟ್ಟಾ ದೇಶಭಕ್ತ; ಹಿಂದುತ್ವದ ಬಗ್ಗೆ ಅವರ ವಿವರಣೆ ಇನ್ನೂ ಪ್ರಸ್ತುತ: ನಿತಿನ್ ಗಡ್ಕರಿ

ನಾಗ್ಪುರ, ಮಾ. 8 – ವಿನಾಯಕ ದಾಮೋದರ್ ಸಾವರ್ಕರ್ ವೈಜ್ಞಾನಿಕ ಸೈದ್ಧಾಂತಿಕ ದೃಷ್ಟಿಕೋನ ಹೊಂದಿರುವ ಕಟ್ಟಾ ದೇಶಭಕ್ತರಾಗಿದ್ದರು ಮತ್ತು ಹಿಂದುತ್ವದ ಬಗ್ಗೆ ಅವರ ವಿವರಣೆ ಇನ್ನೂ ಪ್ರಸ್ತುತ ಮತ್ತು ಉಪಯುಕ್ತವಾಗಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರನ್ನು ಉಲ್ಲೇಖಿಸಿ, ಸಾವರ್ಕರ್ ಅವರನ್ನು ಟೀಕಿಸುತ್ತಿದ್ದ 'ದೊಡ್ಡ ರಾಜಕೀಯ ನಾಯಕ' ಒಬ್ಬರಿಗೆ, ದಂತಕಥೆಯ ಸ್ವಾತಂತ್ರ್ಯ ಹೋರಾಟಗಾರ ಶ್ರೇಷ್ಠರಲ್ಲದಿದ್ದರೆ, ದೇಶದಲ್ಲಿ ಯಾರೂ ಶ್ರೇಷ್ಠರಲ್ಲ ಎಂದು ಒಮ್ಮೆ ಹೇಳಿದ್ದೆ ಎಂದು ಗಡ್ಕರಿ ಹೇಳಿದರು.



ಶನಿವಾರ ಸ್ವಾತಂತ್ರ್ಯ ವೀರ ಸಾವರ್ಕರ್ ಸ್ಮಾರಕ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ (ನಿವೃತ್ತ) ಅವರನ್ನು ಸನ್ಮಾನಿಸಲಾಯಿತು. ಅವರು ಒಬ್ಬ ಕಟ್ಟಾ ದೇಶಭಕ್ತರಷ್ಟೇ ಅಲ್ಲ, ಅತ್ಯುತ್ತಮ ಕವಿ, ತತ್ವಜ್ಞಾನಿ ಮತ್ತು ಇತಿಹಾಸಕಾರರೂ ಆಗಿದ್ದರು. ಆದರೆ, ಮುಖ್ಯವಾಗಿ, ಅವರು ಆದರ್ಶ ಸಮಾಜ ಸುಧಾರಕರಾಗಿದ್ದರು. ಸಾವರ್ಕರ್ ಅವರ ಸೈದ್ಧಾಂತಿಕ ದೃಷ್ಟಿಕೋನವು ವೈಜ್ಞಾನಿಕವಾಗಿತ್ತು. ಅವರು ಹಿಂದುತ್ವದ ಬಗ್ಗೆ ನೀಡಿದ ವಿವರಣೆಯು ಪ್ರಸ್ತುತ ಕಾಲದಲ್ಲಿಯೂ ಬಹಳ ಉಪಯುಕ್ತ ಮತ್ತು ಪ್ರಸ್ತುತವಾಗಿದೆ ಎಂದು ಬಿಜೆಪಿಯ ಹಿರಿಯ ನಾಯಕ ಹೇಳಿದರು.

ಜಾತಿ ವ್ಯವಸ್ಥೆ ಮತ್ತು ಅದರ ವಿಭಜನೆಗಳು ಹಾಗೂ ಹಿಂದೂ ಸಮಾಜದಲ್ಲಿ ಇರುವ ಅಸ್ಪೃಶ್ಯತೆಯನ್ನು ಸಂಪೂರ್ಣವಾಗಿ ನಾಶಪಡಿಸಬೇಕು ಎಂಬುದು ಸಾವರ್ಕರ್ ಅವರ ಸ್ಪಷ್ಟ ಅಭಿಪ್ರಾಯವಾಗಿತ್ತು ಎಂದು ಅವರು ಗಮನಸೆಳೆದರು.

ಯಾವುದೇ ವ್ಯಕ್ತಿ ತನ್ನ ಜಾತಿಯಿಂದ ಶ್ರೇಷ್ಠನಲ್ಲ; ಒಬ್ಬ ವ್ಯಕ್ತಿಯು ತನ್ನ ಗುಣಗಳಿಂದ ಶ್ರೇಷ್ಠನಾಗುತ್ತಾನೆ, ಇದು ಸಾವರ್ಕರ್ ನಂಬಿದ್ದ ನಂಬಿಕೆಯಾಗಿತ್ತು. ಸಾವರ್ಕರ್ ಅವರ ಇಡೀ ಜೀವನವು ತ್ಯಾಗ, ತಪಸ್ಸು ಮತ್ತು ಸಮರ್ಪಣೆಗೆ ಉದಾಹರಣೆಯಾಗಿದೆ. ದೇಶಕ್ಕಾಗಿ ಸಾವರ್ಕರ್ ಅವರಷ್ಟು ತ್ಯಾಗ ಮಾಡಿದ ಕುಟುಂಬ ಇನ್ನೊಂದಿಲ್ಲ ಎಂದು ಅವರು ಪ್ರತಿಪಾದಿಸಿದರು.

ಸಾವರ್ಕರ್ ಒಬ್ಬ ಕಟ್ಟಾ ದೇಶಭಕ್ತರಾಗಿದ್ದರು ಮತ್ತು ಅವರ ಬರಹಗಳು ಹಾಗೂ ಅವರನ್ನು ಆಧರಿಸಿದ ಚಲನಚಿತ್ರವು ಹೆಚ್ಚು ಹೆಚ್ಚು ಜನರನ್ನು ತಲುಪಬೇಕು ಎಂದು ಗಡ್ಕರಿ ಹೇಳಿದರು.

ಒಬ್ಬ ದೊಡ್ಡ ರಾಜಕೀಯ ನಾಯಕ ಸಾವರ್ಕರ್ ಅವರನ್ನು ಟೀಕಿಸುತ್ತಾರೆ. ಒಮ್ಮೆ ನಾನು ಅವರಿಗೆ ಸಾವರ್ಕರ್ ಬಗ್ಗೆ ಸರಿಯಾಗಿ ಓದಲು ಹೇಳಿದೆ. ಸಂಭಾಷಣೆಯ ಸಮಯದಲ್ಲಿ, ಸಾವರ್ಕರ್ ಶ್ರೇಷ್ಠರಲ್ಲದಿದ್ದರೆ, ಈ ದೇಶದಲ್ಲಿ ಯಾರೂ ಶ್ರೇಷ್ಠರಲ್ಲ ಎಂದು ನಾನು ಅವರಿಗೆ ಹೇಳಿದೆ ಎಂದು ಅವರು ಹೇಳಿದರು.

ನಾನು ಈ ನಾಯಕನಿಗೆ ನೀವು ಸಿದ್ಧಾಂತವನ್ನು ಟೀಕಿಸಬಹುದು ಮತ್ತು ಸಿದ್ಧಾಂತದ ಬಗ್ಗೆ ಭಿನ್ನಾಭಿಪ್ರಾಯಗಳಿರಬಹುದು ಎಂದು ಹೇಳಿದ್ದೆ. ಆದರೆ, ದೇಶಕ್ಕಾಗಿ ಸಾವರ್ಕರ್ ಮತ್ತು ಅವರ ಕುಟುಂಬಕ್ಕಿಂತ ಹೆಚ್ಚಿನ ತ್ಯಾಗ ಮಾಡಿದವರು ಯಾರೂ ಇಲ್ಲ ಎಂದು ಗಡ್ಕರಿ ಹೇಳಿದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಸಾವರ್ಕರ್ ಜೈಲಿನಿಂದ ಹೊರಬರಲು ಬ್ರಿಟಿಷರಲ್ಲಿ ಕ್ಷಮೆಯಾಚಿಸಿದ್ದಾರೆ ಎಂದು ಹಲವಾರು ಬಾರಿ ಹೇಳಿಕೊಂಡಿದ್ದಾರೆ. ಕ್ರಾಂತಿಕಾರಿ ಬಗ್ಗೆ ಮಾಡಿದ ಹೇಳಿಕೆಗಾಗಿ ಕಾಂಗ್ರೆಸ್ ನಾಯಕನ ವಿರುದ್ಧ ಪುಣೆ ನ್ಯಾಯಾಲಯದಲ್ಲಿ ಸಾವರ್ಕರ್ ಮೊಮ್ಮಗ ಮಾನನಷ್ಟ ಪ್ರಕರಣವನ್ನು ದಾಖಲಿಸಿದ್ದಾರೆ.



ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠ ಮತ್ತು ಭಕ್ತರ ನಡುವೆ ಜನಸಂಪರ್ಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ಬಡ ವಿದ್ಯಾರ್ಥಿಗಳಿಗೆ ಶಿಕ್ಷಣ ಸಹಾಯ, ಭಕ್ತರ ವಸತಿ ವ್ಯವಸ್ಥೆಯಲ್ಲಿ ನೆರವು ಅನ್ನಸಂತರ್ಪಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ನರಸಿಂಹ ಮೂರ್ತಿ ದಂಪತಿಗೆ ಇತ್ತೀಚೆಗೆ ಆಂಧ್ರ ಪ್ರದೇಶದ ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಮಠದ ಪೀಠಾಧಿಪತಿಗಳಾದ ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರ ಸಾನಿಧ್ಯದಲ್ಲಿ ಪ್ರತಿಷ್ಠಿತ 'ಶ್ರೀ ಮಂತ್ರಾಲಯ ಪರಿಮಳ ಪ್ರಶಸ್ತಿ 2026' ನೀಡಿ ಗೌರವಿಸಲಾದ ಸಂದರ್ಭ.

# ಪಶ್ಚಿಮ ಏಷ್ಯಾ ಸಂಘರ್ಷದ ನಡುವೆ ಭಾರತ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ;

## ಮೋದಿ 'ಮೌನ' ಟೀಕಿಸಿದ ಸಂಜಯ್ ರಾವುತ್

ಮುಂಬಯಿ, ಮಾ. 8 – ಇರಾನ್ ಮೇಲೆ ಅಮೆರಿಕ-ಇಸ್ರೇಲ್ ಜಂಟಿ ದಾಳಿಯ ನಂತರ ಪಶ್ಚಿಮ ಏಷ್ಯಾದಲ್ಲಿ ಭುಗಿಲೆದ್ದಿರುವ ಯುದ್ಧದ ಎಲ್ಲಾ ಬೆಳವಣಿಗೆಗಳ ಮಧ್ಯೆ ಭಾರತವು ಒಂದು ದೇಶವಾಗಿ 'ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ' ಎಂದು ಶಿವಸೇನಾ (ಯುಬಿಟಿ) ನಾಯಕ ಸಂಜಯ್ ರಾವುತ್ ಭಾನುವಾರ ಹೇಳಿದ್ದಾರೆ.

ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ಮತ್ತು ಇಸ್ರೇಲ್ ಜಾಗತಿಕ ಬೆದರಿಸುವವರಂತೆ ವರ್ತಿಸುತ್ತಿವೆ, ಆದರೆ ನಿನ್ನೆಯವರೆಗೂ ತಮ್ಮ ಶೌರ್ಯದ ಬಗ್ಗೆ ಹೆಮ್ಮೆಪಡುತ್ತಿದ್ದ ಭಾರತದಂತಹ ದೊಡ್ಡ ದೇಶಗಳು ಈ ಬೆದರಿಸುವವರ ಏಜೆಂಟ್‌ಗಳಂತೆ ವರ್ತಿಸುತ್ತಿವೆ ಎಂದು ರಾಜ್ಯಸಭಾ ಸಂಸದರು ಹೇಳಿದರು.

ಶಿವಸೇನಾ (ಯುಬಿಟಿ) ಮುಖವಾಣಿ ಸಾಮ್ನಾದಲ್ಲಿ 'ರೋಖ್ಠೋಕ್' ಎಂಬ ತಮ್ಮ ಸಾಪ್ತಾಹಿಕ ಅಂಕಣದಲ್ಲಿ, ಜ್ವಲಂತ ಸಮಸ್ಯೆಯಾಗಿರುವ ಇರಾನ್ ಯುದ್ಧವನ್ನು ನಿಲ್ಲಿಸುವಲ್ಲಿ ಭಾರತ ಮುಂದಾಳತ್ವ ವಹಿಸಬೇಕಾಗಿತ್ತು ಎಂದು ರಾವುತ್ ಹೇಳಿದ್ದಾರೆ. ಇದು ಭಾರತೀಯ ನಾಯಕತ್ವದ ಟೊಳ್ಳುತನವನ್ನು ಪ್ರಪಂಚದ ಮುಂದೆ ತಂದಿದೆ, ಪ್ರಧಾನಿ ನರೇಂದ್ರ ಮೋದಿ ಬಿಕ್ಕಟ್ಟಿನ ಬಗ್ಗೆ ಒಂದು ಮಾತನ್ನೂ ಮಾತನಾಡಿಲ್ಲ ಎಂದು ಅವರು ಗಮನಸೆಳೆದರು.

ಪಶ್ಚಿಮ ಏಷ್ಯಾದಲ್ಲಿ ಯುದ್ಧ ಭುಗಿಲೆದ್ದಿರುವಾಗ, ಒಂದು ದೇಶವಾಗಿ ಭಾರತವು ಎಲ್ಲಾ ಬೆಳವಣಿಗೆಗಳ ನಡುವೆ ತನ್ನ ಅಸ್ತಿತ್ವವನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂದು ರಾವುತ್ ಹೇಳಿದರು. ಇರಾನ್ ಅನ್ನು 'ಜಿರಳೆ'ಯಂತೆ ಪುಡಿಮಾಡಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಅಭಿಪ್ರಾಯಪಟ್ಟಿದ್ದಾರೆ ಎಂದು ರಾಜ್ಯಸಭಾ ಸಂಸದರು ಹೇಳಿದರು.

ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಖಮೇನಿ ಅವರನ್ನು ಕೊಂದ ನಂತರ, ಯುದ್ಧವು ಮುಗಿಯುತ್ತದೆ ಎಂದು ಅವರು ಭಾವಿಸಿದ್ದರು ಎಂದು ಅವರು ಹೇಳಿದರು.

ಆದರೆ ಅದು ಆಗಲಿಲ್ಲ. ಅನೇಕ ಇರಾನಿನ ನಾಯಕರು, ಮಿಲಿಟರಿ ಸಿಬ್ಬಂದಿ ಕೊಲ್ಲಲ್ಪಟ್ಟರು. ಆದರೂ, ಇರಾನ್ ಇಸ್ರೇಲ್ ವಿರುದ್ಧ ಹೋರಾಡುತ್ತಿದೆ ಮತ್ತು ದಾಳಿ ಮಾಡುತ್ತಿದೆ ಎಂದು ರಾವುತ್ ಹೇಳಿದರು.

ಯುಎಸ್ ಮತ್ತು ಇಸ್ರೇಲ್ ಜಾಗತಿಕ ಬೆದರಿಸುವವರಂತೆ ವರ್ತಿಸುತ್ತಿವೆ ಮತ್ತು ಧೈರ್ಯದ ಬಗ್ಗೆ ಹೆಮ್ಮೆಪಡುವ ಭಾರತದಂತಹ ದೊಡ್ಡ ದೇಶಗಳು ಅವರ ಏಜೆಂಟರಂತೆ ವರ್ತಿಸುತ್ತಿವೆ ಎಂದು ಅವರು ಟೀಕಿಸಿದರು.

# ಬೆಂಗಳೂರು: ಟ್ರಕ್‌ನ ಹಿಂಭಾಗಕ್ಕೆ ಕಾರು ಡಿಕ್ಕಿ; ಮೂವರ ಸಾವು

ಬೆಂಗಳೂರು, ಮಾ. 8 – ಚಲಿಸುತ್ತಿದ್ದ ಟ್ರಕ್‌ನ ಹಿಂಭಾಗಕ್ಕೆ ಕಾರು ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿದ ಘಟನೆ ಭಾನುವಾರ ಮುಂಜಾನೆ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮೃತರಲ್ಲಿ ಮೂವರು 22-23 ವರ್ಷ ವಯಸ್ಸಿನವರಾಗಿದ್ದು, ಕಾರಿನಲ್ಲಿದ್ದ ಮತ್ತೊಬ್ಬ ವ್ಯಕ್ತಿಗೆ ತೀವ್ರ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕನಕಪುರ ಕಡೆಗೆ ಹೋಗುತ್ತಿದ್ದ ಕಾರು ವೇಗವಾಗಿ ಚಲಿಸುತ್ತಿತ್ತು. ಕನಕಪುರ ರಸ್ತೆಯ ರಸ್ತೆಹಂಪ್ ದಾಟಿ ವೇಗವಾಗಿ ಚಲಿಸಿದ ನಂತರ ಚಾಲಕ ನಿಯಂತ್ರಣ ಕಳೆದುಕೊಂಡಿರಬಹುದು, ಇದರಿಂದಾಗಿ ಕಾರು ಮುಂದೆ ಚಲಿಸುತ್ತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಡಿಕ್ಕಿಯ ಪರಿಣಾಮ ಕಾರಿನ ಮುಂಭಾಗ ನಜ್ಜುಗುಜ್ಜಾಗಿದೆ.

ಕಗ್ಗಲೀಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರೆದಿದೆ.

# ಡೊಂಬಿವಲಿ : ಮಹಿಳೆಯರ ಲೆಝೀಮ್ ವಿಶ್ವದಾಖಲೆ





ಡೊಂಬಿವಲಿ, ಮಾ.8- ಅಂತಾರಾಷ್ಟ್ರೀಯ ಮಹಿಳಾ ದಿನ ( ಮಾ.8) ದ ಅಂಗವಾಗಿ ಡೊಂಬಿವಲಿ ಹಾಗೂ ಕಲ್ಯಾಣ ತಾಲ್ಲೂಕಿನ 9,111 ಮಹಿಳೆಯರು ಮತ್ತು ವಿದ್ಯಾರ್ಥಿನಿಯರು ಒಟ್ಟಾಗಿ ಲೆಝೀಮ್ ವಾದನದಲ್ಲಿ ವಿಶ್ವ ದಾಖಲೆ ನಿರ್ಮಿಸಿದ್ದಾರೆ. ಈ ಕಾರ್ಯಕ್ರಮವನ್ನು ಡೊಂಬಿವಲ್ಲಿ ಕರ್ಏಕ ಸಾಂಸ್ಕೃತಿಕ ಪರಿವಾರ್ ಹಾಗೂ ಕಲ್ಯಾಣ ತಾಲ್ಲೂಕು ಶಾರೀರಿಕ ಶಿಕ್ಷಣ ಸಮಿತಿ ಸಂಯುಕ್ತವಾಗಿ ಆಯೋಜಿಸಿತ್ತು.

ಇದಕ್ಕೂ ಮುನ್ನ ಸಾಂಗ್ಲಿ ಜಿಲ್ಲೆಯ 7,338 ಮಹಿಳೆಯರು ಈ ದಾಖಲೆಯನ್ನು ಹೊಂದಿದ್ದರು. ಲಂಡನ್‌ನಿಂದ ಬಂದ ಗಿನ್ನೆಸ್ ವರ್ಲ್ಡ್ ರೆಕಾರ್ಡ್ ಅಧಿಕಾರಿ ಸ್ವಪ್ನೀಲ್ ಡಾಂಗರೇಕರ್ ಅವರು ಹೊಸ ದಾಖಲೆ ಘೋಷಿಸಿ, ಪ್ರಮಾಣಪತ್ರ ಹಾಗೂ ಪದಕವನ್ನು ಸುಹಾಸಿನಿ ರವೀಂದ್ರ ಚವ್ಹಾಣ್ ಅವರಿಗೆ ಹಸ್ತಾಂತರಿಸಿದರು.

ಸಾವಿರಾರು ಪ್ರೇಕ್ಷಕರ ಸಮ್ಮುಖದಲ್ಲಿ ಸಾದರವಾದ ಪ್ರದರ್ಶನದೊಂದಿಗೆ ಮಹಿಳೆಯರು ತಮ್ಮ ಶಕ್ತಿಯನ್ನು ತೋರಿಸಿದರು. ಲೆಝೀಮ್ ನಮ್ಮ ಸಂಸ್ಕೃತಿ, ಅದನ್ನು ಉಳಿಸುವುದು ನಮ್ಮ ಕರ್ತವ್ಯ ಎಂದು ಶಾಸಕ ರವೀಂದ್ರ ಚವ್ಹಾಣ್ ಹೇಳಿದರು. ಭಾರತಮಾತೆಗೆ ಸಮರ್ಪಿಸಿದ ಈ ಸಾಧನೆಯೊಂದಿಗೆ ಡೊಂಬಿವಲಿ ಮಹಿಳೆಯರು ಇತಿಹಾಸ ನಿರ್ಮಿಸಿದ್ದಾರೆ.

# ಸೌದಿ ಅರೇಬಿಯಾದಲ್ಲಿ ಬಂಧಿತರಾಗಿರುವ ಇಬ್ಬರು ನಾಗ್ಪುರ ವ್ಯಕ್ತಿಗಳ ಪರ ಕಾನ್ಸುಲರ್ ನೆರವು ಕೋರಿದ ಮಹಾರಾಷ್ಟ್ರ ಅಲ್ಪಸಂಖ್ಯಾತರ ಆಯೋಗ

ನಾಗ್ಪುರ, ಮಾ. 8 – ಸೌದಿ ಅರೇಬಿಯಾದ ಮಕ್ಕಾದಲ್ಲಿ ಬಂಧಿತರಾಗಿರುವ ನಾಗ್ಪುರದ ವೈದ್ಯ ಮತ್ತು ಉದ್ಯಮಿಯೊಬ್ಬರು ಉಮ್ರಾ ನಿರ್ವಹಿಸಲು ಹೋಗಿದ್ದಕ್ಕಾಗಿ ಮಹಾರಾಷ್ಟ್ರ ರಾಜ್ಯ ಅಲ್ಪಸಂಖ್ಯಾತರ ಆಯೋಗವು ಕಾನ್ಸುಲರ್ ನೆರವು ಕೋರಿದೆ.

ಈ ಇಬ್ಬರ ಕುಟುಂಬಗಳು ತಮ್ಮ ಕಷ್ಟದ ಬಗ್ಗೆ ತಿಳಿಸಿದ ನಂತರ, ಮಹಾರಾಷ್ಟ್ರ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಪ್ಯಾರೆ ಖಾನ್ ಶನಿವಾರ ಸೌದಿ ಅರೇಬಿಯಾದಲ್ಲಿರುವ ಭಾರತದ ರಾಯಭಾರ ಕಚೇರಿಯ ಮುಖ್ಯಸ್ಥರಿಗೆ ಪತ್ರ ಬರೆದಿದ್ದಾರೆ.

ಕಂಪನಿ ಪರವಾನಗಿ ಇಲ್ಲದೆ ದಲ್ಲಾಳಿ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದಾರೆಂದು ಸುಳ್ಳು ಆರೋಪ ಹೊರಿಸಿ ಇಬ್ಬರನ್ನು ಬಂಧಿಸಲಾಗಿದೆ ಎಂದು ಕುಟುಂಬವು ಆಯೋಗಕ್ಕೆ ಬರೆದ ಪತ್ರದಲ್ಲಿ ಹೇಳಿಕೊಂಡಿದೆ.

ನಾಗ್ಪುರದ ಅಬ್ದುಲ್ ಅಸಿಮ್ ಖಾನ್ ಮತ್ತು ಡಾ. ಯಾಹ್ಯಾ ಹುನಾನಿ ಅವರ ಕುಟುಂಬಗಳಿಂದ ಬಂದ ಮಾಹಿತಿಯ ಪ್ರಕಾರ, ಇಬ್ಬರೂ ಮಾರ್ಚ್ 3ರಂದು ಜೆಡ್ಡಾಗೆ ಆಗಮಿಸಿ ಉಮ್ರಾಕ್ಕಾಗಿ ಮಕ್ಕಾಗೆ ಪ್ರಯಾಣ ಬೆಳೆಸಿದರು. ಮಾರ್ಚ್ 4ರಂದು, ಮಸೀದಿ ಅಲ್-ಹರಾಮ್‌ನಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದಾಗ, ನಾಗರಿಕ ಉಡುಪಿನಲ್ಲಿರುವ ವ್ಯಕ್ತಿಗಳು ಅವರನ್ನು ಸಂಪರ್ಕಿಸಿದರು ಮತ್ತು ಅರೇಬಿಕ್ ಭಾಷೆಯಲ್ಲಿ ಮಾತ್ರ ನಡೆಸಿದ ಸಂವಾದದ ಸಮಯದಲ್ಲಿ ತಪ್ಪು ತಿಳುವಳಿಕೆಯ ನಂತರ ಅವರನ್ನು ವಶಕ್ಕೆ ತೆಗೆದುಕೊಳ್ಳಲಾಯಿತು, ಅದು ಅವರಿಗೆ ಅರ್ಥವಾಗಲಿಲ್ಲ ಎಂದು ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷರು ಪತ್ರದಲ್ಲಿ ತಿಳಿಸಿದ್ದಾರೆ.

ಈ ಇಬ್ಬರು ವ್ಯಕ್ತಿಗಳನ್ನು ಪ್ರಸ್ತುತ ಅಲ್ ಶುಮೈಸಿ ಬಂಧನ ಕೇಂದ್ರದಲ್ಲಿ ಇರಿಸಲಾಗಿದೆ ಮತ್ತು ಗಡೀಪಾರು ಪ್ರಕ್ರಿಯೆಗಳನ್ನು ಪ್ರಾರಂಭಿಸಿರಬಹುದು ಎಂದು ಪತ್ರದಲ್ಲಿ ತಿಳಿಸಲಾಗಿದೆ. ಇಬ್ಬರು ಭಾರತೀಯ ಪ್ರಜೆಗಳ ಕುಟುಂಬಗಳು ಅವರ ಬಂಧನದ ಸಂದರ್ಭಗಳು ಮತ್ತು ಅವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಗಂಭೀರ ಕಳವಳ ವ್ಯಕ್ತಪಡಿಸಿವೆ. ಮಹಾರಾಷ್ಟ್ರ ರಾಜ್ಯ ಅಲ್ಪಸಂಖ್ಯಾತ ಆಯೋಗವು ತುರ್ತು ಕಾನ್ಸುಲರ್ ಸಹಾಯವನ್ನು ನೀಡಲು, ಅವರ ಸ್ಥಿತಿ ಮತ್ತು ಕಲ್ಯಾಣವನ್ನು ಪರಿಶೀಲಿಸಲು ಮತ್ತು ಅವರಿಗೆ ಸೂಕ್ತ ಪ್ರಕ್ರಿಯೆ ಮತ್ತು ನ್ಯಾಯಯುತ ಪ್ರಾತಿನಿಧ್ಯವನ್ನು ಒದಗಿಸಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ರಾಯಭಾರ ಕಚೇರಿಯನ್ನು ವಿನಂತಿಸಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.






# ಜಾಲ್ನಾ ಜಿಲ್ಲಾ ಯೋಜನಾ ಸಮಿತಿ ವಿರುದ್ಧದ ಅರ್ಜಿಗೆ ಸಂಬಂಧಿಸಿದಂತೆ ಪಂಕಜಾ ಮುಂಢೆ ಮತ್ತು ಇತರರಿಗೆ ಹೈಕೋರ್ಟ್ ನೋಟಿಸ್

ಜಾಲ್ನಾ, ಮಾ. 8 – ರಾಜ್ಯ ಸರ್ಕಾರ ರಚಿಸಿರುವ ಜಾಲ್ನಾ ಜಿಲ್ಲಾ ಯೋಜನಾ ಸಮಿತಿಯ ಕಾನೂನುಬದ್ಧತೆಯನ್ನು ಪ್ರಶ್ನಿಸುವ ಅರ್ಜಿಯಲ್ಲಿ ಬಾಂಬೆ ಹೈಕೋರ್ಟ್ ಮಹಾರಾಷ್ಟ್ರ ಸಚಿವೆ ಪಂಕಜಾ ಮುಂಢೆ ಮತ್ತು ಇತರ ಸರ್ಕಾರಿ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿದೆ.ಮುಂಢೆ ಅವರು ಜಾಲ್ನಾ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರು.

ಸ್ಥಳೀಯ ಕಾರ್ಯಕರ್ತ ಭೌಸಾಹೇಬ್ ಗೋರ್ ಸಲ್ಲಿಸಿದ ರಿಟ್ ಅರ್ಜಿಯನ್ನು ವಿಚಾರಣೆ ನಡೆಸುತ್ತಿರುವಾಗ, ನ್ಯಾಯಮೂರ್ತಿ ವಿಭಾ ಕಂಕನ್ವಾಡಿ ಮತ್ತು ನ್ಯಾಯಮೂರ್ತಿ ಹಿತೇನ್ ವೆನೆಗಾವ್ಕರ್ ಅವರನ್ನೊಳಗೊಂಡ ಔರಂಗಾಬಾದ್‌ನಲ್ಲಿರುವ ಹೈಕೋರ್ಟ್ ವಿಭಾಗೀಯ ಪೀಠವು ಮಾರ್ಚ್ 4ರಂದು ರಾಜ್ಯ ಸರ್ಕಾರ ಮತ್ತು ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

ಅರ್ಜಿದಾರರ ಪ್ರಕಾರ, ಜಿಲ್ಲಾ ಯೋಜನಾ ಸಮಿತಿಯನ್ನು ಕಾನೂನನ್ನು ಉಲ್ಲಂಘಿಸಿ ರಚಿಸಲಾಗಿದೆ ಎಂದು ಆರೋಪಿಸಲಾಗಿದೆ, ಇದರ ಪರಿಣಾಮವಾಗಿ ಉದ್ದೇಶಿತ ಉದ್ದೇಶಗಳಿಗಾಗಿ ಬಳಸಲಾಗದ ಹಣವನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದೆ.

ವಿಚಾರಣೆಯ ಸಮಯದಲ್ಲಿ, ಅರ್ಜಿದಾರರ ವಕೀಲರು ಗೋರ್ ಅವರನ್ನು ಆಗಸ್ಟ್ 22, 2024 ರಂದು ಸರ್ಕಾರಿ ನಿರ್ಣಯ (ಜಿಆರ್) ಅಡಿಯಲ್ಲಿ ಸಮಿತಿಯ ವಿಶೇಷ ಆಹ್ವಾನಿತ ಸದಸ್ಯರನ್ನಾಗಿ ನೇಮಿಸಲಾಗಿತ್ತು ಎಂದು ವಾದಿಸಿದರು. ಆದಾಗ್ಯೂ, ಅವರ ಅಧಿಕಾರಾವಧಿ ಈಗ ಕೊನೆಗೊಂಡಿದೆ ಮತ್ತು ಅವರು ಇನ್ನು ಮುಂದೆ ಸಮಿತಿಯೊಂದಿಗೆ ಸಂಬಂಧ ಹೊಂದಿಲ್ಲ. ಸಮಿತಿಯ ರಚನೆಯು ಕಾನೂನಿಗೆ ಅನುಗುಣವಾಗಿಲ್ಲ ಎಂದು ಇತ್ತೀಚೆಗೆ ತಿಳಿದುಬಂದಿದ್ದು, ಇದರಿಂದಾಗಿ ಅವರು ರಿಟ್ ಅರ್ಜಿ ಸಲ್ಲಿಸಿದ್ದಾರೆ ಎಂದು ಅರ್ಜಿದಾರರು ಹೇಳಿಕೊಂಡರು.

ಆಗಸ್ಟ್ 22, 2024 ರ ಜಿಆರ್ ಅನ್ನು ಪರಿಶೀಲಿಸಲಾಗಿದೆ ಎಂದು ಪೀಠ ಹೇಳಿದೆ. ಆದಾಗ್ಯೂ, ಈ ಪ್ರಾಥಮಿಕ ಹಂತದಲ್ಲಿ, ಅಸ್ತಿತ್ವದಲ್ಲಿರುವ ಸಮಿತಿಯು ಈಗಾಗಲೇ ತೆಗೆದುಕೊಂಡ ಕ್ರಮಗಳು ಅಥವಾ ನಿರ್ಧಾರಗಳ ಬಗ್ಗೆ ಯಾವುದೇ ಕಾಮೆಂಟ್ ಮಾಡುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಸಮಿತಿಯ ಸಂಯೋಜನೆಯು ಸಂಬಂಧಿತ ಕಾನೂನು ನಿಬಂಧನೆಗಳಿಗೆ ಅನುಗುಣವಾಗಿದೆಯೇ ಎಂದು ಪರಿಶೀಲಿಸುವುದಾಗಿ ನ್ಯಾಯಾಲಯ ಹೇಳಿದೆ.

ಹೈಕೋರ್ಟ್ ಮುಂಢೆಗೆ ಹಾಗೂ ರಾಜ್ಯ ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ, ವಿಭಾಗೀಯ ಆಯುಕ್ತರು, ಜಿಲ್ಲಾಧಿಕಾರಿ ಮತ್ತು ಇತರರಿಗೆ ನೋಟಿಸ್ ನೀಡಿದೆ.

ಪ್ರತಿವಾದಿಗಳು ಮಾರ್ಚ್ 27ರೊಳಗೆ ತಮ್ಮ ಉತ್ತರವನ್ನು ಸಲ್ಲಿಸಲು ಮತ್ತು ಇನ್ನೊಂದು ಪಕ್ಷಕ್ಕೆ ಮುಂಚಿತವಾಗಿ ಪ್ರತಿಯನ್ನು ಒದಗಿಸುವಂತೆ ನಿರ್ದೇಶಿಸಲಾಗಿದೆ.

ಈ ವಿಷಯದ ಮುಂದಿನ ವಿಚಾರಣೆಯನ್ನು ಎಪ್ರಿಲ್ 1 ರಂದು ನಿಗದಿಪಡಿಸಲಾಗಿದೆ.



ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಮಹಾರಾಷ್ಟ್ರದ ಥಾಣೆಯಲ್ಲಿ ಭಾನುವಾರ ನಡೆದ ಸೀರೆ ವಾಕಥಾನ್ 2026ರಲ್ಲಿ ಭಾಗವಹಿಸಿದ ಮಹಿಳೆಯರು.



ಮಾರ್ಚ್ 7ರಂದು ಮುಂಬಯಿಯಲ್ಲಿ ನಡೆದ ಶೋಶಾ ರೀಲ್ ಪ್ರಶಸ್ತಿ - 2026ರ ಸಂದರ್ಭದಲ್ಲಿ ಕಾಣಿಸಿಕೊಂಡ ಬಾಲಿವುಡ್ ನಟಿ ಅನನ್ಯಾ ಪಾಂಡೆ

# 2010ರ ಅಪಘಾತದಲ್ಲಿ ಸಾವನ್ನಪ್ಪಿದ ಟ್ಯಾಂಕರ್ ಚಾಲಕನ ಕುಟುಂಬಕ್ಕೆ 24 ಲಕ್ಷ ರೂ. ಪರಿಹಾರ ನೀಡಿದ ಎಂಎಸಿಟಿ

ಥಾಣೆ, ಮಾ. 8 – ಸುಮಾರು 16 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ 26 ವರ್ಷದ ಟ್ಯಾಂಕರ್ ಚಾಲಕನ ಕುಟುಂಬಕ್ಕೆ ಥಾಣೆಯ ಮೋಟಾರ್ ಅಪಘಾತ ಹಕ್ಕುಗಳ ನ್ಯಾಯಮಂಡಳಿ (ಎಂಎಸಿಟಿ) 24.05 ಲಕ್ಷ ರೂ. ಪರಿಹಾರವನ್ನು ನೀಡಿದೆ.

2010 ರಲ್ಲಿ ನಡೆದ ಅಪಘಾತಕ್ಕಾಗಿ ಅರ್ಜಿಯನ್ನು 2020 ರಲ್ಲಿ ಸಲ್ಲಿಸಲಾಗಿದೆ ಮತ್ತು ಆದ್ದರಿಂದ ಮಿತಿಯಿಂದ ನಿರ್ಬಂಧಿಸಲಾಗಿದೆ ಎಂದು ವಾದಿಸಿ, ಅಪರಾಧಿ ಟ್ರಕ್‌ನ ವಿಮಾ ಕಂಪನಿಯು ಈ ಹಕ್ಕನ್ನು ಪ್ರಶ್ನಿಸಿತ್ತು. ಟ್ರಕ್ ಅನ್ನು ಹಿಂದಿನಿಂದ ಡಿಕ್ಕಿ ಹೊಡೆದಿದ್ದಕ್ಕಾಗಿ ಟ್ಯಾಂಕರ್ ಚಾಲಕನ ನಿರ್ಲಕ್ಷ್ಯವನ್ನು ಸಹ ಅದು ಆರೋಪಿಸಿದೆ.

ಆದಾಗ್ಯೂ, ಮಾರ್ಚ್ 5 ರಂದು ಹೊರಡಿಸಿದ ಆದೇಶದಲ್ಲಿ ಎಂಎಸಿಟಿ ಸದಸ್ಯ ಆರ್‌ವಿ ಮೋಹಿತೆ, ಈ ವಾದಗಳನ್ನು ವಜಾಗೊಳಿಸಿದರು.

ಸುಪ್ರೀಂ ಕೋರ್ಟ್‌ನ ಪೂರ್ವನಿದರ್ಶನಗಳನ್ನು ಉಲ್ಲೇಖಿಸಿ, 2019 ರ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ (ಹಕ್ಕುಗಳನ್ನು ಸಲ್ಲಿಸಲು ಆರು ತಿಂಗಳ ಮಿತಿಯನ್ನು ವಿಧಿಸುವುದು) ಏಪ್ರಿಲ್ 2022 ಕ್ಕಿಂತ ಮೊದಲು ಸಂಭವಿಸುವ ಅಪಘಾತಗಳ ಮೇಲೆ ಹಿಂದಿನಿಂದ ಪರಿಣಾಮ ಬೀರುವುದಿಲ್ಲ ಎಂದು ನ್ಯಾಯಮಂಡಳಿ ಗಮನಿಸಿದೆ.

ಈ ಘಟನೆ ಏಪ್ರಿಲ್ 18, 2010 ರಂದು ಫಿರೋಜ್ ಸಿದ್ದಿಕ್ ಅಹಮದ್ ಶೇಖ್ (ಅಲಿಯಾಸ್ ಖಾನ್) ಝೂನ್ಸಿ ಕಡೆಗೆ ರಾಸಾಯನಿಕ ಟ್ಯಾಂಕರನ್ನು ಚಲಾಯಿಸುತ್ತಿದ್ದಾಗ ನಡೆದಿದೆ.

ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಮುಂಬೈ-ಆಗ್ರಾ ಹೆದ್ದಾರಿಯಲ್ಲಿರುವ ಶಹಾಪುರದ ಕಲಾಂಬ್ ಗ್ರಾಮದ ಬಳಿ ಮುಂದೆ ಹೋಗುತ್ತಿದ್ದ ಟ್ರಕ್ ಯಾವುದೇ ಸಿಗ್ನಲ್ ಇಲ್ಲದೆ ಹಠಾತ್ತನೆ ಬ್ರೇಕ್ ಹಾಕಿತು. ಟ್ಯಾಂಕರ್ ಟ್ರಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅಪಾಯಕಾರಿ ಸರಕು ಹೊತ್ತಿಕೊಂಡಿತು. ಶೇಖ್ ಸುಟ್ಟ ಗಾಯಗಳಿಗೆ ತುತ್ತಾಗಿ ಅದೇ ದಿನ ಸಾವನ್ನಪ್ಪಿದ್ದರು.

ನ್ಯಾಯಮಂಡಳಿ ಶೇಖ್ ಅವರ ಕಾಲ್ಪನಿಕ ಆದಾಯವನ್ನು ತಿಂಗಳಿಗೆ 12,000 ರೂ. ಎಂದು ನಿರ್ಣಯಿಸಿತು ಮತ್ತು ಭವಿಷ್ಯದ ನಿರೀಕ್ಷೆಗಳಿಗೆ ಶೇ. 40 ರಷ್ಟು ಸೇರಿಸಿತು ಮತ್ತು ಅವಲಂಬನೆ, ಒಕ್ಕೂಟ, ಎಸ್ಟೇಟ್ ಮತ್ತು ಅಂತ್ಯಕ್ರಿಯೆಯ ವೆಚ್ಚಗಳ ನಷ್ಟ ಸೇರಿದಂತೆ 24,05,800 ರೂ.ಗಳ ಪರಿಹಾರವನ್ನು ನೀಡಿತು.

ಅರ್ಜಿಯ ದಿನಾಂಕದಿಂದ (2020) ವಾರ್ಷಿಕ ಶೇಕಡಾ 9 ರಷ್ಟು ಬಡ್ಡಿಯೊಂದಿಗೆ ಟ್ರಕ್ ಮಾಲೀಕರು ಮತ್ತು ಅದರ ವಿಮಾದಾರರು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹಕ್ಕುದಾರರಿಗೆ ಮೊತ್ತವನ್ನು ಪಾವತಿಸಲು ಅದು ನಿರ್ದೇಶಿಸಿತು. ಪರಿಹಾರವನ್ನು ಶೇಖ್ ಅವರ ಪತ್ನಿ ಮತ್ತು ತಾಯಿಯ ನಡುವೆ ಹಂಚಲಾಗುತ್ತದೆ ಮತ್ತು ಮೊತ್ತದ ಒಂದು ಭಾಗವನ್ನು ಆದೇಶದ ಪ್ರಕಾರ ಸ್ಥಿರ ಠೇವಣಿಗಳಲ್ಲಿ ಇಡಲಾಗುತ್ತದೆ.




# ಟ್ರಂಪ್ ಒಬ್ಬ ಡಿಕ್ಟೇಟರ್ ; ಮೋದಿ ಅವರ ಗುಲಾಮ : ಖರ್ಗೆ

## ಮೋದಿಯ ವಿದೇಶಾಂಗ ನೀತಿಯಿಂದಾಗಿ ನಮ್ಮ ದೇಶ ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಳುಮಾಡುತ್ತಿದ್ದಾರೆ

ಬೆಂಗಳೂರು, ಮಾ.8 - ಪ್ರಧಾನಿ ನರೇಂದ್ರ ಮೋದಿ ತಮ್ಮ ವಿದೇಶಾಂಗ ನೀತಿಯಿಂದಾಗಿ ನಮ್ಮ ದೇಶವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹಾಳುಮಾಡುತ್ತಿದ್ದಾರೆ ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದರು.

ಚಿತ್ತಾಪುರ ಪಟ್ಟಣದಲ್ಲಿ ರೂ. 1069 ಕೋಟಿ ವೆಚ್ಚದ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದ ಅವರು, ಟ್ರಂಪ್ ಒಬ್ಬ ಡಿಕ್ಟೇಟರ್, ಮೋದಿ ಅವರ ಗುಲಾಮ ಎಂದು ಕಟು ಟೀಕಿಸಿದ ಖರ್ಗೆ, ರಷ್ಯಾದಿಂದ ಈಗ ಒಂದು ತಿಂಗಳ ಮಾತ್ರ ತೈಲ ಖರೀದಿಗೆ ಅಮೆರಿಕ ಅನುಮತಿ ನೀಡಿದೆ. ಅಮೇರಿಕದವರು ಹೇಳಿದಂತೆ ಮೋದಿ ಕೇಳುತ್ತಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ನಮ್ಮ ದೇಶವನ್ನು ಗಿರಿವಿ ಇಟ್ಟಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಯುದ್ದದ ಬಗ್ಗೆ ಪ್ರಸ್ತಾಪಿಸಿದ ಮಲ್ಲಿಕಾರ್ಜುನ ಖರ್ಗೆ, ಜವಾಹರ್‌ಲಾಲ್ ನೆಹರೂ ಪ್ರಧಾನಿಯಾಗಿದ್ದಾಗ ನಾನ್ ಅಲೈನ್‌ಮೆಂಟ್ ಒಪ್ಪಂದ ಮಾಡಿಕೊಂಡಿದ್ದರಿಂದ ಅದು ವಿಶ್ವಶಾಂತಿಗೆ ಕಾರಣವಾಗಿತ್ತು. ಆದರೆ, ಮೋದಿ ಈಗ ಮಾಡುತ್ತಿರುವುದೇನು? ಮೋದಿ ಇಸ್ರೇಲ್‌ಗೆ ಹೋಗಿ ಬಂದ ನಂತರ ಅದು ಇರಾನ್ ಮೇಲೆ ಬಾಂಬ್ ಹಾಕಿತು. ದೇಶದ ಮುಖ್ಯಸ್ಥ ಖಮೇನಿಯನ್ನು ಅಮೆರಿಕದವರು ಹತ್ಯೆ ಮಾಡಿದರು. ಒಂದು ದೇಶದ ಮುಖ್ಯಸ್ಥನನ್ನು ಹತ್ಯೆ ಮಾಡಿದರೆ ಆ ದೇಶ ಶಾಂತಿಯಿಂದ ಇರುತ್ತದಯೇ? ಇದು ವಿಶ್ವ ಶಾಂತಿಯಿಂದ ಇರಲು ಸಾಧ್ಯವಾಗುತ್ತದೆಯಾ? ಎಂದು ಖರ್ಗೆ ಪ್ರಶ್ನಿಸಿದರು.

ಭಾರತ ದೇಶದ ಶೇ.65 ರೈತರು ಕೃಷಿ ಅವಲಂಬಿತರಾಗಿದ್ದರೆ ಅಮೇರಿಕಾದದಲ್ಲಿ ಶೇ.3 ಅವಲಂವಿತರಾಗಿದ್ದಾರೆ. ನಮ್ಮ ದೇಶದ ಉತ್ಪನ್ನಗಳಿಗೆ ಅಮೇರಿಕಾದಲ್ಲಿ ಟ್ಯಾಕ್ಸ್ ಇಲ್ಲ. ಆದರೆ, ಅಮೇರಿಕಾದ ಉತ್ಪನ್ನಗಳ ಮೇಲೆ ಮನಬಂದಂತೆ ಟ್ಯಾಕ್ಸ್ ಹಾಕಲಾಗುತ್ತಿದೆ. ಟ್ರಂಪ್ ನನ್ನ ಸ್ನೇಹಿತ ಎನ್ನುತ್ತಾರೆ. ಆದರೆ, ರಷ್ಯಾದಿಂದ ತೈಲ ಖರೀದಿ ಮಾಡದರೆ ನಿಮ್ಮ ಮೇಲೆ ಟ್ಯಾಕ್ಸ್ ಹಾಕುತ್ತೇನೆ ಟ್ರಂಪ್ ಹೇಳುತ್ತಾರೆ. ಟ್ರಂಪ್ ಜೊತೆ ದಿನಾಲೂ ಮಾತನಾಡುತ್ತಿರುವುದಾಗಿ ಮೋದಿ ಹೇಳುತ್ತಾರೆ.



ಟ್ಯಾಕ್ಸ್ ಹಾಕುವ ಬಗ್ಗನೆ ಮಾತನಾಡುತ್ತಾರ? ಎಪ್ಟೀನ್ ಫೈಲ್‌ನಲ್ಲಿ ಯಾರು ಯಾರು ಎಲ್ಲಿ ಹೋಗಿದ್ದರು ಎನ್ನುವ ಮಾಹಿತಿ ಇದೆ ಎನ್ನಲಾಗುತ್ತಿದೆ. ಅದನ್ನು ಇಟ್ಟುಕೊಂಡೆ ಟ್ರಂಪ್ ಮೋದಿಗೆ ಹೆದರಿಸುತ್ತಿದ್ದಾರೆ ಎಂದರು.

ಕಾಂಗ್ರೆಸ್ ಅಧಿಕಾರದ 75 ವರ್ಷ ಆದರೂ ಕೂಡಾ ನಮ್ಮ ದೇಶದ ತಂಟೆಗೆ ಯಾರೂ ಬಂದಿರಲಿಲ್ಲ. ಪಾಕಿಸ್ತಾನವನ್ನು ಒಡೆದು ಎರಡು ಭಾಗ ಮಾಡಿದರು. ಅವರಿಗೆ ಇದ್ದಂತ ಧೈರ್ಯ ನಿಮಗೇಕಿಲ್ಲ? ಎಂದು ಪ್ರಶ್ನಿಸಿದ ಮಲ್ಲಿಕಾರ್ಜುನ ಖರ್ಗೆ, ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಟೀಕಿಸುತ್ತಿರುವ ಬಿಜೆಪಿ ನಾಯಕರ ಮೇಲೆ ಹರಿಹಾಯ್ದರು.

ಬಿಜೆಪಿಯರವರಿಗಂತೂ ಕೆಲಸನೇ ಇಲ್ಲ. ಸೋನಿಯಾಗೆ, ರಾಹುಲ್‌ಗೆ, ನನಗೆ, ಪ್ರಿಯಾಂಕ್‌ಗೆ , ಸಿದ್ದರಾಮಯ್ಯಗೆ ಹಾಗೂ ಶಿವಕುಮಾರ್‌ಗೆ ಬೈಯ್ಯುವುದೇ ಕೆಲಸವಾಗಿದೆ. ನಮ್ಮ ಸರ್ಕಾರ ಇದ್ದಾಗ ಮಾಡಿರುವ ಕೆಲಸಗಳ ಬಗ್ಗೆ ಎಲ್ಲರಿಗೂ ಗೊತ್ತಿದೆ. ಗದಗ ವಾಡಿ ರೈಲ್ವೆ ಲೈನ್, ರಸ್ತೆಗಳು, ಹೈವೈ ಗಳು ಮಾಡುದ್ದು ನಾವೇ ಹೊರತು ನೀವಲ್ಲ ಬಿಜೆಪಿ ವಿರುದ್ದ ಟೀಕಿಸಿದರು.

ಆರ್ಟಿಕಲ್ 371 ಜೆ ಜಾರಿಗೆ ತಂದಿದ್ದು ನಾವು. ನಮ್ಮ ಬೇಡಿಕೆಗೆ ಅಂದಿನ ಗೃಹ ಸಚಿವ ಆಡ್ವಾಣಿ ಸ್ಪಂದಿಸಲಿಲ್ಲ ಎಂದು ಅಂದಿನ ಬಿಜೆಪಿಯ ಪ್ರತಿರೋಧವನ್ನು ನೆನಪಿಸಿಕೊಂಡ ಖರ್ಗೆ, ನಾನು ಅಂದಿನ ಸಂದರ್ಭದಲ್ಲಿ ನಮ್ಮ ಪರವಾಗಿರಲು 130 ಜನ ಎಂ.ಪಿಗಳಿಗೆ ಹೇಗೆ ಮನವೊಲಿಸಿದ್ದೇನೆ. ಅದು ನನಗೆ ಮಾತ್ರ ಗೊತ್ತು. ಆರ್ಟಿಕಲ್-371 ನನಗೆ, ನನ್ನ ಮಕ್ಕಳಿಗೆ ಹಾಗೂ ಮೊಮ್ಮಕ್ಕಳಿಗೆ ಅನುಕೂಲವಾಗಲ್ಲ. ಅದು ಅನುಕೂಲವಾಗುವುದು ಜನಸಾಮಾನ್ಯರಿಗೆ. ಇಂದು ಮೆಡಿಕಲ್, ಇಂಜಿನಿಯರಿಂಗ್ ಸೀಟು ಪಡೆದುಕೊಳ್ಳಲು ಅನುಕೂಲವಾಗಿದೆ ಎಂದರು.

ಕಲಬುರ್ಗಿಗೆ ವಿಮಾನ ನಿಲ್ದಾಣ ಮಾಡಲು ಶ್ರೀನಿವಾಸ ಸರಡಗಿ ಗ್ರಾಮದ ಜನರು 1,000 ಎಕರೆ ಜಮೀನು ಕೊಟ್ಟಿದ್ದಾರೆ. ಅವರಿಗೆ ಇಲ್ಲಿಂದಲೆ ನಾನು ನಮಸ್ಕಾರ ಮಾಡುತ್ತೇನೆ. ವಿಮಾನ ನಿಲ್ದಾಣವನ್ನು ಖರ್ಗೆ ಜಾಸ್ತಿ ಓಡಾಡುತ್ತಾರೆ ಎಂದು ಬಂದ್ ಮಾಡಲಾಗಿದೆ. ನಾನು ದಿನಾಲು ಬರುತ್ತೇನಾ? ಎಂದು ಪ್ರಶ್ನಿಸಿದರು.

ಚಿತ್ತಾಪುರದ ಒಬ್ಬ ಶಾಸಕ ಇಡೀ ದೇಶದ ಜನರ ಸಮಸ್ಯೆ ಬಗ್ಗೆ ಧ್ವನಿ ಎತ್ತಿ ಮಾತನಾಡುತ್ತಿರುವುದು ನೋಡಿದರೆ ಹೆಮ್ಮೆ ಎನಿಸುತ್ತದೆ ಎಂದು ಪ್ರಿಯಾಂಕ್ ಖರ್ಗೆ ಅವರ ಬಗ್ಗೆ ಕೊಂಡಾಡಿದರು.

ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಶಿವಕುಮಾರ್ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ನೀವು ಸದಾ ಬೆಂಬಲ ನೀಡಬೇಕು ಎಂದು ಮನವಿ ಮಾಡಿದ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್‌ಗೆ ಇನ್ನು ಇಪ್ಪತ್ತು ಸೀಟ್ ಬಂದಿದ್ದರೆ ಮೋದಿ ಅಧಿಕಾರಕ್ಕೆ ಬರುತ್ತಿರಲಿಲ್ಲ. ನಮ್ಮ ನಿರೀಕ್ಷೆಯಂತೆ ಸೀಟು ಬರಲಿಲ್ಲ ಅದು ನಮ್ಮ ದುರ್ದೈವ. ನಮ್ಮ ಸೋಲನ್ನು ಬಿಜೆಪಿಯವರು ಟೀಕಿಸುತ್ತಾರೆ. ಆದರೆ, ನಾವು ಜನರ ಪ್ರೀತಿ ವಿಶ್ವಾಸದಿಂದ ಮುಂದುವರಿಯುತ್ತೇವೆ ಎಂದರು.

# 2028ಕ್ಕೆ ರಮಾನಾಥ ರೈ ಅವರೇ ಬಂಟ್ವಾಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ : ಸಿದ್ದರಾಮಯ್ಯ

ಮಂಗಳೂರು, ಮಾ. 8 - 2028ಕ್ಕೆ ರಮಾನಾಥ ರೈ ಅವರೇ ಬಂಟ್ವಾಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಲಿದ್ದಾರೆ. ಅವರನ್ನು ಅತೀ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಂಟ್ವಾಳದಲ್ಲಿ ಮನವಿ ಮಾಡಿಕೊಂಡರು.

ಇಲ್ಲಿನ ನಾವೂರು ಕೂಡಿಬೈಲು ಎಂಬಲ್ಲಿ ಮಾಜಿ ಸಚಿವ ಬಿ. ರಮಾನಾಥ ರೈ ನೇತೃತ್ವದಲ್ಲಿ ಶನಿವಾರ ನಡೆದ ಮುಡೂರು ಪಡೂರು ಜೋಡುಕರೆ ಕಂಬಳದ ಸಭಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಕಂಬಳ ಸಮಿತಿ ವತಿಯಿಂದ ಸಿಎಂಗೆ ಗೌರವಪೂರ್ವಕವಾಗಿ ಕಂಬಳದ ಬೆತ್ತವನ್ನು ನೀಡುವ ಮೂಲಕ ಸಾಂಪ್ರದಾಯಿಕವಾಗಿ ಸ್ವಾಗತಿಸಲಾಯಿತು.

ರಮಾನಾಥ ರೈ ಅವರು ಶಾಸಕ, ಸಚಿವರಾಗಿದ್ದಾಗ ಬಂಟ್ವಾಳ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದರೂ ಜನರು ಸೋಲಿಸಿರುವುದು ನೋವಿನ ಸಂಗತಿಯಾಗಿದೆ. ರಮಾನಾಥ ರೈ ಕ್ಷೇತ್ರಕ್ಕೆ ಐದು ಸಾವಿರ ಕೋಟಿ ರೂಪಾಯಿಯನ್ನು ಕಳೆದ ಅವಧಿಯಲ್ಲಿ ತರಿಸಿ ಅಭಿವೃದ್ಧಿ ಮಾಡಲಾಗಿತ್ತು. ಆದರೂ ಅವರನ್ನು ಕ್ಷೇತ್ರದ ಜನ ಸೋಲಿಸಿದರು. ಇದು ನೋವಿನ ಸಂಗತಿ ಅಲ್ವಾ? ಇನ್ನೊಂದು ಸಾರಿ ಅವರು ನಿಲ್ಲುತ್ತಾರೆ. 2028ಕ್ಕೆ ಮತ್ತೆ ಅಭ್ಯರ್ಥಿ ಆಗುತ್ತಾರೆ, ಪ್ರಾಮಾಣಿಕ ಸಚಿವರಲ್ಲಿ ರಮಾನಾಥ ರೈ ಕೂಡ ಒಬ್ಬರಾಗಿದ್ದರು. ಹೀಗಾಗಿ ಅವರು ಮತ್ತೆ ಗೆಲ್ಲಬೇಕು ಎಂದರು.

ಬಳಿಕ





ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಸಿಎಂ, ಕಂಬಳ ಅತ್ಯಂತ ಜನಪ್ರಿಯ ಕ್ರೀಡೆ. ಇದಕ್ಕೆ ಎಲ್ಲ ಜಾತಿ, ಧರ್ಮೀಯರು ಸೇರುತ್ತಾರೆ. ಈ ಕ್ರೀಡೆಯನ್ನು ಉಳಿಸಿ, ಬೆಳೆಸುವುದು ನಮ್ಮ ಜವಾಬ್ದಾರಿ. ದಕ್ಷಿಣ ಕನ್ನಡದಲ್ಲಿ ಎಲ್ಲರೂ ಭಾಗವಹಿಸುವ ಕ್ರೀಡೆ. ಮಂಗಳೂರಿನ ಜನರು ಸಾಹಸಪ್ರವೃತ್ತಿ ಇರುವ ಕ್ರೀಡೆಯಾಗಿದ್ದು, ಇಲ್ಲಿ ಕೋಣಗಳನ್ನು ಮಕ್ಕಳ ಥರ ಸಾಕುತ್ತಾರೆ. 2028ಕ್ಕೂ ನಾವೇ ಅಧಿಕಾರಕ್ಕೆ ಬಂದೇ ಬರ್ತೀವಿ. ನಾವು ಅಧಿಕಾರದಲ್ಲಿದ್ದಾಗ ಕಂಬಳಕ್ಕೆ ಏನು ಪ್ರೋತ್ಸಾಹ ನೀಡಬೇಕೋ ಅದಕ್ಕೆ ಪ್ರೋತ್ಸಾಹ ನೀಡುತ್ತೇವೆ. ಕಂಬಳಕ್ಕೆ ಹಣಕಾಸಿನ ನೆರವನ್ನೂ ಕೊಡುತ್ತೇವೆ ಎಂದು ತಿಳಿಸಿದರು.

ಬಳಿಕ ಕನೆಹಲಗೆಯ ಕೋಣಗಳ ಓಟವನ್ನು ಸಿಎಂ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ, ಕಂಬಳಕ್ಕೆ ರಾಜ್ಯಮಟ್ಟದಲ್ಲಿ ಮಾನ್ಯತೆ ಇದೆ ಎಂದ ಸಿಎಂ ಮುಂದಿನ ವರ್ಷ ಬೆಂಜನಪದವು ಕ್ರೀಡಾಂಗಣ ನಿರ್ಮಾಣ ಮಾಡಲಾಗುವುದು ಎಂದು ಮಾಜಿ ಸಚಿವ ಬಿ. ರಮಾನಾಥ ರೈ ಮನವಿಗೆ ಸ್ಪಂದಿಸಿ ಅವರು ಪ್ರಕಟಿಸಿದರು.

ನಾನೇನು ಸಿನಿಮಾ ನಟನಲ್ಲ. ನಾನೊಬ್ಬ ರಾಜಕಾರಣಿ. ಬಡವರು ರೈತರು, ಸಮಾಜದ ಕಟ್ಟಕಡೆಯ ಜನರ ಏಳಿಗೆಗಾಗಿ ಶ್ರಮಿಸಿದ್ದೇನೆ. ದುರ್ಬಲ ವರ್ಗದ ಜನರ ಇದ್ದಾರೆ, ಅವರಿಗೆ ಶಕ್ತಿ ತುಂಬುವ ಕೆಲಸ ಆಗಬೇಕು. ಅದಕ್ಕೋಸ್ಕರವೇ ಐದು ಗ್ಯಾರಂಟಿ ಯೋಜನೆ ಮಾಡಿದೆವು. ನಮ್ಮ ದೇಶಕ್ಕೆ ರಾಜಕೀಯ ಪ್ರಜಾಪ್ರಭುತ್ವ ದೊರಕಿದೆ. ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವ ಬೇಕು. ಅವಕಾಶ ವಂಚಿತರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಾ ಇದ್ದೇವೆ. ಜನರು ನಮ್ಮ ಕೈ ಹಿಡಿಯುತ್ತಾರೆ ಎಂದು ಭರವಸೆ ವ್ಯಕ್ತಪಡಿಸಿದರು.

**ಬೆಂಜನಪದವು ಕ್ರೀಡಾಂಗಣಕ್ಕೆ ಮರುಜೀವ ನೀಡಿ-ರೈ ಮನವಿ:**

ಬೆಂಜನಪದವಿನಲ್ಲಿ ಹತ್ತು ಕೋಟಿ ರೂ. ಮಂಜೂರಾಗಿತ್ತು. ಅದನ್ನು ಅನುಷ್ಠಾನ ಮಾಡಲು ಸಾಧ್ಯವಾಗಿಲ್ಲ. ಮತ್ತೊಮ್ಮೆ ಕ್ರೀಡಾಂಗಣ ನಿರ್ಮಾಣಕ್ಕೆ ನನಗೆ ಅವಕಾಶವನ್ನು ಮಾಡಿಕೊಡಬೇಕು ಎಂದು ಪ್ರಾಸ್ತಾವಿಕವಾಗಿ ಮಾತನಾಡಿದ ಮಾಜಿ ಸಚಿವ, ಕಂಬಳ ಸಮಿತಿ ಗೌರವಾಧ್ಯಕ್ಷ ರಮಾನಾಥ ರೈ ಮನವಿ ಮಾಡಿದರು.

# ಕರ್ನಾಟಕ ಕಲಾಶ್ರೀ ಪ್ರಶಸ್ತಿ 2025-26ನೇ ಸಾಲಿನ ಪುರಸ್ಕೃತರ ಆಯ್ಕೆ

ಬೆಂಗಳೂರು, ಮಾ.8 - ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಒಂದಾದ ಕರ್ನಾಟಕ ಕಲಾಶ್ರೀ ಪ್ರಶಸ್ತಿಗೆ 2025-26ನೇ ಸಾಲಿನ ಪುರಸ್ಕೃತರನ್ನು ಅಕಾಡೆಮಿಯ ಅಧ್ಯಕ್ಷರಾದ ಶುಭ ಧನಂಜಯ ಅವರ ಅಧ್ಯಕ್ಷತೆಯಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಸಂಗೀತ ಮತ್ತು ನೃತ್ಯ ಕ್ಷೇತ್ರಗಳಲ್ಲಿ ಅನುಪಮ ಸೇವೆ ಸಲ್ಲಿಸಿದ ಹಿರಿಯ ಕಲಾವಿದರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

**ಪ್ರಶಸ್ತಿ ಪುರಸ್ಕೃತರ ವಿವರಗಳು:**

ಗೌರವ ಪ್ರಶಸ್ತಿಗೆ ಗಮಕ ಪ್ರಕಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಧೂರ ಮೋಹನ ಕಲ್ಲೂರಾಯ, ಕಥಾ ಕೀರ್ತನದಲ್ಲಿ ಹಾಸನದ ಲೋಕೇಶ್ ದಾಸ್ ಆಯ್ಕೆಯಾಗಿದ್ದಾರೆ.

**ವಾರ್ಷಿಕ ಪ್ರಶಸ್ತಿ:**

**ಕರ್ನಾಟಕ ಸಂಗೀತ:** ವಿದ್ವಾನ್ ಎಂ. ವೆಂಕಟರಾಯ್ (ಡೋಲ್) - ಬೆಂಗಳೂರು ಗ್ರಾಮಾಂತರ, ಎ.ವಿ. ವಿಶ್ವನಾಥ (ಹಾರ್ಮೋನಿಯಂ) - ಕೋಲಾರ, ಡಾ. ಹಂಸಿನಿ ನಾಗೇಂದ್ರ (ಗಾಯನ) - ಮೈಸೂರು, ನಾಗೇಶ ಎ. ಬಪ್ಪನಾಡು (ನಾದಸ್ವರ) - ದಕ್ಷಿಣ ಕನ್ನಡ.

**ಹಿಂದೂಸ್ತಾನಿ ಸಂಗೀತ:**

ಮೃತ್ಯುಂಜಯ ಶೆಟ್ಟರ್(ಗಾಯನ) - ಧಾರವಾಡ, ರವೀಂದ್ರ ಸೊರಗಾವಿ (ಗಾಯನ) - ಬಾಗಲಕೋಟೆ, ಪಂಚಾಕ್ಷರಿ ಅಣ್ಣಿಗೇರಿ (ಹಾರ್ಮೋನಿಯಂ) - ಗದಗ, ವಿಠಲ್ ಸಿದ್ದಪ್ಪ ಪೂಜಾರಿ (ತಬಲ) - ಬೀದರ್.

**ನೃತ್ಯ:**

ಜಿಲಾನಿ ಭಾಷಾ (ಕೂಚಿಪುಡಿ) - ಬಳ್ಳಾರಿ, ಶಿವಪ್ರಕಾಶ (ಭರತನಾಟ್ಯ) - ಚಿತ್ರದುರ್ಗ, ಶ್ರೀಮತಿ ನಾಗರತ್ನ ಹಡಗಲಿ (ಭರತನಾಟ್ಯ) - ಧಾರವಾಡ.

**ಇತರ ಕಲಾ ಪ್ರಕಾರಗಳು:**

**ಸುಗಮ ಸಂಗೀತ:** ಶ್ರೀಧರ್ ಅಯ್ಯರ್- ಕೋಲಾರ, **ಕಥಾಕೀರ್ತನ (ತಬಲ):** ಪಿ. ರಾಮಯ್ಯ - ಬೆಂಗಳೂರು, **ಗಮಕ (ವಾಚನ):** ವಿಶ್ವನಾಥ ಕುಲಕರ್ಣಿ - ಧಾರವಾಡ, **ವಾದ್ಯ ತಯಾರಿಕೆ:** ಕೃಷ್ಣ ಮೂರ್ತಿ - ಬೆಂಗಳೂರು, **ಸಂಘ ಸಂಸ್ಥೆ:** ಶ್ರೀ ಕೊಟ್ಟೂರೇಶ್ವರ ಸಂಗೀತ ವಿದ್ಯಾಲಯ ಕಲ್ಮಠ, ಗಂಗಾವತಿ - ಕೊಪ್ಪಳ.

ಪ್ರಶಸ್ತಿ ಪ್ರದಾನ ಸಮಾರಂಭವನ್ನು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ಆಯೋಜಿಸಲಾಗುವುದು.

ಗೌರವ ಪ್ರಶಸ್ತಿ ಪುರಸ್ಕೃತರಿಗೆ ರೂ. 50,000 ನಗದು, ವಾರ್ಷಿಕ ಪ್ರಶಸ್ತಿಗೆ ರೂ. 25,000 ನಗದು ಸೇರಿದಂತೆ ಪ್ರಶಸ್ತಿ ವಿಗ್ರಹ, ಪ್ರಶಸ್ತಿ ಪತ್ರ, ಶಾಲು, ಹಾರ ಹಾಗೂ ಫಲ-ತಾಂಬೂಲಗಳನ್ನು ಒಳಗೊಂಡ ಕರ್ನಾಟಕ ಕಲಾಶ್ರೀ ಪ್ರಶಸ್ತಿಯೊಂದಿಗೆ ಗೌರವಿಸಲಾಗುವುದು ಎಂದು ಅಕಾಡೆಮಿಯ ರಿಜಿಸ್ಟ್ರಾರ್ಎನ್. ನರೇಂದ್ರಬಾಬು ತಿಳಿಸಿದ್ದಾರೆ.

# ಅವಕಾಶ ಕೊಟ್ಟರೆ ಮುಂದಿನ 2 ಬಜೆಟ್ ನಾನೇ ಮಂಡಿಸುತ್ತೇನೆ ; ಸಿದ್ದು ಹೇಳಿಕೆ ಬೆನ್ನಲ್ಲೇ ಡಿಕೆಶಿ ದೆಹಲಿಗೆ

ಬೆಂಗಳೂರು, ಮಾ.8 - ಹೈಕಮಾಂಡ್ ಮೇಲೆ ವಿಶ್ವಾಸವಿದೆ. ಅವಕಾಶ ಕೊಟ್ಟರೆ ಮುಂದಿನ ಎರಡು ಬಜೆಟ್‌ಗಳನ್ನು ಮಂಡಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿ ಪ್ರಯಾಣ ಕೈಗೊಂಡಿದ್ದಾರೆ. ಇದು ರಾಜಕೀಯ ವಲಯದಲ್ಲಿ ತೀವ್ರ ಕುತೂಹಲ ಜೊತೆಗೆ ವ್ಯಾಪಕ ಚರ್ಚೆಗೆ ಕಾರಣವಾಗಿದೆ.

ಕಲಬುರ್ಗಿ ಜಿಲ್ಲೆಯ ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿನ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಹಾಗೂ ಉದ್ಘಾಟನೆಯಲ್ಲಿ ಭಾಗವಹಿಸಿದ ಬಳಿಕ ಡಿ.ಕೆ. ಶಿವಕುಮಾರ್ ಅವರು ಅಲ್ಲಿಂದ ನೇರವಾಗಿ ವಿಶೇಷ ವಿಮಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ದೆಹಲಿಗೆ ಪ್ರಯಾಣಿಸಿದರು.

ಖಾಸಗಿ ಕಾರ್ಯಕ್ರಮದ ನಿಮಿತ್ತ ದೆಹಲಿಗೆ ತೆರಳುತ್ತಿರುವುದಾಗಿ ಡಿ.ಕೆ. ಶಿವಕುಮಾರ್ ಕಚೇರಿ ಮಾಹಿತಿ ನೀಡಿದೆ. ಈ ಭೇಟಿ ರಾಜಕೀಯವಾಗಿ ನಾನಾ ರೀತಿಯ ಚರ್ಚೆಗಳನ್ನು ಹುಟ್ಟು ಹಾಕಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬಜೆಟ್ ಮಂಡನೆಗೆ ಅವಕಾಶ ನೀಡಬಾರದು. ತಾವೇ ಬಜೆಟ್ ಮಂಡಿಸುವುದಾಗಿ ಡಿ.ಕೆ. ಶಿವಕುಮಾರ್ ಕಳೆದ ಡಿಸೆಂಬರ್‌ನಲ್ಲಿ ಪಟ್ಟುಹಿಡಿದಿದ್ದರು. ಆದರೆ, ಹೈಕಮಾಂಡ್ ಡಿ.ಕೆ. ಶಿವಕುಮಾರ್ ಅವರ ಹಠಕ್ಕೆ ಜಗ್ಗಿರಲಿಲ್ಲ. ನಿರೀಕ್ಷೆಯಂತೆ ಸಿದ್ದರಾಮಯ್ಯ ಬಜೆಟ್ ಮಂಡಿಸಿ ಆಗಿದೆ. ಈಗಲಾದರೂ ಸಿದ್ದರಾಮಯ್ಯ ಅವರು ಅಧಿಕಾರ ಬಿಟ್ಟುಕೊಡಬೇಕು. ಈ ನಿಟ್ಟಿನಲ್ಲಿ ಹೈಕಮಾಂಡ್ ನಿರ್ದಿಷ್ಟವಾದ ಸೂಚನೆ ನೀಡಬೇಕು ಎಂಬುದು ಡಿ.ಕೆ. ಶಿವಕುಮಾರ್ ಅವರ ಪ್ರತಿಪಾದನೆಯಾಗಿದೆ.

ಸಿದ್ದರಾಮಯ್ಯ ಅವರು ಪದೇ ಪದೇ ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ. ಹೈಕಮಾಂಡ್ ಬಿಡು ಎಂದರೆ ಬಿಡುತ್ತೇನೆ, ಇರು ಎಂದರೆ ಇರುತ್ತೇನೆ ಎಂದು ಹೇಳುತ್ತಲೇ ಬಂದಿದ್ದಾರೆ. ಅಧಿಕಾರ ಹಂಚಿಕೆ ರಾಜ್ಯ ಮಟ್ಟದಲ್ಲಿ ತೀರ್ಮಾನವಾಗಲು ಸಾಧ್ಯವಿಲ್ಲ, ದೆಹಲಿಯಲ್ಲೇ ಅದರಲ್ಲೂ ಹೈಕಮಾಂಡ್ ಸಮುಖದಲ್ಲೇ ಇತ್ಯರ್ಥವಾಗಬೇಕೆಂಬುದು ಖಚಿತವಾಗಿದೆ. ಹೀಗಾಗಿ ಹೈಕಮಾಂಡ್ ಮೇಲೆ ಒತ್ತಡ ಹೇರಲು ಡಿ.ಕೆ. ಶಿವಕುಮಾರ್ ನಾನಾ ರೀತಿಯ ಪ್ರಯತ್ನ ಮುಂದುವರಿಸಿದ್ದಾರೆ.

ಈವರೆಗೂ ಡಿ.ಕೆ. ಶಿವಕುಮಾರ್ ಅವರಿಗೆ ರಾಹುಲ್ ಗಾಂಧಿ ಭೇಟಿಯಾಗಲು ಅವಕಾಶ ನೀಡಿಲ್ಲ. ರಾಹುಲ್ ಗಾಂಧಿ ಹೇಳಿದರೆ ನಾಯಕತ್ವ ತ್ಯಜಿಸುವುದಾಗಿ ಸಿದ್ದರಾಮಯ್ಯ ಅವರು ಪದೇ ಪದೇ ಹೇಳುತ್ತಿದ್ದಾರೆ. ಆದರೆ, ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಅವರಿಗೆ ಸೂಚನೆ ನೀಡುವ ಲಕ್ಷಣಗಳು ಸದ್ಯಕ್ಕೆ ಕಾಣುತ್ತಿಲ್ಲ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಡಿ.ಕೆ. ಶಿವಕುಮಾರ್ ನಾನಾ ರೀತಿಯ ಒತ್ತಡ ಹೇರಲು ಪ್ರಯತ್ನಿಸುತ್ತಿದ್ದಾರೆ. ಆದರೆ, ಇದು ಮಲ್ಲಿಕಾರ್ಜುನ್ ಖರ್ಗೆ ಅವರ ಕೈಮೀರಿ ಹೋಗಿರುವುದರಿಂದ ಹೈಕಮಾಂಡ್ ಕೂಡ ಸಂಕಷ್ಟಕ್ಕೆ ಸಿಲುಕಿದೆ. ಪಟ್ಟು ಬಿಡದ ಡಿ.ಕೆ. ಶಿವಕುಮಾರ್ ಶತಾಯಗತಾಯ ಅಧಿಕಾರ ದಕ್ಕಿಸಿಕೊಳ್ಳಲೇಬೇಕೆಂದು ಲಾಬಿ ಮುಂದುವರೆಸಿದ್ದಾರೆ.

ಪಂಚರಾಜ್ಯಗಳ ವಿಧಾನಸಭೆ ಚುನಾವಣೆ ಮುಗಿಯುವವರೆಗೂ ಸಹನೆಯಿಂದ ಇರುವಂತೆ ವರಿಷ್ಠ ನಾಯಕರು ಹಲವಾರು ಬಾರಿ ಸೂಚನೆ ನೀಡಿದ್ದಾರೆ. ಅದಕ್ಕೆ ಡಿ.ಕೆ. ಶಿವಕುಮಾರ್ ಒಪ್ಪುತ್ತಿಲ್ಲ. ಈಗಾಗಲೇ ಎರಡು ಮುಕ್ಕಾಲು ವರ್ಷ ಕಳೆದುಹೋಗಿದೆ.



ಬಾಕಿ ಇರುವ ಅವಧಿಗೆ ತಮಗೆ ಅವಕಾಶ ಸಿಗಬೇಕು. ಇಲ್ಲವಾದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ಹಾನಿಯಾಗಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

ಜಿಬಿಎಯ ವ್ಯಾಪ್ತಿಯ 5 ಮಹಾನಗರ ಪಾಲಿಕೆಗಳು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಚುನಾವಣೆಗಳು ನಡೆಯಬೇಕಿದೆ. ಈ ಸಂದರ್ಭದಲ್ಲಿ ಪಕ್ಷವನ್ನು ಗೆಲ್ಲಿಸಿಕೊಂಡು ಬರಬೇಕಾದರೆ ಸಮರ್ಥ ನಾಯಕತ್ವ ಬೇಕು ಎಂಬ ಬೇಡಿಕೆಯನ್ನು ಡಿ.ಕೆ. ಶಿವಕುಮಾರ್ ಮುಂದಿಟ್ಟಿದ್ದಾರೆ. ಈಗಾಗಲೇ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಗಾಂಧಿ, ಕಾಂಗ್ರೆಸ್ ಸಂಸದೀಯ ಮಂಡಳಿ ಅಧ್ಯಕ್ಷೆ ಸೋನಿಯಾ ಗಾಂಧಿ ಸೇರಿದಂತೆ ಹಲವರನ್ನು ಭೇಟಿ ಮಾಡಿ ಡಿ.ಕೆ. ಶಿವಕುಮಾರ್ ಒತ್ತಡ ಹೇರುವ ಪ್ರಯತ್ನ ಮಾಡಿದರು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಎಲ್ಲವೂ ರಾಹುಲ್‌ಗಾಂಧಿ ಅವರ ಮೇಲೆ ಅವಲಂಬಿತವಾಗಿದೆ.

# ಬಜೆಟ್‌ನಲ್ಲಿ ಮೂಗಿಗೆ ತುಪ್ಪ ಸವರುವುದು ಉಚಿತ ; ಎಲ್ಲರ ತಲೆ ಮೇಲೆ ಸಾಲ ಖಚಿತ : ಛಲವಾದಿ



ಬೆಂಗಳೂರು, ಮಾ. 8 - ರಾಜ್ಯ ಬಜೆಟ್‌ನ ಮೂಲಕ ಇಡೀ ರಾಜ್ಯದ ಜನರಿಗೆ ಮೂಗಿಗೆ ತುಪ್ಪ ಸವರುವುದು ಉಚಿತ, ಎಲ್ಲರ ತಲೆ ಮೇಲೆ ಸಾಲ ಖಚಿತ, ರಾಜ್ಯದ ಜನರಿಗೆ ಸಂಕಷ್ಟ ನಿಶ್ಚಿತ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಟೀಕಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರಕಾರದ 2026-27ರ ಆಯವ್ಯಯ ಪತ್ರವನ್ನು ಮುಖ್ಯಮಂತ್ರಿಗಳು ಮತ್ತು ಹಣಕಾಸು ಸಚಿವ ಸಿದ್ದರಾಮಯ್ಯನವರು ಮಂಡಿಸಿದ್ದಾರೆ ಎಂದ ಅವರು, ರಾಜ್ಯ ಸರಕಾರವು ಉಚಿತ, ಖಚಿತ, ನಿಶ್ಚಿತ ಎಂಬ ಘೋಷವಾಕ್ಯದಡಿ ಅಧಿಕಾರಕ್ಕೆ ಬಂದಿತ್ತು ಎಂದು ಗಮನ ಸೆಳೆದರು.

ಪರಿಶಿಷ್ಟ ಜಾತಿ-ವರ್ಗಗಳಿಗೆ ವಿಶೇಷಗಳಿವೆ. ಅವರಿಗೆ ಘೋಷಣೆಗಳು ಉಚಿತ, ದೋಖಾ ಖಚಿತ, ನಂಬಿದವರ ಸರ್ವನಾಶ ನಿಶ್ಚಿತ ಎಂದು ವಿಶ್ಲೇಷಿಸಿದರು. ಈ ಸರಕಾರ ಅಧಿಕಾರಕ್ಕೆ ಬಂದ ಬಳಿಕ ಪರಿಶಿಷ್ಟ ಜಾತಿ-ವರ್ಗಗಳಿಗೆ ಎಸ್‌ಇಪಿ, ಟಿಎಸ್‌ಪಿ ಅಡಿ ಎಷ್ಟು ಹಣ ಮೀಸಲಿಟ್ಟಿದ್ದರೋ, ಅದರ ವಿವರ ನೀಡುವುದಾಗಿ ಹೇಳಿದರು.

2023-24ರಲ್ಲಿ 30,930 ಕೋಟಿ ಹಣ ಮೀಸಲಿಟ್ಟಿದ್ದರು. 2024-25ರಲ್ಲಿ 39,122 ಕೋಟಿ ಇಟ್ಟಿದ್ದರು. 2025-26ರಲ್ಲಿ 42,017 ಕೋಟಿ, ಈ ಬಾರಿ 44,632 ಕೋಟಿ ಇಟ್ಟಿದ್ದಾಗಿ ಘೋಷಿಸಿದ್ದಾರೆ. 4 ವರ್ಷಗಳಲ್ಲಿ 1,56,701 ಕೋಟಿ ರೂ. ಕೊಟ್ಟ ಘೋಷಣೆ ಮಾಡಿದ್ದಾರೆ. ಜನರು ಬಹಳ ಖುಷಿ ಆಗಬಹುದು. ಇದರಲ್ಲಿ ಶೇ. 50 ಹಣವನ್ನು 7 ಸಿ ಅಡಿಯಲ್ಲಿ 78,350 ಕೋಟಿ ರೂಪಾಯಿಯನ್ನು ಪಿಡಬ್ಲ್ಯುಡಿ, ನೀರಾವರಿ ಮತ್ತಿತರ ಇಲಾಖೆಗಳಿಗೆ ಹಂಚಿದ್ದಾರೆ. ಉಳಿದ 78,350 ಕೋಟಿ ರೂಪಾಯಿಯಡಿ ಗ್ಯಾರಂಟಿಗಳಿಗೆ 53,059 ಕೋಟಿ ಹಣವನ್ನು ಇವತ್ತಿನವರೆಗೆ ತೆಗೆದಿದ್ದಾರೆ ಎಂದು ಟೀಕಿಸಿದರು.

# 14 ವರ್ಷದ ಹಿಂದೆ ಬ್ಯಾಂಕ್‌ನಲ್ಲಿ ಗ್ರಾಹಕನ ಕೊಲೆ ; ದರೋಡೆ ಪ್ರಕರಣ : ನಾಲ್ವರಿಗೆ ಜೀವಾವಧಿ ಶಿಕ್ಷೆ

ಬೆಂಗಳೂರು, ಮಾ.8 - ಕಳೆದ 14 ವರ್ಷದ ಹಿಂದೆ ನಗರವನ್ನು ಬೆಚ್ಚಿಬೀಳಿಸಿದ್ದ ಕಾರ್ಪೋರೇಷನ್ ಬ್ಯಾಂಕ್‌ನ ಚಿಕ್ಕಬಾಣಾವರ ಶಾಖೆಯಲ್ಲಿ ನಡೆದಿದ್ದ ಗ್ರಾಹಕನ ಕೊಲೆ ಮತ್ತು ರೂ.15 ಲಕ್ಷ ದರೋಡೆ ಪ್ರಕರಣ ಸಂಬಂಧ ಬಿಹಾರ ರಾಜ್ಯದ ಮೂವರು ಮತ್ತು ಛತ್ತೀಸಗಢದ ಒಬ್ಬನಿಗೆ ಜೀವಾವಧಿ ಶಿಕ್ಷೆ ವಿಧಿಸಿ ಈಚೆಗೆ ಹೈಕೋರ್ಟ್ ಆದೇಶಿಸಿದೆ.

ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿಗಳಾದ ಎಚ್.ಪಿ ಸಂದೇಶ್ ಮತ್ತು ಟಿ ವೆಂಕಟೇಶ್ ನಾಯಕ್ ಅವರ ವಿಭಾಗೀಯ ಪೀಠ ಭಾಗಶಃ ಪುರಸ್ಕರಿಸಿದೆ.

ಬಿಹಾರ ಮೂಲದ ದೇವೇಶ್ ಕುಮಾರ್ ಸಿಂಗ್, ವಿಕಾಸ್ ಕುಮಾರ್ ಗುಪ್ತಾ, ಇಮ್ರಾನ್ ಮತ್ತು ಛತ್ತೀಸ್‌ಗಢದ ಪ್ರೇಮ ಕುಮಾರ್ ಸಾಹುಗೆ ನ್ಯಾಯಾಲಯವು ಜೀವಾವಧಿ ಶಿಕ್ಷೆ ವಿಧಿಸಿದೆ.

ನಾಲ್ವರೂ ಅಪರಾಧಿಗಳು ಎರಡು ವಾರದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏಳನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಮುಂದೆ ಹಾಜರಾಗಬೇಕು. ವಿಚಾರಣಾಧೀನ ನ್ಯಾಯಾಲಯವು ಅಪರಾಧಿಗಳಿಗೆ ಶಿಕ್ಷೆ ಅನುಭವಿಸಲು ಜೈಲಿಗೆ ಕಳುಹಿಸಬೇಕು. ಅಪರಾಧಿಗಳಿಗೆ ವಿಧಿಸಲಾದ ತಲಾ ರೂ. 90 ಸಾವಿರ ಪೈಕಿ ಶೇ.80ರಷ್ಟು ಹಣವನ್ನು ಘಟನೆಯಲ್ಲಿ ಕೊಲೆಗೀಡಾದ ಮುರಳೀಧರ ಪತ್ನಿಗೆ ಪರಿಹಾರವಾಗಿ ನೀಡಬೇಕು ಎಂದು ಪೀಠ ನಿರ್ದೇಶಿಸಿದೆ.

2012ರ ನವೆಂಬರ್ 19ರಂದು ಸಂಜೆ 4 ಗಂಟೆಗೆ ತಲೆ ಟೋಪಿತೊಟ್ಟು ಕೈಯಲ್ಲಿ ಪಿಸ್ತೂಲ್ ಹಿಡಿದು ಕಾರ್ಪೋರೇಷನ್ ಬ್ಯಾಂಕಿನ ಚಿಕ್ಕಬಾಣಾವರ ಶಾಖೆಯ ಒಳ ನುಗ್ಗಿದ ದೇವೇಶ್ ಕುಮಾರ್ ಸಿಂಗ್, ಮ್ಯಾನೇಜರ್ ಅನ್ನು ಹೊರಗೆ ಕರೆದು ಹಣ ನೀಡಲು ಬೇಡಿಕೆಯಿಟ್ಟಿದ್ದ. ಅಲ್ಲದೆ, ಗ್ರಾಹಕರಿಗೆ ಪಿಸ್ತೂಲ್ ತೋರಿಸಿ ಕದಲದಂತೆ ಎಚ್ಚರಿಕೆ ನೀಡಿದ್ದ. ಆದರೆ, ಆ ಎಚ್ಚರಿಕೆಯನ್ನು ಪಾಲಿಸದ್ದಕ್ಕೆ ಮುರಳೀಧರ್‌ಗೆ ದೇವೇಶ್ ಗುಂಡಿಟ್ಟಿದ್ದ. ನಂತರ ಕ್ಯಾಷಿಯರ್‌ನಿಂದ ರೂ.15.23 ಲಕ್ಷ ದರೋಡೆ ಮಾಡಿ ಪರಾರಿಯಾಗಿದ್ದನು.

# ಸ್ವಂತ ಮಗಳನ್ನು ವೇಶ್ಯಾವಾಟಿಕೆ ದಂಧೆಗೆ ದೂಡಿದ ಆರೋಪ ; ಸಂತ್ರಸ್ತೆಯನ್ನು ತಾಯಿಯ ಸುಪರ್ದಿಗೆ ವಹಿಸಲು ನಿರಾಕರಣೆ

ಬೆಂಗಳೂರು, ಮಾ. 8 - ಸ್ವಂತ ಮಗಳನ್ನು ತಾಯಿಯೇ ವೇಶ್ಯಾವಾಟಿಕೆ ದಂಧೆಗೆ ದೂಡಿದ ಆರೋಪ ಹಿನ್ನೆಲೆಯಲ್ಲಿ ವೇಶ್ಯಾವಾಟಿಕೆ ಜಾಲದಿಂದ ರಕ್ಷಿಸಲ್ಪಟ್ಟ ಸಂತ್ರಸ್ತೆಯನ್ನು ತಾಯಿಯ ಸುಪರ್ದಿಗೆ ವಹಿಸಲು ನಿರಾಕರಿಸಿದ್ದ ವಿಚಾರಣಾಧೀನ ನ್ಯಾಯಾಲಯದ ಆದೇಶವನ್ನು ಕರ್ನಾಟಕ ಹೈಕೋರ್ಟ್ ಈಚೆಗೆ ಎತ್ತಿಹಿಡಿದಿದೆ.

ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದೆ.

ವ್ಯಾಜ್ಯದ ವಿಷಯವು ಅಪರಾಧದ ಬಗ್ಗೆ ಅಥವಾ ಸರ್ಕಾರ ಸಲ್ಲಿಸಿರುವ ಆರೋಪ ಪಟ್ಟಿಗೆ ಸಂಬಂಧಿಸಿದ್ದಲ್ಲ. ಬದಲಿಗೆ, ಸಂತ್ರಸ್ತೆ ಮತ್ತು ಇತರರ ಹೇಳಿಕೆಗಳು ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಒತ್ತಾಯಿಸಿದ್ದಾಳೆ ಎಂಬುದನ್ನು ಮೇಲ್ನೋಟಕ್ಕೆ ಸೂಚಿಸುತ್ತವೆ. ವೇಶ್ಯಾವಾಟಿಕೆ ದಂಧೆಯಿಂದ ಸಂತ್ರಸ್ತೆಯನ್ನು ರಕ್ಷಿಸಿ ಮಕ್ಕಳ ಕಲ್ಯಾಣ ಕೇಂದ್ರದ ವಶದಲ್ಲಿರಿಸಿದ್ದರೆ, ತಾಯಿಯೇ ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳುತ್ತಿದ್ದಾಳೆ ಎಂಬ ಆರೋಪಗಳಿವೆ. ಇಂಥ ಸಂದರ್ಭದಲ್ಲಿ ಮಗುವನ್ನು ತಾಯಿಯ ವಶಕ್ಕೆ ನೀಡಬಾರದು ಎಂಬ ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕರ ವಾದ ಸರಿಯಾಗಿದೆ ಎಂದು ನ್ಯಾಯಾಲಯ ಆದೇಶದಲ್ಲಿ ಅಭಿಪ್ರಾಯಪಟ್ಟಿದೆ.

# ಮೋದಿ ಭಾರತದ ವ್ಯೂಹಾತ್ಮಕ ಸ್ವಾತಂತ್ರ್ಯವನ್ನು ಬೇರೊಂದು ರಾಷ್ಟ್ರದ ಪಾದದಡಿ ಇಟ್ಟಿದ್ದಾರೆ : ಸಿದ್ದರಾಮಯ್ಯ

## ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ : ಸಿಎಂ



ಬೆಂಗಳೂರು, ಮಾ. 8 - ಭಾರತದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಹಣದುಬ್ಬರ ಮತ್ತು ಬೆಲೆ ಏರಿಕೆಯಿಂದ ತತ್ತರಿಸಿಹೋಗಿರುವ ಸಮಯದಲ್ಲಿಯೇ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಎಲ್‌ಪಿಜಿ ಸಿಲಿಂಡರ್ ದರ ಹೆಚ್ಚಿಸಿರುವುದು ನೆಲಕ್ಕೆ ಬಿದ್ದವನಿಗೆ ಒದ್ದಂತಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದ್ದಾರೆ

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ಗೃಹ ಬಳಕೆಯ ಸಿಲಿಂಡರ್‌ಗಳ ಬೆಲೆಯನ್ನು ಸುಮಾರು 60ರಷ್ಟು ಹೆಚ್ಚಿಸಿರುವುದರಿಂದ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಜೀವನನಿರ್ವಹಣೆಯ ವೆಚ್ಚ ದುಬಾರಿಯಾಗಲಿದೆ.

ಈ ಏರಿಕೆ ಅನಿವಾರ್ಯ ಕ್ರಮವೇನಲ್ಲ, ಇದು ಶರಣಾಗತಿಯನ್ನೇ ದೇಶದ ಕಾರ್ಯತಂತ್ರವೆಂದು ತಪ್ಪಾಗಿ ತಿಳಿದುಕೊಂಡ ವಿದೇಶಾಂಗ ನೀತಿಯ ಫಲವಾಗಿದೆ ಎಂದು ವಾಗ್ದಾಳಿ ನಡೆಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಮಾತುಗಳಿಗೆ ಮೂಕರಂತೆ ತಲೆಯಾಡಿಸುವ ಮೂಲಕ ಭಾರತದ ವ್ಯೂಹಾತ್ಮಕ ಸ್ವಾತಂತ್ರ್ಯವನ್ನು ಬೇರೊಂದು ರಾಷ್ಟ್ರದ ಪಾದದಡಿ ಇಟ್ಟಿದ್ದಾರೆ ಮತ್ತು ರಷ್ಯಾ ಹಾಗೂ ಇರಾನ್‌ನಂತಹ ದೇಶಗಳೊಂದಿಗಿನ ಭಾರತದ ದೀರ್ಘಕಾಲೀನ ಇಂಧನ ಸಹಭಾಗಿತ್ವವನ್ನು ಹಾಳುಗೆಡವಿದ್ದಾರೆ.

ಪಂಡಿತ್ ಜವಾಹರಲಾಲ್ ನೆಹರೂರವರ ಪ್ರಕಾರ ವಿದೇಶಾಂಗ ನೀತಿಯು ಆರ್ಥಿಕ ನೀತಿಯ ಪರಿಣಾಮವಾಗಿದೆ. ನೆಹರೂ ಅವರು ಏಳೆಂಟು ದಶಕಗಳ ಹಿಂದೆಯೇ ನೀಡಿದ್ದ ಎಚ್ಚರಿಕೆ ಇಂದು ಅಕ್ಷರಶಃ ಸತ್ಯವಾಗಿದೆ. ರಾಜತಾಂತ್ರಿಕತೆ ಎನ್ನುವುದು ಕಾರ್ಯತಂತ್ರವಾಗದೆ, ಪ್ರದರ್ಶನದ ವಸ್ತುವಾಗಿ ಮಾರ್ಪಟ್ಟಾಗ, ಅದಕ್ಕೆ ಅನಿವಾರ್ಯವಾಗಿ ಬಡವರು ಮತ್ತು ಮಧ್ಯಮ ವರ್ಗದ ಜನರು ಬಲಿಯಾಗುತ್ತಾರೆ.

ಇತ್ತೀಚೆಗೆ ತಮ್ಮ ಪುಸ್ತಕದಲ್ಲಿ ಮಾಜಿ ಸೇನಾಧಿಕಾರಿ ಜನರಲ್ ಎಂ.ಎಂ. ನರವಣೆ ಅವರು ಭಾರತದ ವಿದೇಶಾಂಗ ನೀತಿ ನಿರ್ಧಾರಗಳಲ್ಲಿ ಸಾಂಸ್ಥಿಕ ಸಮಾಲೋಚನೆ ಮತ್ತು ವ್ಯೂಹಾತ್ಮಕ ತಿಳುವಳಿಕೆಯ ಕೊರತೆಯ ಬಗ್ಗೆ ಗಂಭೀರ ಆತಂಕಗಳನ್ನು ಎತ್ತಿದ್ದರು. ಇದು ಪ್ರಧಾನಮಂತ್ರಿಗೆ ರಾಜತಾಂತ್ರಿಕ ನಿಲುವು ಮತ್ತು ಅದರ ಆರ್ಥಿಕ ಪರಿಣಾಮಗಳ ಮೂಲಭೂತ ತಿಳುವಳಿಕೆಯ ಕೊರತೆ ಇದೆ ಎಂಬ ಅನುಮಾನವನ್ನು ಖಚಿತಪಡಿಸುವಂತಿದೆ ಎಂದಿದ್ದಾರೆ.

ಭಾರತದ ಇಂದಿನ ವಿದೇಶಾಂಗ ನೀತಿಯ ವೈಫಲ್ಯವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎಫ್‌ಸ್ಟೀನ್ ಫೈಲ್ಸ್‌ನ ಬಗೆಗಿನ ಭಯ ಮತ್ತು ರಾಜತಾಂತ್ರಿಕ ತೀರ್ಮಾನಗಳಲ್ಲಿನ ಅಜ್ಞಾನವನ್ನು ತೋರುತ್ತದೆ. ಪ್ರಧಾನಿಗಳು ತಮ್ಮ ರಾಜತಾಂತ್ರಿಕ ವೈಫಲ್ಯಕ್ಕೆ ಕೋಟ್ಯಂತರ ಭಾರತೀಯರು ಯಾಕೆ ಬೆಲೆ ತೆರಬೇಕು ಎನ್ನುವುದನ್ನು ತಿಳಿಸಲಿ. ಜಾಗತಿಕ ಮಟ್ಟದಲ್ಲಿ ದೇಶದ ಮಾನ ಕಳೆಯುತ್ತಿರುವ ಮೋದಿಯವರು ಬಹಿರಂಗವಾಗಿ ದೇಶದ ಜನರ ಕ್ಷಮೆಯಾಚಿಸಲಿ ಮತ್ತು ರಾಜೀನಾಮೆ ನೀಡಲಿ ಎಂದು ಒತ್ತಾಯಿಸಿದ್ದಾರೆ.

# ಬಳ್ಳಾರಿ : ವಸತಿ ಶಾಲೆಯಲ್ಲಿ ವಿದ್ಯಾರ್ಥಿಯೊಬ್ಬನಿಂದ 8 ವಿದ್ಯಾರ್ಥಿಗಳು ಮತ್ತು ವಾರ್ಡನ್ ಮೇಲೆ ಹಲ್ಲೆ ; ಓರ್ವ ವಿದ್ಯಾರ್ಥಿ ಮೃತ್ಯು

ಬಳ್ಳಾರಿ, ಮಾ. 8 - ಬಳ್ಳಾರಿಯ ಗುರುಕುಲ ವಸತಿ ಶಾಲೆಯಲ್ಲಿ 9ನೇ ತರಗತಿ ವಿದ್ಯಾರ್ಥಿಯೊಬ್ಬ ಕ್ಷುಲ್ಲಕ ಕಾರಣಕ್ಕೆ ಇತರ ವಿದ್ಯಾರ್ಥಿಗಳು ಮತ್ತು ವಾರ್ಡನ್ ಮೇಲೆ ರಾಡ್‌ನಿಂದ ಹಲ್ಲೆ ನಡೆಸಿದ್ದಾನೆ. ಈ ಭೀಕರ ಘಟನೆಯಲ್ಲಿ ಓರ್ವ ವಿದ್ಯಾರ್ಥಿ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ಈ ಘಟನೆಯಲ್ಲಿ 8 ಬಾಲಕರು ಗಂಭೀರ ಗಾಯಗೊಂಡಿದ್ದಾರೆ. ಅದರಲ್ಲಿ ಇಬ್ಬರು ಬಾಲಕರ ಸ್ಥಿತಿ ಗಂಭೀರವಾಗಿದೆ.

ರಾತ್ರಿ ಊಟದ ಬಳಿಕ ಎಲ್ಲರೂ ಮಲಗಿಕೊಂಡ ಮೇಲೆ ವಿದ್ಯಾರ್ಥಿಯೋರ್ವ ಮಂಚದ ರಾಡ್ ತೆಗೆದುಕೊಂಡು ಸಿಕ್ಕಸಿಕ್ಕಾವರ ಮೇಲೆ ಹಲ್ಲೆ ಮಾಡಿದ್ದು, ಎಂಟು ವಿದ್ಯಾರ್ಥಿಗಳ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾನೆ.

ಹಾಸ್ಟೆಲ್‌ನ ವಾರ್ಡನ್ ಮೇಲೂ ಬಾಲಕ ಹಲ್ಲೆ ಮಾಡಿದ್ದು, ಹಲ್ಲೆಯ ಬಳಿಕ ಆತ ಓಡಿ ಹೋಗಿದ್ದಾನೆ. ತಡರಾತ್ರಿ ಈ ಘಟನೆ ನಡೆದಿದ್ದು, ಮಕ್ಕಳ ಪೋಷಕರನ್ನು ಈ ಘಟನೆ ಬೆಚ್ಚಿ ಬೀಳಿಸಿದೆ.

ಮಾಹಿತಿಯ ಪ್ರಕಾರ ಆರಂಭದಲ್ಲಿ ಕ್ಷುಲ್ಲಕ ಕಾರಣಕ್ಕೆ ಗಲಾಟೆಯಾಗಿದ್ದು, ಅದೇ ವಿಚಾರ ದೊಡ್ಡದು ಮಾಡಿದ ಒಂಬತ್ತನೇ ತರಗತಿ ಬಾಲಕನಿಂದ ಸಿಕ್ಕ ಸಿಕ್ಕ ವಿದ್ಯಾರ್ಥಿಗಳ ಮೇಲೆ ಭೀಕರವಾಗಿ ಹಲ್ಲೆ ಮಾಡಿದ್ದಾನೆ. ಪರಿಣಾಮ ರಾಡ್‌ನಿಂದ ಬಿದ್ದ ಏಟಿಗೆ ಓರ್ವ ಬಾಲಕ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಹಾಸ್ಟೆಲ್ ವಾರ್ಡನ್ ಮೇಲೆಯೂ ಬಾಲಕ ಹಲ್ಲೆ ಮಾಡಿದ್ದು, ಗಾಯಾಳುಗಳೆಲ್ಲರೂ ಒಂಬತ್ತನೇ



ತರಗತಿಯಲ್ಲಿ ಓದುತ್ತಿರುವ ಬಾಲಕರಾಗಿದ್ದಾರೆ. ಬಳ್ಳಾರಿ ಬ್ರೂಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿದೆ.

ಘಟನೆಯಲ್ಲಿ ಸಾವನ್ನಪ್ಪಿದ ಬಾಲಕನ ಪೋಷಕರ ಆಕ್ರಂದನ ಮುಗಿಲು ಮುಟ್ಟಿದ್ದು, ವಸತಿ ಶಾಲೆ ಸಿಬ್ಬಂದಿ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಪೋಷಕರು ದೂರಿದ್ದಾರೆ.

ಒಬ್ಬ ಬಾಲಕ ಹೀಗೆ 9 ಜನರನ್ನು ಹೊಡೆಯೋಕೆ ಹೇಗೆ ಸಾಧ್ಯ? ಆರೋಪಿ ಬಾಲಕ ಗಾಂಜಾ ಅಥವಾ ಡ್ರಗ್ಸ್ ತೆಗೆದುಕೊಂಡಿರಬಹುದು ಎಂದು ಪೋಷಕರು ಆರೋಪಿಸಿದ್ದಾರೆ. ಆರೋಪಿ ಬಾಲಕ ಮಂಚದ ರಾಡ್, ಸ್ಕೈವಾರ ಸೇರಿದಂತೆ ಇತರ ವಸ್ತುಗಳಿಂದ ಹೊಡೆದಿದ್ದಾನೆ.

ಮೃತ ಬಾಲಕ ಕಳೆದ ನಾಲ್ಕು ವರ್ಷದಿಂದ ಇದೇ ವಸತಿ ಶಾಲೆಯಲ್ಲಿ ಓದುತ್ತಿದ್ದನು. ಈವರೆಗೆ ಯಾವುದೇ ಸಮಸ್ಯೆಯಾಗಿರಲಿಲ್ಲ. ಆದರೆ, ದಿಢೀರನೇ ಹೀಗೆ ಅಗಲು ಕಾರಣವೇನು? ಎಂದು ಪೋಷಕರು ಪ್ರಶ್ನಿಸಿದ್ದಾರೆ.

ತಡರಾತ್ರಿ ಹಾಸ್ಟೆಲ್‌ನಿಂದ ನಮ್ಮ ಮಗನಿಗೆ ಸೀರಿಯಸ್ ಎಂದು ಫೋನ್ ಮಾಡಿದ್ರು. ಇಲ್ಲಿಗೆ ಬಂದು ಬಂದು ನೋಡಿದ್ರೇ ಮಗನ ಸಾವಾಗಿದೆ ಎಂದ ಮೃತ ಬಾಲಕನ ತಂದೆ ಲಕ್ಷ್ಮೀಕಾಂತ ಕಣ್ಣೀರಿಟ್ಟಿದ್ದಾರೆ.

ಮೃತ ಬಾಲಕ ಆಂಧ್ರ ಮೂಲದ ಅದವಾನಿ ಗ್ರಾಮದವನಾಗಿದ್ದಾನೆ. ಇಷ್ಟು ಜನರ ಮೇಲೆ ಹಲ್ಲೆ ಮಾಡಿದ್ದಾನೆ ಎಂದ್ರೇ ಅವನು ಗಾಂಜಾ ಹೊಡೆದಿದ್ದಾನೆ ಎಂದು ಪೋಷಕರು ಆರೋಪಿಸಿದ್ದಾರೆ. ರಾತ್ರಿ ಊಟದ ಬಳಿಕ ಎಲ್ಲರೂ ಮಲಗಿಕೊಂಡಾಗ ಸಿಕ್ಕ ಸಿಕ್ಕವರ ಮೇಲೆ ಹಲ್ಲೆ ಮಾಡಿದ್ದಾನೆ. ಮಂಚದ ರಾಡ್ , ಸ್ಕೈವರ್, ರೆಡಿಯಮ್ ಕಟರ್ ಚಾಕು ತೆಗೆದುಕೊಂಡು ಹಲ್ಲೆ ಮಾಡಿದ್ದಾನೆ. ಇದಕ್ಕೆ ನಶೆಯೇ ಕಾರಣ ಇರಬಹುದು ಎಂದು ಪೋಷಕರು ಹೇಳಿದ್ದಾರೆ.

ಅಪ್ರಾಪ್ತ ಬಾಲಕನಿಂದ ವಸತಿ ಶಾಲೆಯಲ್ಲಿ ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಮ್ಸ್ ಆಸ್ಪತ್ರೆಯ ಶವಾಗಾರ ಬಳಿ ಎಸ್ಪಿ ಸುಮನ್ ಪನ್ನೇಕರ್ ಆಗಮಿಸಿದ್ದು, ಮೃತ ಬಾಲಕನ ಶವಪರೀಕ್ಷೆ ಮುಕ್ತಾಯವಾಗಿದೆ. ಶಾಲಾ ಆಡಳಿತ ಮಂಡಳಿ ಬರೋವರೆಗೂ ಬಾಡಿ ತೆಗೆದುಕೊಂಡು ಹೋಗಲ್ಲ ಎಂದು ಕುಟುಂಬಸ್ಥರು ಎಸ್ಪಿ ಬಳಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

# ಕರ್ನಾಟಕ

## ಸಂಪಾದಕರ ಮಾತು...

**ಸೋಮವಾರ,09, ಮಾರ್ಚ್ 2026.**

## ಫಡ್ನವಿಸ್ ಬಜೆಟ್ ಗುರಿ ಮುಟ್ಟುವುದು ಸುಲಭವಲ್ಲ

ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಅವರು ಮಾರ್ಚ್ 6 ರಂದು ಶುಕ್ರವಾರ ರಾಜ್ಯದಲ್ಲಿ ಅವರ ಚೊಚ್ಚಲ ಆಯ -ವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ. ರಾಜ್ಯದಲ್ಲಿ ವಿವಿಧ ಮೈತ್ರಿ ಪಕ್ಷಗಳಲ್ಲಿ ಅರ್ಥ ಮಂತ್ರಿಯಾಗಿ 11 ಬಜೆಟ್ ಮಂಡನೆ ಮಾಡಿರುವ ಅಜಿತ್ ಪವಾರ್ ವಿಮಾನ ಪತನ ದುರಂತದಲ್ಲಿ ಮೃತಪಟ್ಟ ಹಿನ್ನಲೆಯಲ್ಲಿ 2026-27ನೇ ಆರ್ಥಿಕ ವರ್ಷದ ಮುಂಗಡ ಪತ್ರವನ್ನು ಮಂಡನೆ ಮಾಡುವ ಹೊಣೆ ಹೊರುವ ಅನಿವಾರ್ಯತೆ ಉಂಟಾಗಿತ್ತು. ಫಡ್ನವೀಸ್ ಅವರು ಮಂಡನೆ ಮಾಡುವ ಬಜೆಟ್ ಬಗ್ಗೆ ಸಹಜವಾಗಿಯೇ ಭಾರೀ ನಿರೀಕ್ಷೆ ಇತ್ತು. ರಾಜ್ಯದ ಅರ್ಥ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಅವರು ಬಲಿಷ್ಠವಾಗಿ ಕಾಯ್ದುಕೊಂಡು ರಾಜ್ಯದ ಅಭಿವೃದ್ಧಿಗೆ ಯೋಜನೆಗಳನ್ನು ಪ್ರಕಟಿಸುತ್ತಾರೆ ಎಂಬ ಕುತೂಹಲ ರಾಜ್ಯದ ಜನರಿಗೆ ಇತ್ತು. ಫಡ್ನವೀಸ್ ಅವರು ಅತ್ಯಂತ ಬೃಹತ್ ಗಾತ್ರದ ಬಜೆಟ್ ಮಂಡನೆ ಮಾಡಿದ್ದಾರೆ. 7,69,467 ಕೋಟಿ ರೂಪಾಯಿ ಮೊತ್ತದ ದಾಖಲೆ ಮುಂಗಡ ಪತ್ರವನ್ನು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಮಂಡಿಸಿದ್ದಾರೆ. ಫಡ್ನವೀಸ್ ಅವರು ಮುಂದಿನ ಆರ್ಥಿಕ ವರ್ಷದಲ್ಲಿ 6,16,099 ಕೋಟಿ ರೂಪಾಯಿ ಕಂದಾಯ ಆದಾಯವನ್ನು ಪ್ರಸ್ತಾವ ಮಾಡಿದ್ದಾರೆ, ವಾರ್ಷಿಕ ಕಂದಾಯ ವೆಚ್ಚ 6,56,651 ಕೋಟಿ ರೂಪಾಯಿ ಎಂದು ಅಂದಾಜಿಸಿದ್ದು ಕಂದಾಯ ಕೊರತೆ 40,552 ಕೋಟಿ ರೂಪಾಯಿ ಎಂದು ಉಲ್ಲೇಖ ಮಾಡಿದ್ದು ಒಟ್ಟು 1,50,491 ಕೋಟಿ ರೂಪಾಯಿಗಳ ಕೊರತೆ ಬಜೆಟ್ ನೀಡಿದ್ದಾರೆ.

ಯಾವುದೇ ರಾಜ್ಯದ ಬಜೆಟ್ ಕೊರತೆ ಮಿತಿ ಒಟ್ಟು ರಾಜ್ಯ ದೇಶೀಯ ಉತ್ಪಾದನೆಯ (ಜಿಎಸ್ ಡಿಪಿ) ಶೇಕಡಾ 3ರ ಒಳಗೆ ಇರಬೇಕು ಎಂಬ ನಿಯಮ ಇದೆ. ಅದನ್ನು ಫಡ್ನವೀಸ್ ಕಾಯ್ದುಕೊಂಡಿದ್ದಾರೆ. 2024ರ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪ್ರಕಟ ಮಾಡಿದ್ದ ಚುನಾವಣಾ ಪ್ರಣಾಳಿಕೆಯಲ್ಲಿ ರೈತರ ಬೆಳೆ ಸಾಲವನ್ನು ಮನ್ನಾ ಮಾಡುವುದಾಗಿ ಭರವಸೆ ನೀಡಿತ್ತು. ಚುನಾವಣೆ ಬಳಿಕ ಮೈತ್ರಿ ಪಕ್ಷ ಶಿವಸೇನೆಯ ಏಕನಾಥ್ ಶಿಂದೆ ಅವರ ಬದಲು ಫಡ್ನವೀಸ್ ಅವರು ಮುಖ್ಯಮಂತ್ರಿಯಾದರು. ಅವರು ಮುಖ್ಯಮಂತ್ರಿ ಆದ ಬಳಿಕ ಅರ್ಥ ಸಚಿವರಾಗಿದ್ದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಬಜೆಟ್ ಮಂಡನೆ ಮಾಡಿದ್ದರು. ಫಡ್ನವೀಸ್ ಅವರು ಮುಖ್ಯಮಂತ್ರಿ ಆದ ಬಳಿಕ ನೀಡಿದ್ದ ಹೇಳಿಕೆಯಲ್ಲಿ ಅರ್ಥ ಸಚಿವ ಅಜಿತ್ ಪವಾರ್ ಅವರು ರೈತರ ಸಾಲ ಮನ್ನಾವನ್ನು ಬಜೆಟಿನಲ್ಲಿ ಘೋಷಣೆ ಮಾಡುತ್ತಾರೆ ಎಂದು ಹೇಳಿದ್ದರು. ಆದರೆ ಅಜಿತ್ ಪವಾರ್ ಅವರು ರಾಜ್ಯದ ಆರ್ಥಿಕ ಸ್ಥಿತಿ ಸುಧಾರಣೆ ಆಗದೆ ರೈತರ ಬೆಳೆ ಸಾಲ ಮನ್ನಾ ಸಾಧ್ಯವಿಲ್ಲ ಎಂದು ಹೇಳಿ ರೈತರ ಸಾಲ ಮನ್ನಾ ಮಾಡಿರಲಿಲ್ಲ. ಪರಿಣಾಮವಾಗಿ ರಾಜ್ಯದ ರೈತರಲ್ಲಿ ಸರಕಾರದ ಬಗ್ಗೆ ಅಸಮಾಧಾನ ಬೆಳೆಯುತ್ತಾ ಇತ್ತು. ರೈತರ ಸಾಲ ಮನ್ನಾ ಮತ್ತು ಮುಖ್ಯಮಂತ್ರಿ ಮಾಝಿ ಲಾಡ್ಕಿ ಬಹೀನ್ ಯೋಜನೆ 2024ರ ವಿಧಾನಸಭಾ ಚುನಾವಣೆಯಲ್ಲಿ ಆಡಳಿತ ಮಹಾಯುತಿ ಅಭೂತಪೂರ್ವ ಗೆಲುವಿಗೆ ದೊಡ್ಡ ಕೊಡುಗೆ ನೀಡಿತ್ತು. ಲಾಡ್ಕಿ ಬಹೀನ್ ಯೋಜನೆ ಮಾಸಿಕ ಮೊತ್ತವನ್ನು 1,500 ರೂಪಾಯಿಯಿಂದ 2,100 ರೂ. ಗೆ ಏರಿಕೆ ಮಾಡುವ ಭರವಸೆಯನ್ನೂ ಮಹಾಯುತಿ ನೀಡಿತ್ತು. ಆದರೆ ಅಜಿತ್ ಪವಾರ್ ಅವರು ರೈತರ ಸಾಲ ಮನ್ನಾ ಘೋಷಣೆಯನ್ನೂ ಮಾಡಿರಲಿಲ್ಲ ಮತ್ತು ಲಾಡ್ಕಿ ಬಹೀನ್ ಯೋಜನೆ ಮೊತ್ತವನ್ನೂ ಏರಿಕೆ ಮಾಡಿರಲಿಲ್ಲ. ರಾಜ್ಯದ ಆರ್ಥಿಕ ಸ್ಥಿತಿ ಅದಕ್ಕೆ ಪೂರಕ ಆಗಿಲ್ಲ ಎನ್ನುವುದು ಅವರ ನಿಲುವಾಗಿತ್ತು.

ಅಜಿತ್ ಪವಾರ್ ವಿಮಾನ ಅಪಘಾತದಲ್ಲಿ ಮೃತ ಪಟ್ಟ ಬಳಿಕ ಅರ್ಥ ಖಾತೆ ಜವಾಬ್ದಾರಿ ವಹಿಸಿಕೊಂಡ ಮುಖ್ಯಮಂತ್ರಿ ಫಡ್ನವೀಸ್ ಅವರಿಗೆ ಸಹಜವಾಗಿಯೇ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಭರವಸೆ ನೀಡಿದ್ದ ರೈತರ ಬೆಳೆ ಸಾಲ ಮನ್ನಾ ಮಾಡುವ ಸವಾಲು ಎದುರಾಗಿತ್ತು. ರೈತರು ಬೆಳೆ ಸಾಲ ಮನ್ನಾ ಮಾಡುವಂತೆ ಒಂದೇ ಸಮನೆ ಆಗ್ರಹಿಸುತ್ತಿದ್ದರೆ ಮತ್ತೊಂದೆಡೆ ಉಪ ಮುಖ್ಯಮಂತ್ರಿ ಶಿವಸೇನೆ ಅಧ್ಯಕ್ಷ ಏಕನಾಥ್ ಶಿಂದೆ ಅವರು ರೈತರ ಸಾಲ ಮನ್ನಾ ಜತೆಗೆ ಲಾಡ್ಕಿ ಬಹೀನ್ ಯೋಜನೆ ಮೊತ್ತವನ್ನು ಏರಿಕೆ ಮಾಡುವ ಭರವಸೆಯನ್ನೂ ಸರಕಾರ ಈಡೇರಿಕೆ ಮಾಡಲಿದೆ ಎಂದು ಸಾರ್ವಜನಿಕ ಸಭೆಗಳಲ್ಲಿ ಹೇಳುತ್ತಲೇ ಬಂದಿದ್ದರು. ಆ ಒತ್ತಡವೂ ಫಡ್ನವೀಸ್ ಅವರ ಮೇಲೆ ಇತ್ತು. ಎಲ್ಲವನ್ನೂ ಗಮನಿಸಿದ ದೇವೇಂದ್ರ ಫಡ್ನವೀಸ್ ಅವರು 2025ರ ಸೆಪ್ಟೆಂಬರ್ 30ರ ತನಕ ಸಾಲ ಮರುಪಾವತಿ ಬಾಕಿಯಿರುವ ರೈತರ ಸಾಲದಲ್ಲಿ 2 ಲಕ್ಷ ರೂಪಾಯಿ ತನಕದ ಬೆಳೆ ಸಾಲ ಮನ್ನಾ ಮಾಡುವುದಾಗಿ ಮತ್ತು ಸಕಾಲದಲ್ಲಿ ಸಾಲ ಪಾವತಿ ಮಾಡಿರುವ ರೈತರಿಗೆ 50,000 ರೂಪಾಯಿಯನ್ನು ಪುಣ್ಯಶ್ಲೋಕ್ ಅಹಲ್ಯಾದೇವಿ ಹೋಳ್ಕರ್ ಶೇತ್ಕರಿ ಸಾಲಮನ್ನಾ ಯೋಜನೆಯಡಿ ಪ್ರೋತ್ಸಾಹ ಧನವಾಗಿ ಮರು ಪಾವತಿ ಮಾಡುವುದಾಗಿ ಫಡ್ನವೀಸ್ ಬಜೆಟ್ ಭಾಷಣದಲ್ಲಿ ಘೋಷಣೆ ಮಾಡಿದ್ದಾರೆ. ರೈತರು ಕನಿಷ್ಠ 3 ಲಕ್ಷ ರೂಪಾಯಿ ತನಕದ ಸಾಲ ಮನ್ನಾ ಮಾಡಬೇಕು ಎಂಬ ಬೇಡಿಕೆ ಇಟ್ಟಿದ್ದರು. ಆದರೆ ಫಡ್ನವೀಸ್ ಅವರ ಬೆಳೆ ಸಾಲ ಮನ್ನಾ ಘೋಷಣೆಯಿಂದ ರೈತರು ಯಾವ ರೀತಿಯಲ್ಲಿ ಅದರ ಫಲಾನುಭವ ಪಡೆಯಲು ಅರ್ಹರು ಎಂದು ಆಯ್ಕೆ ಆಗುತ್ತಾರೆ ಎನ್ನುವುದನ್ನು ಕಾದು ನೋಡಬೇಕಿದೆ. ಅಧಿಕ ಪ್ರಮಾಣದಲ್ಲಿ ರೈತರಿಗೆ ಇದರಿಂದ ಅನುಕೂಲ ಆದರೆ ಮಾತ್ರ ಸಾಲ ಮನ್ನಾದ ಘೋಷಣೆಯಿಂದ ರೈತರಿಗೆ ಲಾಭವಾದೀತು.

ಮುಖ್ಯಮಂತ್ರಿ ಫಡ್ನವೀಸ್ ಅವರು ಮುಂದಿನ ಆರ್ಥಿಕ ವರ್ಷದಲ್ಲಿ ಮತ್ತೆ 25ಲಕ್ಷ ಲಕ್ಷಾಧಿಪತಿ ಸಹೋದರಿಯರನ್ನು ಸೃಷ್ಟಿ ಮಾಡಿ ಮಹಿಳೆಯರನ್ನು ಸಬಲೀಕರಣ ಮಾಡುವ ಘೋಷಣೆ ಮಾಡಿದ್ದಾರೆ.ರಾಜ್ಯದಲ್ಲಿ 18 ಕೈಗಾರಿಕಾ ಕೇಂದ್ರಗಳ ಸ್ಥಾಪನೆ ಮಾಡಿ 50 ಲಕ್ಷ ಹೊಸ ಉದ್ಯೋಗ ಸೃಷ್ಟಿ ಮಾಡುವ ವಿಶ್ವಾಸ ವ್ಯಕ್ತ ಪಡಿಸಿದ್ದಾರೆ. ಆದರೆ ಇದು ಹೇಗೆ ಅನುಷ್ಠಾನಕ್ಕೆ ಬರುತ್ತದೆ ಎನ್ನುವುದು ಅನುಷ್ಠಾನಕ್ಕೆ ಬಂದಾಗ ಮಾತ್ರ ತಿಳಿಯುತ್ತದೆ. ಮಹಾರಾಷ್ಟ್ರ ರಾಜ್ಯ ಎಂದೇ ಅಲ್ಲ ದೇಶದ ಯಾವುದೇ ರಾಜ್ಯದಲ್ಲೂ ಕೈಗಾರಿಕಾ ರಂಗ ಸರಕಾರಗಳು ಘೋಷಣೆ ಮಾಡುವ ರೀತಿಯಲ್ಲಿ ಅಭಿವೃದ್ಧಿ ಆಗುತ್ತಿಲ್ಲ ಮತ್ತು ಹೂಡಿಕೆಗಳೂ ನಡೆಯುತ್ತಿಲ್ಲ. ದೇಶದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಆದರೆ ಮಾತ್ರ ಉದ್ಯೋಗ ಸೃಷ್ಟಿ ಅಧಿಕ ಆಗುತ್ತದೆ. ಕೇವಲ ಯಾಂತ್ರಿಕ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿ ಆದರೆ ರಾಜ್ಯದಲ್ಲಿ 50 ಲಕ್ಷ ಉದ್ಯೋಗ ಸೃಷ್ಟಿ ಅಸಂಭವ.

ಮುಖ್ಯಮಂತ್ರಿ ಫಡ್ನವೀಸ್ ಅವರು ರಾಜ್ಯದಲ್ಲಿ ನದಿಗಳ ಜೋಡಣೆ, ಮೆಟ್ರೋ ರೈಲು, ಮುಂಬಯಿ -ಅಹ್ಮದಾಬಾದ್ ಬುಲೆಟ್ ರೈಲು, ಹಲವು ಮಹಾ ಮಾರ್ಗಗಳ ಪ್ರಸ್ತಾವ ಮಾಡಿದ್ದಾರೆ. ಕೃಷಿ ಕ್ಷೇತ್ರವನ್ನು ಉತ್ತೇಜಿಸಲು ನೀರಾವರಿ ಇತ್ಯಾದಿ ಯೋಜನೆಗಳನ್ನು ಪ್ರಸ್ತಾವ ಮಾಡಿದ್ದಾರೆ. ರಾಜ್ಯಕ್ಕೆ ನಾಲ್ಕನೇ ಮುಂಬಯಿ ನಿರ್ಮಾಣದ ಮತ್ತೊಂದು ವಾಣಿಜ್ಯ ನಗರ ಅಭಿವೃದ್ಧಿ ಯೋಜನೆಯನ್ನು ಘೋಷಣೆ ಮಾಡಿದ್ದಾರೆ. ಮೂಲ ಸೌಕರ್ಯ ಯೋಜನೆಗಳನ್ನು ಫಡ್ನವಿಸ್ ಪ್ರಕಟಿಸಿದ್ದು, ಇದೆಲ್ಲ ದೀರ್ಘ ಕಾಲದ ಯೋಜನೆಗಳಾಗಿವೆ. ನವಿ ಮುಂಬಯಿಯಲ್ಲಿ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯ ಸ್ಥಾಪನೆ ಮತ್ತು 8ರಿಂದ 10 ಶಿಕ್ಷಣ ನಗರಗಳನ್ನು ಅಭಿವೃದ್ಧಿ ಪಡಿಸುವ ಉಲ್ಲೇಖ ಮಾಡಿದ್ದಾರೆ. ಸ್ಟಾರ್ಟ್ಸ್ ಅಪ್‌ಗಳಿಗೆ ಉತ್ತೇಜನ ನೀಡುವುದಾಗಿ ಬಜೆಟಿನಲ್ಲಿ ಪ್ರಸ್ತಾವ ಮಾಡಿರುವ ಮುಖ್ಯಮಂತ್ರಿ,1.25 ಲಕ್ಷ ಹೊಸ ಉದ್ಯಮಿಗಳನ್ನು ಸೃಷ್ಟಿ ಮಾಡುವ ದೀರ್ಘಾವಧಿ ಯೋಜನೆಯ ಬಗ್ಗೆ ಹೇಳಿದ್ದು ಮುಂದಿನ ಐದು ವರ್ಷಗಳಲ್ಲಿ 50,000 ಹೊಸ ಉದ್ಯಮಿಗಳನ್ನು ಸೃಷ್ಟಿ ಮಾಡುವ ಭರವಸೆಯನ್ನು ಪ್ರಕಟಿಸಿದ್ದಾರೆ. ಆದರೆ ಅದನ್ನೆಲ್ಲ ಯಾವ ರೀತಿಯಲ್ಲಿ ಜಾರಿಗೆ ತರುವುದಾಗಿ ಅವರು ಯಾವುದೇ ಯೋಜನೆಗಳ ಪ್ರಸ್ತಾವ ಮಾಡಿಲ್ಲ. ಇದೆಲ್ಲ ಬಜೆಟಿನಲ್ಲಿ ಉಲ್ಲೇಖ ಮಾಡಿದಷ್ಟು ಸುಲಭವಾಗಿ ಜಾರಿಗೆ ಬರಲು ಸಾಧ್ಯವಿಲ್ಲ.ಪ್ರಧಾನಿ ನರೇಂದ್ರ ಮೋದಿ ಅವರು ಭಾರತವನ್ನು 2047ರಲ್ಲಿ ಜಗತ್ತಿನ ಅತಿದೊಡ್ಡ ಅರ್ಥ ವ್ಯವಸ್ಥೆಯನ್ನಾಗಿ ಮಾಡುವ ಘೋಷಣೆ ಮಾಡಿದ್ದು,ಮುಂದಿನ 20 ವರ್ಷಗಳಲ್ಲಿ ಮಹಾರಾಷ್ಟ್ರ 5 ಟ್ರಿಲಿಯನ್ ಅಮೇರಿಕನ್ ಡಾಲರ್ ಅರ್ಥ ವ್ಯವಸ್ಥೆ ಆಗಲಿದೆ ಎಂದು ಫಡ್ನವಿಸ್ ಹೇಳಿದ್ದಾರೆ. ಆದರೆ ಇನ್ನು 20 ವರ್ಷದಲ್ಲಿ ಜಗತ್ತಿನ ಆರ್ಥಿಕತೆಯ ಲೆಕ್ಕಾಚಾರಗಳೇ ಸಾಕಷ್ಟು ಬದಲಾವಣೆ ಆಗಲಿವೆ. ರೂಪಾಯಿ ಮೌಲ್ಯ ಆ ವೇಳೆಗೆ ಯಾವ ಮಟ್ಟಕ್ಕೆ ತಲುಪಲಿದೆ ಎಂದು ಊಹಿಸಲೂ ಸಾಧ್ಯವಿಲ್ಲ. ವಸ್ತುಗಳು ಎಷ್ಟು ದುಬಾರಿ ಆಗಿವೆ ಮತ್ತು ಹಣದ ಬೆಲೆ ಎಷ್ಟು ಕುಸಿದಿದೆ ಎನ್ನುವುದಕ್ಕೆ 10 ಗ್ರಾಂ ಚಿನ್ನದ ಬೆಲೆ 1.60 ಲಕ್ಷ ರೂಪಾಯಿ ದಾಟಿರುವುದು ಸಾಕ್ಷಿಯಾಗಿದೆ. ಫಡ್ನವೀಸ್ ಅವರು ರಾಜ್ಯದ ಬಗ್ಗೆ ಭಾರೀ ನಿರೀಕ್ಷೆ ಮತ್ತು ಅಭಿವೃದ್ಧಿಯ ವಿಶ್ವಾಸ ಹೊಂದಿರುವುದು ಸ್ವಾಗತಾರ್ಹ. ಆದರೆ ಆರ್ಥಿಕತೆಯ ಅಸಮಾನತೆ ಎಲ್ಲಾ ರೀತಿಯ ಅಭಿವೃದ್ಧಿಗೆ ವ್ಯತಿರಿಕ್ತ ಪರಿಣಾಮ ಬೀರಲಿದೆ. ಕೇವಲ ಬೃಹತ್ ಉದ್ದಿಮೆಗಳ ಅಭಿವೃದ್ಧಿ, ಬೃಹತ್ ವಸತಿ ಸಂಕೀರ್ಣ, ಬೃಹತ್ ಮಾಲುಗಳ ನಿರ್ಮಾಣವೇ ಅಭಿವೃದ್ಧಿಯ ಮಾನದಂಡ ಆಗಲಾರದು. ಜನ ಸಾಮಾನ್ಯರ ಜೀವನ ಮಟ್ಟ ಏರಿಕೆ ಆಗದೆ ಮತ್ತು ಮಧ್ಯಮ ಮತ್ತು ಕೆಳ ಮಾಧ್ಯಮ ವರ್ಗದ ಜನರ ಆರ್ಥಿಕ ಸ್ಥಿತಿಯಲ್ಲಿ ಚೇತರಿಕೆ ಆಗದೆ ಮಹಾರಾಷ್ಟ್ರದ ಅರ್ಥಿಕತೆ ನಿರೀಕ್ಷಿತ ಮಟ್ಟಕ್ಕೆ ತಲುಪುವುದು ಕಷ್ಟ ಸಾಧ್ಯವಾಗಿದೆ.

# ಪ್ರವಾಸಿ ತಾಣಗಳು ಸಂಸ್ಕೃತಿಯ ಪ್ರತಿಬಿಂಬ




ಇತಿಹಾಸವು ಆಧಾರಗಳಿಂದಲೇ ಸೃಷ್ಟಿಯಾಗಿದೆ. ಆಧಾರಗಳಿಲ್ಲದೆ ಇತಿಹಾಸವಿಲ್ಲ. ಒಂದು ಸ್ಥಳದಲ್ಲಿ ದೊರೆತ ಸಾಹಿತ್ಯ, ನಾಣ್ಯ, ಶಾಸನ, ಸ್ಮಾರಕ, ದೇವಾಲಯ, ಮುಂತಾದವುಗಳು ತನ್ನದೇ ಚರಿತ್ರೆಯನ್ನು ಜಗತ್ತಿಗೆ ಸಾರುತ್ತವೆ. ಕಾಲ ಎಲ್ಲವನ್ನು ಮೆರೆಸುತ್ತದೆ ಮತ್ತು ಎಲ್ಲವನ್ನು ಮರೆಸುತ್ತದೆ. ಆದರೆ ಅಲ್ಲಿ ಉಳಿಯುವ ಸಾಕ್ಷಿಗಳು ಮತ್ತೆ ಮತ್ತೆ ನೆನಪುಗಳನ್ನು ಮರುಕಳಿಸುತ್ತದೆ. ಕಾಲದ ಹೆಜ್ಜೆ ಗುರುತುಗಳನ್ನು ಹುಡುಕುವುದು ಎಂದರೆ ಒಂದು ಅನ್ವೇಷಣೆಯೇ ಸರಿ. 'ದೇಶ ಸುತ್ತು ಕೋಶ ಓದು' ಎಂಬ ಜನಜನಿತವಾದ ಗಾದೆ ಮಾತು ಕೇವಲ ಜ್ಞಾನಾರ್ಜನೆಯ ಮಾರ್ಗವಲ್ಲ; ಅದು ಮನುಷ್ಯನ ಅಸ್ತಿತ್ವದ ವಿಸ್ತರಣೆಯ ಸಂಕೇತವೂ ಹೌದು. ಇಡೀ ಪ್ರಪಂಚವನ್ನು ಒಂದು ಮಹತ್ತರವಾದ ಗ್ರಂಥವೆಂದು ಭಾವಿಸುವುವಾದರೆ, ಪ್ರೇಕ್ಷಣೀಯ ಸ್ಥಳಗಳು ಆ ಗ್ರಂಥದ ಒಂದೊಂದು ಅಮೂಲ್ಯವಾದ ಅಧ್ಯಾಯಗಳು ಎನ್ನಬಹುದು.

ನಾಗರಿಕತೆಯ ಆರಂಭದಿಂದ ಇಂದಿನ ಆಧುನಿಕ ಯುಗದವರೆಗೆ, ಮನುಷ್ಯ ಹೊಸತನ್ನು ಹುಡುಕುತ್ತಾ, ಪ್ರಕೃತಿಯ ಸೊಬಗನ್ನು ಆರಾಧಿಸುತ್ತಾ ಮತ್ತು ಪೂರ್ವಜರು ಬಿಟ್ಟು ಹೋದ ಸ್ಮಾರಕಗಳ ಮೌನ ಸಂಭಾಷಣೆಯನ್ನು ಆಲಿಸುತ್ತಾ ಸಾಗಿದ್ದಾನೆ. ಪ್ರವಾಸವೆಂಬುದು ಹೊಸ ಚೇತನವನ್ನು ತುಂಬುವ ಪಯಣವಾಗಿದೆ. ಪ್ರವಾಸವೆಂದರೆ ಕೇವಲ ಒಂದು ಭೌಗೋಳಿಕ ಬಿಂದುವಿನಿಂದ ಮತ್ತೊಂದು ಬಿಂದುವಿಗೆ ಚಲಿಸುವುದಲ್ಲ. ಅದು ನಮ್ಮೊಳಗಿನ ಸಂಕುಚಿತ ಭಾವನೆಗಳನ್ನು ಕಿತ್ತೆಸೆದು, ವಿಶಾಲವಾದ ವಿಶ್ವದೊಂದಿಗೆ ಮೇಳೈಸುವ ಪ್ರಕ್ರಿಯೆಯಾಗಿದೆ. ಒಂದು ಕಲ್ಲಿನ ಕೆತ್ತನೆಯಲ್ಲಿ ಅಡಗಿರುವ ಶಿಲ್ಪಿಯ ಶ್ರಮ, ಗೋಪುರದ ಭವ್ಯತೆ ಅಥವಾ ಪ್ರಕೃತಿಯ ಮಡಿಲಲ್ಲಿ ಹರಿಯುವ ಜಲಪಾತದ ನಿನಾದ ಇವೆಲ್ಲವೂ ನಮಗೆ ಬದುಕಿನ ಅರ್ಥವನ್ನು ಹೊಸದಾಗಿ ಕಲಿಸಿಕೊಡುತ್ತವೆ.

> 'ಒಂದು ಪ್ರೇಕ್ಷಣೀಯ ಸ್ಥಳವು ಒಂದು ಜನಾಂಗದ ಸಂಸ್ಕೃತಿ ಮತ್ತು ಕಲಾಪ್ರೌಢಿಮೆಯ ಕೈಗನ್ನಡಿಯಾಗಿರುತ್ತದೆ. ಹಳೇಬೀಡು-ಬೇಲೂರಿನ ಶಿಲ್ಪಕಲೆಗಳು ಕೇವಲ ಕಲ್ಲುಗಳಲ್ಲ, ಅವು ಅಂದಿನ ಕಾಲದ ಜನರ ಸೌಂದರ್ಯ ಪ್ರಜ್ಞೆಯ ಸಾಕಾರ ರೂಪಗಳು. ಹಾಗೆಯೇ, ಪಶ್ಚಿಮ ಘಟ್ಟಗಳ ಹಸಿರು ಕೇವಲ ಅರಣ್ಯವಲ್ಲ, ಅದು ನಮ್ಮ ಜೀವಸಂಕುಲದ ಅಸ್ತಿತ್ವದ ಮೂಲ. ಇವುಗಳನ್ನು ರಕ್ಷಿಸುವುದು ಮತ್ತು ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಈ ಹೊತ್ತಿಗೆಯು ಆ ಜವಾಬ್ದಾರಿಯನ್ನು ಪ್ರತಿಯೊಬ್ಬ ಓದುಗನಲ್ಲೂ ಜಾಗೃತಗೊಳಿಸುತ್ತದೆ ಎಂಬ ನಂಬಿಕೆ ನನಗಿದೆ.'

ನನ್ನ ಹಿತೈಷಿ ಸ್ನೇಹಿತರಾದ ಗೊರೂರು ಅನಂತರಾಜು (9449462879) ಅವರು ಹೆಸರೇ ಹೇಳುವಂತೆ ಗೊರೂರಿನವರು. ಇವರ ಬರಹದ ಹವ್ಯಾಸ ನಿಲ್ಲದ ಪಯಣವಾಗಿದೆ. ತನಗೆ ಗೊತ್ತಿರುವ ವಿಷಯದೊಂದಿಗೆ ಮತ್ತಷ್ಟು ಅಧ್ಯಯನ, ವಿಷಯ ಸಂಗ್ರಹದ ಮೂಲಕ ಲೇಖನಗಳನ್ನು ಪ್ರಕಟಿಸುತ್ತಿರುವ ಇವರು ಅವೆಲ್ಲವನ್ನು ಒಟ್ಟಾಗಿಸಿ ಓದುಗರಿಗೆ ಒಂದೆಡೆ ಸಿಗುವಂತೆ ಮಾಡಿರುವ ಈ ಪ್ರಯತ್ನ ನಿಜಕ್ಕೂ ಶ್ಲಾಘನೀಯವಾದುದು. ಗೊರೂರು ಅನಂತರಾಜುರವರು ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಮೂಲಕ ಸುಮ್ಮನಾಗಲಿಲ್ಲ : ಬದಲಾಗಿ ಆ ಸ್ಥಳದ ಕುರಿತು ಮಾಹಿತಿ ಸಂಗ್ರಹಿಸಿ ಓದುಗ ಬಳಗಕ್ಕೆ ಉಣಬಡಿಸಿದ್ದಾರೆ. ಎಡತೊರೆ ಎನಿಸಿದ ಕಾವೇರಿ ನದಿಯ ತಟದಲ್ಲಿ ನಿರ್ಮಾಣಗೊಂಡಿರುವ ಅರ್ಕೇಶ್ವರ ದೇವಾಲಯ ಕುರಿತ ಮಾಹಿತಿ ನೀಡಿದ್ದಾರೆ. ಮೂಗೂರಿನ ತ್ರಿಪುರ ಸುಂದರಿ ದೇವಾಲಯದ ಕುರಿತ ಮಾಹಿತಿ ವಿಚಾರ ಪೂರ್ಣವಾಗಿದೆ. ತಲಕಾಡಿನಲ್ಲಿ ಪಂಚಲಿಂಗ ದರ್ಶನದ ಬಗೆಗೆ ನೀಡಿರುವ ಮಾಹಿತಿ, ಅಲಮೇಲಮ್ಮನ ವಿಚಾರ, ಕಾವೇರಿ ತಟದಲ್ಲಿನ ಮರಳರಾಶಿ, ಗಂಗ ಇತಿಹಾಸದ ಬಗ್ಗೆ ಬೆಳಕು ಚೆಲ್ಲಿರುವರು. ಬಿಳಿಗಿರಿರಂಗನ ಬೆಟ್ಟದಲ್ಲಿ ನೆಲೆಸಿರುವ ರಂಗನಾಥ ಸ್ವಾಮಿಯ ದೇವಾಲಯದ ಕುರಿತು ನೀಡಿರುವ ಮಾಹಿತಿ ಓದುಗರಿಗೆ ಅತ್ಯುಪಯುಕ್ತವಾಗಿದೆ.

ಬೆಲಗೂರಿನ ಹಾಲು ರಾಮೇಶ್ವರ ದೇವಾಲಯದ ಐತಿಹ್ಯವನ್ನು ತಿಳಿಯುತ್ತಾ ಓದು ಮುಂದುವರಿದಾಗ ಅನಂತರಾಜುರವರ ಹುಟ್ಟೂರಾದ ಗೊರೂರಿನ ತ್ರಿಕೂಟಲಿಂಗೇಶ್ವರ ದೇವಾಲಯ ಮಾಹಿತಿ ದೊರಕುತ್ತದೆ. ಪ್ರವಾಸಿ ತಾಣಗಳ ಕುರಿತು ತಿಳಿಯುವ ನಮ್ಮ ಓದುವ ಪಯಣ, ಗೊರೂರಿನ ರಥಚಕ್ರಗಳ ಕುರಿತಂತೆ ತಿಳಿಸುತ್ತದೆ. ಚುಂಚನಕಟ್ಟೆಯ ಕೋದಂಡರಾಮನ ದೇವಾಲಯದ ವಿಚಾರವನ್ನು ಲೇಖಕರಾದ ಗೊರೂರು ಅನಂತರಾಜು ರವರು ತುಂಬಾ ಚೆನ್ನಾಗಿ ಓದುಗರಿಗೆ ಕಟ್ಟಿಕೊಟ್ಟಿದ್ದಾರೆ. ಈ ಪ್ರವಾಸ ಕಥನ ಕೇವಲ ಕರ್ನಾಟಕದ ಸ್ಥಳಗಳನ್ನು ಮಾತ್ರವಲ್ಲದೇ ತಮಿಳುನಾಡಿನ ಕುಂಭಕೋಣಂನ ನವಗ್ರಹ ದೇವಾಲಯಗಳವರೆಗೂ ಕರೆದೊಯ್ಯುತ್ತದೆ.

ಒಟ್ಟಿನಲ್ಲಿ ಈ ಕೃತಿಯ ಆಶಯವೇನೆಂದರೆ, ಈ ಕೃತಿಯು ಕೇವಲ ಪ್ರವಾಸಿ ತಾಣಗಳ ಪಟ್ಟಿಯಲ್ಲ; ಇದು ಇತಿಹಾಸ ಮತ್ತು ವರ್ತಮಾನದ ನಡುವಿನ ಸೇತುವೆ. ನಮ್ಮ ನಾಡಿನ ಅಪ್ರತಿಮ ವಾಸ್ತುಶಿಲ್ಪ, ಪ್ರಕೃತಿಯ ಅಚ್ಚರಿಗಳು ಮತ್ತು ಧಾರ್ಮಿಕ ಕೇಂದ್ರಗಳ ಹಿಂದಿರುವ ತಾತ್ವಿಕ ಹಿನ್ನೆಲೆಯನ್ನು ಓದುಗರಿಗೆ ಮನದಟ್ಟು ಮಾಡುವ ಪ್ರಯತ್ನ ಇಲ್ಲಿ ನಡೆದಿದೆ. ಪ್ರತಿಯೊಂದು ಸ್ಥಳಕ್ಕೂ ತನ್ನದೇ ಆದ ಕಥೆಯಿದೆ, ತನ್ನದೇ ಆದ ನೋವು-ನಲಿವುಗಳಿವೆ. ಆ ಸ್ಥಳಗಳ ಮೌನದಲ್ಲಿ ಅಡಗಿರುವ ಇತಿಹಾಸದ ಚೀತ್ಕಾರವನ್ನು ಅಥವಾ ಶಾಂತಿಯನ್ನು ಗುರುತಿಸುವ ದೃಷ್ಟಿಕೋನವನ್ನು ಈ ಬರಹಗಳು ನೀಡುತ್ತವೆ. ಪ್ರವಾಸೀ ತಾಣಗಳು ಸಂಸ್ಕೃತಿಯ ಪ್ರತಿಬಿಂಬವಾಗಿವೆ. ಒಂದು ಪ್ರೇಕ್ಷಣೀಯ ಸ್ಥಳವು ಒಂದು ಜನಾಂಗದ ಸಂಸ್ಕೃತಿ ಮತ್ತು ಕಲಾಪ್ರೌಢಿಮೆಯ ಕೈಗನ್ನಡಿಯಾಗಿರುತ್ತದೆ. ಹಳೇಬೀಡು-ಬೇಲೂರಿನ ಶಿಲ್ಪಕಲೆಗಳು ಕೇವಲ ಕಲ್ಲುಗಳಲ್ಲ, ಅವು ಅಂದಿನ ಕಾಲದ ಜನರ ಸೌಂದರ್ಯ ಪ್ರಜ್ಞೆಯ ಸಾಕಾರ ರೂಪಗಳು. ಹಾಗೆಯೇ, ಪಶ್ಚಿಮ ಘಟ್ಟಗಳ ಹಸಿರು ಕೇವಲ ಅರಣ್ಯವಲ್ಲ, ಅದು ನಮ್ಮ ಜೀವಸಂಕುಲದ ಅಸ್ತಿತ್ವದ ಮೂಲ. ಇವುಗಳನ್ನು ರಕ್ಷಿಸುವುದು ಮತ್ತು ಮುಂದಿನ ಪೀಳಿಗೆಗೆ ದಾಟಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

**ಕೆ. ಎನ್. ಚಿದಾನಂದ ಸಹಶಿಕ್ಷಕರು , ಹಾಸನ**

ಈ ಹೊತ್ತಿಗೆಯು ಆ ಜವಾಬ್ದಾರಿಯನ್ನು ಪ್ರತಿಯೊಬ್ಬ ಓದುಗನಲ್ಲೂ ಜಾಗೃತಗೊಳಿಸುತ್ತದೆ ಎಂಬ ನಂಬಿಕೆ ನನಗಿದೆ.

ಪ್ರವಾಸವು ಮನುಷ್ಯನನ್ನು ವಿನಮ್ರನನ್ನಾಗಿ ಮಾಡುತ್ತದೆ. ಜಗತ್ತು ಎಷ್ಟು ವಿಶಾಲವಾಗಿದೆ ಮತ್ತು ಅದರ ಮುಂದೆ ತಾನು ಎಷ್ಟು ಸಣ್ಣವನು ಎಂಬ ಸತ್ಯದ ದರ್ಶನ ಪ್ರವಾಸಿಗನಿಗಾಗುತ್ತದೆ. ಈ ಕೃತಿಯ ಪುಟಗಳನ್ನು ತಿರುವಿದಾಗ ಓದುಗರು ಕೇವಲ ಮಾಹಿತಿಯನ್ನು ಪಡೆಯದೆ, ಆಯಾ ಸ್ಥಳಗಳ ಅನುಭೂತಿಯನ್ನು ಪಡೆಯಲಿ ಎಂಬುದು ನನ್ನ ಆಶಯ. ಆಗ ಮಾತ್ರ ಗೊರೂರು ಅನಂತರಾಜುರವರು ಹೊರತರುತ್ತಿರುವ ಈ ಕೃತಿಯ ಉದ್ದೇಶ ಸಾಧಿತವಾದಂತೆ. ಕಾಲದ ಪ್ರವಾಹದಲ್ಲಿ ಅಳಿಯದೆ ಉಳಿದಿರುವ ಈ ಐತಿಹಾಸಿಕ ಮತ್ತು ನೈಸರ್ಗಿಕ ತಾಣಗಳತ್ತ ಒಂದು ಅರ್ಥಪೂರ್ಣ ಪಯಣ ಬೆಳೆಸಲು ಈ ಕೃತಿ ಪ್ರೇರಣೆಯಾಗಲಿ.

# ಥಾಣೆ: ಆಸ್ಪತ್ರೆ ಮಾಲೀಕರಿಗೆ 10 ಲಕ್ಷ ರೂ. ವಂಚನೆ; ಇಬ್ಬರ ವಿರುದ್ಧ ಪ್ರಕರಣ ದಾಖಲು

ಥಾಣೆ, ಮಾ. 8 - ಮಹಾರಾಷ್ಟ್ರದ ಥಾಣೆ ಜಿಲ್ಲೆಯ ಖಾಸಗಿ ಆಸ್ಪತ್ರೆಯ ಮಾಲೀಕರಿಗೆ 10 ಲಕ್ಷ ರೂ. ವಂಚನೆ ಮಾಡಿದ ಆರೋಪದ ಮೇಲೆ ಇಬ್ಬರು ವ್ಯಕ್ತಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಸಂತ್ರಸ್ತರ ದೂರಿನ ಪ್ರಕಾರ, ಆರೋಪಿಗಳು 2016 ರಲ್ಲಿ ಡೊಂಬಿವಲಿ ಮೂಲದ ಆಸ್ಪತ್ರೆಯ ವೈದ್ಯಕೀಯ ಸೌಲಭ್ಯಗಳಿಗಾಗಿ 10 ವರ್ಷಗಳ ಪಾಲುದಾರಿಕೆಯನ್ನು ಮಾಡಿಕೊಂಡಿದ್ದರು, 63.20 ಲಕ್ಷ ರೂ. ಹೂಡಿಕೆ ಮಾಡಿದ್ದರು. 2017 ಮತ್ತು 2021ರ ನಡುವೆ, ಅವರು ಸುಮಾರು 1.28 ಕೋಟಿ ರೂ. ಲಾಭವನ್ನು ಪಡೆದರು.

ನಂತರ ಆರೋಪಿಗಳು ಪಾಲುದಾರಿಕೆಯಿಂದ ಹಠಾತ್ತನೆ ಹಿಂದೆ ಸರಿದರು, ಹೆಚ್ಚಿನ ಹಣಕ್ಕೆ ಬೇಡಿಕೆ ಇಟ್ಟರು ಮತ್ತು ಸುಳ್ಳು ನೆಪದಲ್ಲಿ ಆಸ್ಪತ್ರೆ ಮಾಲೀಕರಿಂದ 1 ಕೋಟಿ ರೂ.ಗಳ ಚೆಕ್‌ಗಳನ್ನು ಪಡೆದರು. ಇವುಗಳಲ್ಲಿ 10 ಲಕ್ಷ ರೂ.ಗಳನ್ನು ನಗದೀಕರಿಸಲಾಯಿತು, ಆದರೆ ಉಳಿದ ಚೆಕ್‌ಗಳ ಪಾವತಿಯನ್ನು ಅಕ್ರಮದ ಅನುಮಾನದ ನಂತರ ನಿಲ್ಲಿಸಲಾಯಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿಗಳು ಈಗಾಗಲೇ ತಮ್ಮ ಹೂಡಿಕೆಗಿಂತ ಹೆಚ್ಚಿನ ಹಣವನ್ನು ವಸೂಲಿ ಮಾಡಿದ್ದಾರೆ, ಆದರೆ ವೈದ್ಯಕೀಯ ಕ್ಷೇತ್ರದಲ್ಲಿ ದೂರುದಾರರ ಮಾನಹಾನಿ ಮಾಡಲು ಮತ್ತು ವಂಚನೆಯಲ್ಲಿ ತೊಡಗಿದ್ದಾರೆ ಎಂದು ಹಿರಿಯ ಪೊಲೀಸ್ ಇನ್ಸ್‌ಪೆಕ್ಟರ್ ಗಣೇಶ್ ಜಾವದ್ ವಾಡ್‌ಹೇಳಿದರು.

## ನಿತ್ಯ ಚಿಂತನ

ಮನುಷ್ಯರಾದ ನಮ್ಮೆಲ್ಲರ ಜೊತೆಯಲ್ಲಿರ ಬೇಕಾಗಿರುವ ಪ್ರಮುಖ ಎರಡು ಶಕ್ತಿಶಾಲಿ ಸಾಧನಗಳು ಅಥವಾ ಆಯುಧಗಳು ಯಾವುದು ಎಂದರೆ ಅದು ಒಂದು ಮುಖದಲ್ಲಿ ಮುಗುಳು ನಗೆ ಮತ್ತೊಂದು ಮೌನ . ಇವರೆಡನ್ನು ಅವಶ್ಯಕವಾಗಿರಿಸಿ ಕೊಳ್ಳಬೇಕು . ಯಾಕೆಂದರೆ ಇಲ್ಲಿ ಮುಗುಳು ನಗೆ ನಮಗೆ ಅಡ್ಡಿ ಆತಂಕವನ್ನು ಸೃಷ್ಟಿಸುವ ಯಾವುದೇ ಸಮಸ್ಯೆಗಳ ಪರಿಹಾರಕ್ಕೆ ದಾರಿಯನ್ನು ತೋರಿಸಿದರೆ, ಈ ಮೌನ ಎನ್ನುವಂತದ್ದು ಯಾವುದೇ ಸಮಸ್ಯೆಯೇ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಮನುಷ್ಯರಾದ ನಾವು ಶ್ರೇಷ್ಠ ವ್ಯಕ್ತಿಗಳಾಗಿ ಗುರುತಿಸಿ ಕೊಳ್ಳ ಬೇಕಾಗಿರುವುದು ಸಕಲ ಸೌಲಭ್ಯಗಳಿಂದಲ್ಲ. ಅಥವಾ ದೊಡ್ಡ ದೊಡ್ಡ ಮನೆ , ಬಂಗಲೆಗಳಿಂದಲ್ಲ . ಬದಲಾಗಿ ಸಾಧನೆಯಿಂದ ಶ್ರೇಷ್ಠರೆಂದೆನಿಸಿ ಕೊಳ್ಳಬೇಕು . ಕೇವಲ ಮಾತಿನಿಂದ ಅಲ್ಲ . ಒಳ್ಳೆಯ ಕಾಯಕದಿಂದ ಒಳ್ಳೆಯ ಭಾವನೆಯಿಂದ ಶ್ರೇಷ್ಠ ಎಂದೆನಿಸಿಕೊಳ್ಳಬೇಕು . ಕೇವಲ ವ್ಯವಹಾರದಿಂದ ಅಲ್ಲ . ಉತ್ತಮ ನಡವಳಿಕೆಯಿಂದ , ವ್ಯಕ್ತಿತ್ವದಿಂದ ಶ್ರೇಷ್ಠ ಎಂದೆನಿಸಿ ಕೊಳ್ಳಬೇಕು . ಆದ್ದರಿಂದ ಜೀವನದಲ್ಲಿ ಯಾವುದಕ್ಕೂ ಹೆಚ್ಚು ಆಸೆ, ಆಕಾಂಕ್ಷೆ ಪಡಬಾರದು . ಯಾಕೆಂದರೆ ನಮ್ಮ ಹಣೆ ಬರಹದಲ್ಲಿ ಏನಿದೆಯೋ ಅದೇ ನಡೆಯುತ್ತದೆ . ಅದೇ ನಮ್ಮ ಪಾಲಿಗೆ ಸಿಗುತ್ತದೆ ಎಂಬುವುದನ್ನು ಅರಿತು ಬಾಳುವ ಅಗತ್ಯವಿದೆ. ಅಕ್ಷರ ಕಲಿತ ಎಲ್ಲರೂ ಶ್ರೇಷ್ಠರು ಎಂದೆನಿಸುತ್ತಾರೆ ಎನ್ನುವಂತಿಲ್ಲ. ಅವರಲ್ಲಿ ಕೆಲವರು ಭ್ರಷ್ಟರೆಂದೆನಿಸಿ ಕೊಳ್ಳಬಹುದು. ಆದರೆ ಅಕ್ಷರದ ಜೊತೆಗೆ ಸಂಸ್ಕಾರವನ್ನು ಕಲಿತ ವ್ಯಕ್ತಿ ಮಾತ್ರ ಎಂದಿಗೂ ಭ್ರಷ್ಟನಾಗಲಾರ. ಯಾಕೆಂದರೆ ಸಂಸ್ಕಾರಕ್ಕೆ ಮನುಷ್ಯನನ್ನು ತಿದ್ದುವ ಶಕ್ತಿ ಸಾಮರ್ಥ್ಯವಿದೆ ಎಂಬುವುದನ್ನು ತಿಳಿದು ಬಾಳುವ ಅಗತ್ಯವಿದೆ. ಸೋಲು , ಅವಮಾನ , ಮೋಸ ಇವುಗಳು ಮನುಷ್ಯನ ಜೀವನದಲ್ಲಿನ ಸಾಧನೆಗೆ ಬೇಕಾಗಿರುವ ಔಷಧಿಗಳಾಗಿವೆ ಎಂಬ ತಿಳುವಳಿಕೆಯನ್ನು ತಿಳಿದು ಬಾಳುವ ಅಗತ್ಯವಿದೆ.

: ಶ್ರೀಧರ್ ಉಚ್ಚಿಲ್ ( ಮೊ.ನಂಬ್ರ : 9930370553 )

# ಸಮೃದ್ಧಿ ಕಾರಿಡಾರ್‌ನಲ್ಲಿ ಅಪಘಾತಗಳು ಮತ್ತು ಸಾವುಗಳಲ್ಲಿ ತೀವ್ರ ಏರಿಕೆ; ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯಲ್ಲಿ ಇಳಿಕೆ

ಮುಂಬಯಿ, ಮಾ. 8 - 2025ರಲ್ಲಿ ನಾಗ್ಪುರ-ಮುಂಬೈ ಸಮೃದ್ಧಿ ಮಹಾಮಾರ್ಗ್‌ನಲ್ಲಿ ಅಪಘಾತಗಳು ಮತ್ತು ಅವುಗಳಿಂದ ಉಂಟಾದ ಸಾವುಗಳು ತೀವ್ರವಾಗಿ ಏರಿಕೆಯಾಗಿವೆ. ಆದರೆ ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯಲ್ಲಿ ಸಣ್ಣ ಅಪಘಾತಗಳು ಹೆಚ್ಚಳವಾಗಿದ್ದು, ಒಟ್ಟಾರೆ ಅಪಘಾತಗಳಲ್ಲಿ ಸ್ವಲ್ಪ ಇಳಿಕೆಯಾಗಿದೆ ಎಂದು ಅಧಿಕಾರಿಗಳು ಭಾನುವಾರ ಮಹಾರಾಷ್ಟ್ರ ಹೆದ್ದಾರಿ ಪೊಲೀಸರ ತಾತ್ಕಾಲಿಕ ಡೇಟಾವನ್ನು ಉಲ್ಲೇಖಿಸಿ ತಿಳಿಸಿದ್ದಾರೆ.

ಸಮೃದ್ಧಿ ಮಹಾಮಾರ್ಗ್ 2025ರಲ್ಲಿ 185 ಅಪಘಾತಗಳನ್ನು ದಾಖಲಿಸಿದೆ, ಇದು ಹೆದ್ದಾರಿ ಪೊಲೀಸರ ಅಂಕಿ-ಅಂಶಗಳ ಪ್ರಕಾರ 2024ರ 137ರ ಅಂಕಿ ಅಂಶಕ್ಕಿಂತ 35 ಪ್ರತಿಶತದಷ್ಟು ಹೆಚ್ಚಾಗಿದೆ.

ವಿದರ್ಭದ ಅತಿದೊಡ್ಡ ನಗರವನ್ನು ದೇಶದ ಆರ್ಥಿಕ ರಾಜಧಾನಿಗೆ ಸಂಪರ್ಕಿಸುವ ಈ ಕಾರಿಡಾರ್‌ನಲ್ಲಿ ಮಾರಕ ಅಪಘಾತಗಳು 2024 ರಲ್ಲಿ 96 ರಿಂದ 2025 ರಲ್ಲಿ 128 ಕ್ಕೆ ಏರಿತು, ಆದರೆ ಸಾವಿನ ಸಂಖ್ಯೆ 126 ರಿಂದ 152 ಕ್ಕೆ ಏರಿತು, ಇದು ಕ್ರಮವಾಗಿ ಶೇ. 33 ಮತ್ತು ಶೇ. 21 ರಷ್ಟು ಏರಿಕೆಯಾಗಿದೆ.

ಗಂಭೀರ ಗಾಯಗಳನ್ನು ಒಳಗೊಂಡ ಅಪಘಾತಗಳು ಸಹ 23 ರಿಂದ 46 ಕ್ಕೆ ದ್ವಿಗುಣಗೊಂಡಿವೆ. ಅಂತಹ ಅಪಘಾತಗಳಲ್ಲಿ ಗಂಭೀರವಾಗಿ ಗಾಯಗೊಂಡವರ ಸಂಖ್ಯೆ 50 ರಿಂದ 140 ಕ್ಕೆ ಏರಿದೆ ಎಂದು ದತ್ತಾಂಶವು ತೋರಿಸಿದೆ.

ಆರು ಪಥದ ಪ್ರವೇಶ-ನಿಯಂತ್ರಿತ ಸಮೃದ್ಧಿ ಕಾರಿಡಾರ್‌ನ್ನು ಡಿಸೆಂಬರ್ 2022 ರಿಂದ ಹಂತ ಹಂತಗಳಲ್ಲಿ ಸಂಚಾರಕ್ಕೆ ತೆರೆಯಲಾಯಿತು, ಕಳೆದ ವರ್ಷ ಇಡೀ ಮಾರ್ಗವನ್ನು ಕಾರ್ಯರೂಪಕ್ಕೆ ತರಲಾಯಿತು. ಮೇಲ್ವಿಚಾರಣೆಯನ್ನು ಸುಧಾರಿಸಲು ಮತ್ತು ರಸ್ತೆ ಸುರಕ್ಷತೆಯನ್ನು ಹೆಚ್ಚಿಸಲು ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಟಿಎಂಎಸ್) ಪ್ರಸ್ತುತ ಅನುಷ್ಠಾನದಲ್ಲಿದೆ.

ಪ್ರಾಸಂಗಿಕವಾಗಿ, ಮಹಾರಾಷ್ಟ್ರ ಸಾರಿಗೆ ಆಯುಕ್ತರ ಕಚೇರಿಯು ಈ ವರ್ಷದ ಜನವರಿ 22ರಂದು ಬಿಡುಗಡೆ ಮಾಡಿದ ಪತ್ರಿಕಾ ಪ್ರಕಟಣೆಯಲ್ಲಿ ಸಮೃದ್ಧಿ ಮಹಾಮಾರ್ಗದಲ್ಲಿ ಅಪಘಾತಗಳು ಮತ್ತು ಸಾವು-ನೋವುಗಳ ಹೆಚ್ಚಳದ ಬಗ್ಗೆ ಉಲ್ಲೇಖಿಸಲಿಲ್ಲ, ಆದರೂ ಅದು ದೇಶದ ಮೊದಲ ಪ್ರವೇಶ-ನಿಯಂತ್ರಿತ ಕಾರಿಡಾರ್ ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯಲ್ಲಿ ಗಂಭೀರ ಅಪಘಾತಗಳು ಮತ್ತು ಸಾವು-ನೋವುಗಳ ಕುಸಿತವನ್ನು ಎತ್ತಿ ತೋರಿಸಿದೆ. ಈ ಅವಧಿಯಲ್ಲಿ ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇಯಲ್ಲಿ ಸಾವು-ನೋವುಗಳು ಶೇಕಡಾ 22 ರಷ್ಟು ಕಡಿಮೆಯಾಗಿವೆ ಎಂದು ತಿಳಿಸಿದರೂ, ಈ ಇಳಿಕೆಗೆ ನಿರಂತರ ರಸ್ತೆ ಸುರಕ್ಷತಾ ಮಧ್ಯಸ್ಥಿಕೆಗಳು, ಕಟ್ಟುನಿಟ್ಟಿನ ನಿಯಮ ಜಾರಿ ಮತ್ತು ಜಾಗೃತಿ ಚಾಲನೆಗಳು ಕಾರಣವೆಂದು ಪ್ರಕಟಣೆ ತಿಳಿಸಿದೆ.

ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇ 2025 ರಲ್ಲಿ 187 ಅಪಘಾತಗಳನ್ನು ದಾಖಲಿಸಿದೆ, ಇದು 2024 ರಲ್ಲಿ 191 ಕ್ಕಿಂತ ಸ್ವಲ್ಪ ಕಡಿಮೆಯಾಗಿದೆ, ಇದು ಶೇಕಡಾ 2 ರಷ್ಟು ಕುಸಿತವನ್ನು ಸೂಚಿಸುತ್ತದೆ.

ಆದಾಗ್ಯೂ, ಸಣ್ಣಪುಟ್ಟ ಗಾಯಗಳ ಅಪಘಾತಗಳು ಶೇಕಡಾ 12 ರಷ್ಟು ಹೆಚ್ಚಾಗಿದ್ದು, 25 ರಿಂದ 28 ಕ್ಕೆ ತಲುಪಿದ್ದರೆ, ಸಣ್ಣ ಪುಟ್ಟ ಗಾಯಗಳಾಗಿರುವವರ ಸಂಖ್ಯೆ ಶೇಕಡಾ 42 ರಷ್ಟು ತೀವ್ರವಾಗಿ ಏರಿಕೆಯಾಗಿ 65 ರಿಂದ 92 ಕ್ಕೆ ತಲುಪಿದೆ.

ಗಾಯಗಳಿಲ್ಲದ ಅಪಘಾತಗಳು ಸಹ 44 ರಿಂದ 58 ಕ್ಕೆ ಏರಿದೆ, ಇದು ಶೇಕಡಾ 32 ರಷ್ಟು ಏರಿಕೆಯಾಗಿದೆ. ಸುಮಾರು 95 ಕಿ.ಮೀ ಉದ್ದದ ಈ ಎಕ್ಸ್‌ಪ್ರೆಸ್‌ವೇಯಲ್ಲಿ ಮಾರಕ ಅಪಘಾತಗಳು 2024 ರಲ್ಲಿ 74 ರಿಂದ 2025 ರಲ್ಲಿ 60 ಕ್ಕೆ ಇಳಿದವು ಮತ್ತು ಸಾವಿನ ಸಂಖ್ಯೆ 90 ರಿಂದ 68 ಕ್ಕೆ ಇಳಿದಿದೆ ಎಂದು ಅಧಿಕೃತ ಅಂಕಿಅಂಶಗಳು ತೋರಿಸಿವೆ.

ಗಂಭೀರ ಗಾಯದ ಅಪಘಾತಗಳು 48 ರಿಂದ 41 ಕ್ಕೆ ಇಳಿದವು, ಗಂಭೀರವಾಗಿ ಗಾಯಗೊಂಡವರ ಸಂಖ್ಯೆ 143 ರಿಂದ 140 ಕ್ಕೆ ಸ್ವಲ್ಪ ಕಡಿಮೆಯಾಯಿತು.

ಮುಂಬೈ-ಪುಣೆ ಎಕ್ಸ್‌ಪ್ರೆಸ್‌ವೇ 2002 ರಲ್ಲಿ ಕಾರ್ಯರೂಪಕ್ಕೆ ಬಂದಿತು, ಇದು ಮಹಾರಾಷ್ಟ್ರದ ಎರಡು ದೊಡ್ಡ ನಗರಗಳ ನಡುವಿನ ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಿತು. ಸಂಚಾರ ಉಲ್ಲಂಘನೆಗಳನ್ನು ಮೇಲ್ವಿಚಾರಣೆ ಮಾಡಲು, ದಟ್ಟಣೆಯನ್ನು ನಿರ್ವಹಿಸಲು ಮತ್ತು ಕಣ್ಗಾವಲು ಕ್ಯಾಮೆರಾಗಳು ಮತ್ತು ವೇಗ ಪತ್ತೆ ವ್ಯವಸ್ಥೆಗಳ ಮೂಲಕ ತುರ್ತು ಪ್ರತಿಕ್ರಿಯೆಯನ್ನು ಬಲಪಡಿಸಲು ಅಧಿಕಾರಿಗಳು 2024 ರಲ್ಲಿ ಈ ಮಾರ್ಗದಲ್ಲಿ ಇಂಟೆಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಮ್ (ಐಟಿಎಂಎಸ್) ಅನ್ನು ಜಾರಿಗೆ ತಂದರು.

ಮಹಾರಾಷ್ಟ್ರದಾದ್ಯಂತ, 2025 ರಲ್ಲಿ ಸತತ ಆರನೇ ವರ್ಷಕ್ಕೆ ರಸ್ತೆ ಅಪಘಾತಗಳು ಹೆಚ್ಚಾದವು, ತಾತ್ಕಾಲಿಕ ದತ್ತಾಂಶದ ಪ್ರಕಾರ, ರಾಜ್ಯವು 36,450 ಅಪಘಾತಗಳನ್ನು ವರದಿ ಮಾಡಿದೆ, 2024 ರಲ್ಲಿ 36,118 ಮತ್ತು 2023 ರಲ್ಲಿ 35,243 ಕ್ಕೆ ಹೋಲಿಸಿದರೆ. ಆದಾಗ್ಯೂ, 2024 ರಲ್ಲಿ 15,715 ರಷ್ಟಿದ್ದ ಸಾವುಗಳು 2025 ರಲ್ಲಿ 15,549 ಕ್ಕೆ ಸ್ವಲ್ಪ ಇಳಿಕೆಯಾಗಿವೆ ಮತ್ತು 2023 ರಲ್ಲಿ 15,366 ಜನರು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪಿದ್ದಾರೆ ಎಂದು ಅಂಕಿ-ಅಂಶಗಳು ತೋರಿಸಿವೆ.

ರಾಜ್ಯ ಸಾರಿಗೆ ಇಲಾಖೆಯು 2030 ರ ವೇಳೆಗೆ ರಸ್ತೆ ಸಾವುಗಳನ್ನು ಶೇಕಡಾ 50 ರಷ್ಟು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

# ಯುದ್ಧ ನೌಕೆಗಳು, ಜಲಾಂತರ್ಗಾಮಿ ನೌಕೆಗಳ ಬಗ್ಗೆ ಪಾಕಿಸ್ತಾನಿ ಪ್ರಜೆಗಳಿಗೆ ಮಾಹಿತಿ ನೀಡಿದ್ದ ಬಂಧಿತ ಇಂಜಿನಿಯರ್‌ಗೆ ಜಾಮೀನು ನಿರಾಕರಣೆ

ಮುಂಬಯಿ, ಮಾ. 8 - ಪಾಕಿಸ್ತಾನಿ ಪ್ರಜೆಗಳಿಗೆ ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳ ಬಗ್ಗೆ ಸೂಕ್ಷ್ಮ ಮಾಹಿತಿ ಸೋರಿಕೆ ಮಾಡಿದ ಆರೋಪ ಹೊತ್ತಿರುವ ಜೂನಿಯರ್ ಸರ್ವಿಸ್ ಇಂಜಿನಿಯರ್‌ಗೆ ಮಹಾರಾಷ್ಟ್ರದ ಥಾಣೆ ನ್ಯಾಯಾಲಯವು ಜಾಮೀನು ನಿರಾಕರಿಸಿದೆ, ನೌಕಾ ಸ್ಥಾಪನೆಗಳಿಗೆ ಸಂಬಂಧಿಸಿದ ಅಪರಾಧವು ಗಂಭೀರ ಸ್ವರೂಪದ್ದಾಗಿದೆ ಎಂದು ಹೇಳಿದೆ.

ಈ ತಿಂಗಳ ಆರಂಭದಲ್ಲಿ ಹೊರಡಿಸಲಾದ ಆದೇಶದಲ್ಲಿ, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿ ಜಿ ಮೋಹಿತೆ ಆರೋಪಿ ವಿರುದ್ಧದ ಆರೋಪಗಳಿಗೆ 14 ವರ್ಷಗಳ ಜೈಲು ಶಿಕ್ಷೆ ವಿಧಿಸುವ ಸಾಧ್ಯತೆಯಿದೆ ಎಂದು ಗಮನಿಸಿದರು.

ನೇವಲ್ ಡಾಕ್‌ಯಾರ್ಡ್, ಮಜ್ಗಾಂವ್ ಡಾಕ್‌ಯಾರ್ಡ್, ಕೋಸ್ಟ್ ಗಾರ್ಡ್ ಮತ್ತು ಮುಂಬೈ ಪೋರ್ಟ್ ಟ್ರಸ್ಟ್‌ಗೆ ಸೇವೆಗಳನ್ನು ಒದಗಿಸುವ ಕಂಪನಿಯಾದ ಕ್ರಾಸ್ನಿ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್‌ನಲ್ಲಿ ಉದ್ಯೋಗಿಯಾಗಿದ್ದ ಆರೋಪಿ ರವಿ ವರ್ಮಾನನ್ನು ಮೇ 28, 2025 ರಂದು ಬಂಧಿಸಲಾಗಿತ್ತು. ನೆರೆಯ ಥಾಣೆಯ ಕಲ್ವಾ ನಿವಾಸಿ ವರ್ಮಾ ಪ್ರಸ್ತುತ ನ್ಯಾಯಾಂಗ ಬಂಧನದಲ್ಲಿದ್ದಾನೆ.

ನವೆಂಬರ್ 2024 ಮತ್ತು ಮಾರ್ಚ್ 2025ರ ನಡುವೆ, ವರ್ಮಾ ಹಣಕ್ಕಾಗಿ ಇಬ್ಬರು ಪಾಕಿಸ್ತಾನಿ ಪ್ರಜೆಗಳೊಂದಿಗೆ ಭಾರತೀಯ ನೌಕಾಪಡೆಯ ಹಡಗುಗಳು ಮತ್ತು ದೋಣಿಗಳ ಹೆಸರುಗಳು ಮತ್ತು ಸ್ಥಳಗಳ ಬಗ್ಗೆ ರಹಸ್ಯ ಮತ್ತು ಸೂಕ್ಷ್ಮ ಮಾಹಿತಿಯನ್ನು ಹಂಚಿಕೊಂಡಿದ್ದಾನೆ ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ.

ಆತನ ವಿರುದ್ಧ ಅಧಿಕೃತ ರಹಸ್ಯ ಕಾಯ್ದೆ ಮತ್ತು ಭಾರತೀಯ ನ್ಯಾಯ ಸಂಹಿತಾ (ಬಿಎನ್‌ಎಸ್) ಸೆಕ್ಷನ್ 61(2) (ಕ್ರಿಮಿನಲ್ ಪಿತೂರಿ) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ವರ್ಮಾ ತನ್ನ ಜಾಮೀನು ಅರ್ಜಿಯಲ್ಲಿ, ತಾನು ನಿರಪರಾಧಿ ಮತ್ತು ಅಪರಾಧದಲ್ಲಿ ತಪ್ಪಾಗಿ ಸಿಲುಕಿಸಲ್ಪಟ್ಟಿರುವುದಾಗಿ ಹೇಳಿಕೊಂಡಿದ್ದಾನೆ. ತನಿಖೆ ಮುಗಿದಿದೆ ಮತ್ತು ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ಆತ ಉಲ್ಲೇಖಿಸಿದ್ದಾನೆ.

ಎಲ್ಲಾ ವಸ್ತು ಎಲೆಕ್ಟ್ರಾನಿಕ್ ಪುರಾವೆಗಳು ಪ್ರಾಸಿಕ್ಯೂಷನ್ ಬಳಿ ಇದ್ದು, ತನ್ನನ್ನು ಬಂಧಿಸುವ ಅಗತ್ಯವಿಲ್ಲ ಎಂದು ಆರೋಪಿ ಅರ್ಜಿಯಲ್ಲಿ ಹೇಳಿದ್ದಾನೆ.

ವರ್ಮಾ ತನ್ನ ಬ್ಯಾಂಕ್ ವಿವರಗಳನ್ನು ತಲೆಮರೆಸಿಕೊಂಡಿರುವ ಆರೋಪಿಯೊಂದಿಗೆ ಹಂಚಿಕೊಂಡಿದ್ದಾನೆ, ನಂತರ ಆತ ಅಂತಹ ಸೂಕ್ಷ್ಮ ಮತ್ತು ರಹಸ್ಯ ಮಾಹಿತಿಯನ್ನು ಒದಗಿಸಿದ್ದಕ್ಕಾಗಿ ಅವರ ಖಾತೆಗೆ ಹಣವನ್ನು ಜಮಾ ಮಾಡಿದ್ದಾನೆ ಎಂದು ಪ್ರಾಸಿಕ್ಯೂಷನ್ ವಾದಿಸಿದೆ.

ವರ್ಮಾನನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದರೆ, ಆತ ಪ್ರಾಸಿಕ್ಯೂಷನ್ ಸಾಕ್ಷಿಗಳು ಮತ್ತು ಸಾಕ್ಷ್ಯಗಳನ್ನು ತಿರುಚುತ್ತಾನೆ ಮತ್ತು ಆತ ಪರಾರಿಯಾಗಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಆದ್ದರಿಂದ, ಆತನ ಅರ್ಜಿಯನ್ನು ತಿರಸ್ಕರಿಸಬೇಕು ಎಂದು ಪ್ರಾಸಿಕ್ಯೂಷನ್ ನ್ಯಾಯಾಲಯಕ್ಕೆ ತಿಳಿಸಿದೆ.

ಎರಡೂ ಕಡೆಯವರ ವಾದಗಳನ್ನು ಆಲಿಸಿದ ಮತ್ತು ದಾಖಲೆಗಳ ಪರಿಶೀಲನೆಯ ನಂತರ, ಅಧಿಕೃತ ರಹಸ್ಯ ಕಾಯ್ದೆಯಡಿಯಲ್ಲಿ 'ಗಂಭೀರ ಸ್ವರೂಪದ' ಅಪರಾಧಗಳಿಗಾಗಿ ಆರೋಪಿಯ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ ಎಂದು ನ್ಯಾಯಾಲಯ ಗಮನಿಸಿದೆ.

ಆತ ಹಣಕಾಸಿನ ಪ್ರಯೋಜನಗಳನ್ನು ಪಡೆಯುವ ಗಂಭೀರ ಅಪರಾಧಗಳನ್ನು ಮಾಡಿದ್ದಾನೆ ಎಂದು ನ್ಯಾಯಾಲಯ ಹೇಳಿದೆ.

ಕೆಲವು ತಿಂಗಳುಗಳಲ್ಲಿ ಆರೋಪಗಳನ್ನು ರೂಪಿಸಿ ವಿಚಾರಣೆಯನ್ನು ಮುಂದುವರಿಸಲು ನ್ಯಾಯಾಲಯ ಉದ್ದೇಶಿಸಿದೆ ಎಂದು ನ್ಯಾಯಾಧೀಶರು ಸೂಚಿಸಿದರು.

ಬಿಡುಗಡೆಯಾದರೆ, ಸಹ-ಆರೋಪಿಗಳು ಬಂಧನದಿಂದ ತಪ್ಪಿಸಿಕೊಳ್ಳಲು ಆತ ಸಹಾಯ ಮಾಡಬಹುದು ಎಂಬ ಪ್ರಾಸಿಕ್ಯೂಷನ್‌ನ ಕಳವಳವನ್ನು ನ್ಯಾಯಾಲಯವು ಒಪ್ಪಿಕೊಂಡಿತು. ಆತ ಪ್ರಾಸಿಕ್ಯೂಷನ್ ಸಾಕ್ಷ್ಯಗಳು ಮತ್ತು ಸಾಕ್ಷಿಗಳನ್ನು ತಿರುಚುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ ಎಂದು ಅದು ಹೇಳಿದೆ.

ನಂತರ ನ್ಯಾಯಾಲಯವು ವರ್ಮಾನ ಜಾಮೀನು ಅರ್ಜಿಯನ್ನು ತಿರಸ್ಕರಿಸಿತು.

## ಸುಡೊಕು 1724

| | | | | | | | | |
|---|---|---|---|---|---|---|---|---|
| 5 | 9 | | | | 4 | | 6 | 7 |
| | | | 3 | | 7 | 9 | | |
| 8 | | 7 | | 6 | | 4 | | |
| 4 | | 5 | 8 | | | | 9 | |
| 3 | | | | 1 | | | | 2 |
| | 2 | | | | 9 | 7 | | 6 |
| | | 6 | | 9 | | 2 | | 4 |
| | | 3 | 5 | | 2 | | | |
| 2 | 1 | | 6 | | | | 8 | 9 |

■ MANGAL SENACHA, BANGALORE

1ರಿಂದ 9 ರ ನರೆಗಿನ ಸಂಖ್ಯೆಗಳನ್ನು ಪ್ರತಿ 3-3 ಬಾಕ್ಸ್‌ಗೂ ತುಂಬಿ. ಪ್ರತಿ ಉದ್ದ ಹಾಗೂ ಸಾಲಿನಲ್ಲೂ 1-9 ಅಂಕಿಗಳಿರಬೇಕು.

ಸುಡೊಕು 1723

| | | | | | | | | |
|---|---|---|---|---|---|---|---|---|
| 7 | 8 | 5 | 2 | 6 | 3 | 1 | 4 | 9 |
| 4 | 3 | 1 | 9 | 7 | 5 | 8 | 2 | 6 |
| 2 | 6 | 9 | 1 | 4 | 8 | 7 | 5 | 3 |
| 3 | 1 | 4 | 6 | 8 | 9 | 5 | 7 | 2 |
| 9 | 5 | 8 | 7 | 2 | 4 | 6 | 3 | 1 |
| 6 | 7 | 2 | 5 | 3 | 1 | 9 | 8 | 4 |
| 5 | 2 | 7 | 3 | 9 | 6 | 4 | 1 | 8 |
| 1 | 4 | 6 | 8 | 5 | 2 | 3 | 9 | 7 |
| 8 | 9 | 3 | 4 | 1 | 7 | 2 | 6 | 5 |

## ಪದಬಂದ - 1807



**ಎಡದಿಂದ ಬಲಕ್ಕೆ**

1.ಪುಕ್ಕಟೆಯಾಗಿ ಸಿಕ್ಕ ಇದು ಸಂದರ್ಭಕ್ಕೆ ತಕ್ಕನಾದುದು -3
2.ಏಕಾಂಗಿ ಇರುವ ಸಂದರ್ಭ, ಸ್ಥಳ -3
4.ಅವನಿಗೆ ಬಂದ ಸಾವು -4
6.ನಡುಮನೆಯಲ್ಲಿ ಕುಳಿತಿರುವವರ ವರ್ತನೆ -5
8.ಆ ದಾರಿಯಲ್ಲಿ ಹೋಗಲು ಪರವಾನೆ ಸಿಕ್ಕಿದೆ -4
10.ನಯವಾದ ನಟನೆ -4
12.ಆಕಾಶದಲ್ಲಿ ಸಂಚಾರ -5
15.ಲೆಕ್ಕ ಬರೆಯುವವನೇ ಇವನು? -4
16.ಆಟದಲ್ಲಿ ಬಳಸುವ ದಾಳ -3
17.ಧಾನ್ಯ ಸಂಗ್ರಹಿಸುವ ಸ್ಥಳದಲ್ಲಿ ಇದೇನು ಹುಳು? -3

**ಮೇಲಿನಿಂದ ಕೆಳಕ್ಕೆ**

1.ಅಹಂಕಾರಕ್ಕೆ ಇದೇ ಮದ್ದು -4
3.ಈ ಆತುರ ತರವಲ್ಲ -4
2.ಜವಳಿಯ ಮೊದಲು ಬರುವ ಜೋಡಿ -3
5.ನಗ ಹೊತ್ತುಕೊಂಡಿರುವ ಪಟ್ಟಣ -3
7.ಭೂತವಲ್ಲ, ಭವಿಷ್ಯವಲ್ಲ, ಇಂದಿನ ಕಾಲ -4
9.ವಾಯುಗುಣ -4
10.ಏನಿಷ್ಟು ಆಡಂಬರ? -4
11.ಜೋಡಿಯಾಗಿರುವ ಇದು ಒಂದು ಶಬ್ದಾಲಂಕಾರ -3
13.ಇದು ತಿಂಗಳ ಸಮಾಚಾರ -3
14.ತಾಂಡವ ನೃತ್ಯಕ್ಕೆ ಇವ ಹೆಸರುವಾಸಿ -4

ಉತ್ತರ - 1806

| | | | | | | | | | |
|---|---|---|---|---|---|---|---|---|---|
| ಶು | ಭ್ರ | ■ | ■ | ಸೊ | ಬ | ಗು | ■ | ■ | ಲಾ |
| ■ | ಮ | ನ | ದ | ನ್ನೆ | ■ | ■ | ಕಾ | ವ | ಲಿ |
| ಬ | ರ | ಡು | ■ | ■ | ಔ | ದಾ | ರ್ಯ | ■ | ■ |
| ■ | ■ | ಕ | ಣಾ | ದ | ■ | ■ | ಕ್ರ | ಮೇ | ಣ |
| ಮೋ | ಸ | ■ | ■ | ಸ | ಹ | ಗ | ಮ | ನ | ■ |
| ■ | ನಿ | ರಾ | ಕ | ರ | ಣ | ■ | ■ | ಕ | ದ |
| ಸ | ಹ | ಜ | ■ | ■ | ಕು | ಸು | ಮ | ■ | ■ |
| ■ | ■ | ಕೀ | ರ್ತ | ನೆ | ■ | ■ | ತಾ | ಮ | ಸ |
| ಅ | ಪಾ | ಯ | ■ | ■ | ಕುಂ | ದಾ | ಪು | ರ | ■ |
| ಋ | ■ | ■ | ಸಂ | ತ | ತಿ | ■ | ■ | ವೆ | ಚ್ಚ |



# ವಿಶ್ವ ಶಾಂತಿಗೆ ಬೆದರಿಕೆಯಾದ 'ಯುದ್ಧ...'

ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷವು ದಶಕಗಳಿಂದ ಮುಂದುವರೆದುಕೊಂಡು ಬಂದಿರುವ ಒಂದು ಸಂಕೀರ್ಣ ಸಮಸ್ಯೆಯಾಗಿದೆ. ಈ ಸಂಘರ್ಷದಲ್ಲಿ ಅಮೆರಿಕದ ಪಾತ್ರ ಕೂಡ ಅಷ್ಟೇ ಮಹತ್ವದ್ದಾಗಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷವು 1979ರ ಇಸ್ಲಾಮಿಕ್ ಕ್ರಾಂತಿಯಿಂದ ಪ್ರಾರಂಭವಾಯಿತು. ಈ ಕ್ರಾಂತಿಯ ಬಳಿಕ ಇರಾನ್ ಇಸ್ರೇಲ್‌ನ ಅಸ್ತಿತ್ವವನ್ನೇ ನಿರಾಕರಿಸಿತು ಮತ್ತು ಅದನ್ನು 'ಜಿಯಾನಿಸ್ಟ್ ರಾಜ್ಯ' ಎಂದು ಕರೆಯಿತು. ಇಸ್ರೇಲ್ ಕೂಡ ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ತನ್ನ ಅಸ್ತಿತ್ವಕ್ಕೆ ಒಂದು ಬೆದರಿಕೆ ಎಂದು ಪರಿಗಣಿಸಿತು. ಗಮನಿಸಬೇಕಾದ ಮುಖ್ಯ ಅಂಶವೆಂದರೆ ಅಮೆರಿಕವು ಇಸ್ರೇಲ್‌ನ ಪ್ರಮುಖ ಮಿತ್ರ ರಾಷ್ಟ್ರವಾಗಿದೆ ಮತ್ತು ಅದು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ತಡೆಯಲು ಇಸ್ರೇಲ್‌ಗೆ ಬೆಂಬಲ ನೀಡುತ್ತದೆ. ಅಮೆರಿಕವು ಇರಾನ್ ಮೇಲೆ ಆರ್ಥಿಕ ನಿರ್ಬಂಧಗಳನ್ನು ಹೇರಿದೆ ಮತ್ತು ಅದರ ಪರಮಾಣು ಕಾರ್ಯಕ್ರಮವನ್ನು ತಡೆಯಲು ರಾಜತಾಂತ್ರಿಕ ಪ್ರಯತ್ನಗಳನ್ನು ಮಾಡಿದೆ. ಇವೆಲ್ಲದರ ನಡುವೆ ಇರಾನ್ ವಿರುದ್ಧ ಆಗಾಗ್ಗೆ ಬುಸುಗುಟ್ಟುತ್ತಿರುವ ಇಸ್ರೇಲ್‌ಗೆ ಮಿಲಿಟರಿ ಸಹಿತ ಎಲ್ಲಾ ರೀತಿಯ ನೆರವನ್ನು ನೀಡುತ್ತಾ ಬಂದಿದೆ. ಈಗ ಮಧ್ಯ ಪ್ರಾಚ್ಯ ವಲಯವನ್ನು ಬೆಚ್ಚಿ ಬೀಳಿಸುವ ಘೋರ ಯುದ್ಧದಲ್ಲಿ ಸಾವಿರಾರು ಅಮಾಯಕ ಜನರ ಸಾವಿಗೆ ಇಸ್ರೇಲ್ ಇರಾನ್ ಅಷ್ಟೇ ಅಮೆರಿಕ ಕೂಡ ಜವಾಬ್ದಾರಿಯಾಗಿದೆ. ಇರಾನ್-ಇಸ್ರೇಲ್ ನಡುವಿನ ಕ್ರೂರ ವೈರತ್ವಕ್ಕೆ ದೊಡ್ಡ ಇತಿಹಾಸವೇ ಇದೆ. 2024ರಲ್ಲಿ ಇರಾನ್ ನೇರವಾಗಿ ಇಸ್ರೇಲ್ ಮೇಲೆ ಮಿಸೈಲ್ ದಾಳಿ ಮಾಡಿತು.

ಇಸ್ರೇಲ್ ಇರಾನ್‌ನ ಮಿಸೈಲ್ ಉತ್ಪಾದನಾ ಸ್ಥಳಗಳು ಮತ್ತು ಏರ್ ಡಿಫೆನ್ಸ್ ಸಿಸ್ಟಮ್‌ಗಳನ್ನು ಗುರಿಯಾಗಿಸಿಕೊಂಡು ಪ್ರತಿದಾಳಿ ನಡೆಸಿತು. ಈಗ ಅದರ ಮತ್ತೊಂದು ತಿರುವು ಎಂಬಂತೆ ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್‌ನ ಮೇಲೆ ದಾಳಿ ನಡೆಸಿವೆ. ಈ ದಾಳಿಯ ಘೋರ ಪರಿಣಾಮ ಎಷ್ಟಿತ್ತೆಂದರೆ ಇರಾನ್‌ನ ಅನಭಿಷಿಕ್ತ ದೊರೆ ಆಯಾತುಲ್ಲಾ ಅಲಿ ಖಮೇನಿ ಅವರ ಕ್ರೂರ ಹತ್ಯೆಯಾಯಿತು. ಖಮೇನಿ ಸಾವಿನ ಕಾರಣ ಇರಾನ್ ಕೆರಳಿ ಕೆಂಡವಾಗಿರುವುದು ಈ ಯುದ್ಧ ಮಧ್ಯ ಪ್ರಾಚ್ಯ ವಲಯವನ್ನು ತತ್ತರಿಸುವಂತೆ ಮಾಡಲು ಕಾರಣವಾಗಿದೆ.

ಈ ಸಂಘರ್ಷವು ಮಧ್ಯಪ್ರಾಚ್ಯದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆಯಾಗಿ ಪರಿಣಮಿಸಿದೆ. ಎಲ್ಲಾ ಕಡೆಯವರು ಸಂಯಮವನ್ನು ಪಾಲಿಸಿ ಮತ್ತು ರಾಜತಾಂತ್ರಿಕ ಪರಿಹಾರವನ್ನು ಕಂಡುಕೊಳ್ಳಬೇಕಾದ ಸಮಯದಲ್ಲಿ ಇರಾನ್ ಮತ್ತು ಇಸ್ರೇಲಿ ವಲಯದಲ್ಲಿ ತಮ್ಮ ಪ್ರಭುತ್ವವನ್ನು ತೋರಿಸುವ ಪ್ರಯತ್ನವಾಗಿ ತಮ್ಮದೇ ನಾಗರಿಕರ ಸಾವು - ನೋವಿಗೆ ಕಾರಣವಾಗಿರುವುದು ದುರಂತವೆನ್ನಬೇಕಾಗುತ್ತದೆ.

ಇರಾನ್‌ನ ಪರಮಾಣು ಕಾರ್ಯಕ್ರಮವು ಇಸ್ರೇಲ್‌ಗೆ ಪ್ರಮುಖ ಕಳವಳವಾಗಿದೆ. ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಅಭಿವೃದ್ಧಿಪಡಿಸಿದರೆ, ಅದು ಮಧ್ಯಪ್ರಾಚ್ಯದಲ್ಲಿ ಶಕ್ತಿ ಸಮತೋಲನವನ್ನು ಅಸ್ಥಿರಗೊಳಿಸುತ್ತದೆ ಮತ್ತು ತನಗೆ ಅಸ್ತಿತ್ವದ ಬೆದರಿಕೆಯನ್ನು ಒಡ್ಡುತ್ತದೆ ಎಂದು ಇಸ್ರೇಲ್ ನಂಬುತ್ತದೆ.

ಮತ್ತೊಂದು ಕಡೆ ಇರಾನ್ ಹಮಾಸ್, ಹೆಜ್ಬೊಲ್ಲಾ ಮತ್ತು ಹೌತಿ ಮುಂತಾದ ಪ್ರಾಕ್ಸಿ ಉಗ್ರವಾದಿ ಗುಂಪುಗಳನ್ನು ಬೆಂಬಲಿಸುತ್ತದೆ. ಈ ಸಂಘಟನೆಗಳು ಇಸ್ರೇಲ್ ಮೇಲೆ ದಾಳಿ ಮಾಡುತ್ತವೆ. ಇಸ್ರೇಲ್ ಇದನ್ನು ಇರಾನ್‌ನ ಆಪರೇಷನ್ ಎಂದು ಪರಿಗಣಿಸುತ್ತದೆ ಮತ್ತು ಅದಕ್ಕೆ ಪ್ರತೀಕಾರ ತೀರಿಸಿಕೊಳ್ಳುತ್ತದೆ. ಇದೇ ಸಮಯದಲ್ಲಿ ಇರಾನ್ ಮತ್ತು ಇಸ್ರೇಲ್ ಮಧ್ಯಪ್ರಾಚ್ಯ ವಲಯದಲ್ಲಿ ಪ್ರಭಾವ ಬೀರಲು ಪ್ರಯತ್ನಿಸುತ್ತಿವೆ. ಇರಾನ್ ಸಿರಿಯಾ, ಲೆಬನಾನ್ ಮತ್ತು ಇರಾಕ್‌ನಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಲು ಪ್ರಯತ್ನಿಸುತ್ತಿದೆ. ಆದರೆ ಇಸ್ರೇಲ್ ಇದನ್ನು ತನ್ನ ಹಿತಾಸಕ್ತಿಗಳಿಗೆ ಒಂದು ಪ್ರಮುಖ ಬೆದರಿಕೆ ಎಂದು ಪರಿಗಣಿಸುತ್ತದೆ. ಈ ವಿಷಯದಲ್ಲಿ ಅಮೆರಿಕ ಕೂಡ ಇಸ್ರೇಲ್‌ನ್ನು ಬೆಂಬಲಿಸುತ್ತಾ ಬಂದಿದೆ.

ಅಮೆರಿಕವು ಇಸ್ರೇಲ್‌ನ ಪ್ರಮುಖ ಮಿತ್ರ ರಾಷ್ಟ್ರವಾಗಿದೆ ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ತಡೆಯಲು ಇಸ್ರೇಲ್‌ಗೆ ಬೆಂಬಲ ನೀಡುತ್ತದೆ. ಇರಾನ್ ಇದನ್ನು ಅಮೆರಿಕ ಮತ್ತು ಇಸ್ರೇಲ್‌ನ ಸಂಚು ಎಂದು ಪರಿಗಣಿಸುತ್ತದೆ. ಈ ಕಾರಣಗಳು ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷವನ್ನು ಹೆಚ್ಚಿಸುತ್ತಿವೆ ಮತ್ತು ಮಧ್ಯಪ್ರಾಚ್ಯದಲ್ಲಿ ಶಾಂತಿ ಹಾಗೂ ಸ್ಥಿರತೆಗೆ ಬೆದರಿಕೆಯನ್ನು ಒಡ್ಡುತ್ತವೆ. ಈ ಮೊದಲು ಜಗತ್ತಿನ ಇತರ ದೇಶಗಳ ಮಧ್ಯೆ ಯುದ್ಧ ಪರಿಸ್ಥಿತಿ ತಲೆದೋರಿದಾಗ ಶಾಂತಿ, ಸಂಧಾನಕ್ಕೆ ಮುಂದಾಗುತ್ತಿದ್ದ ಅಮೆರಿಕಾ ಈಗ ನೇರವಾಗಿ ಇಸ್ರೇಲ್-ಇರಾನ್ ಯುದ್ಧವನ್ನು ಪ್ರಚೋದಿಸುವ ಮೂಲಕ ವಿಶ್ವದಲ್ಲಿ ಗೊಂದಲ ಸೃಷ್ಟಿಯಾಗಲು ಕಾರಣವಾಗಿದೆ. ಒಂದು ರೀತಿಯಲ್ಲಿ ಇಸ್ರೇಲ್-ಇರಾನ್ ಯುದ್ಧ ಜಗತ್ತನ್ನು ಎರಡು ಭಾಗಗಳಾಗಿ ವಿಂಗಡಿಸಿದೆ.

ಆ ಪೈಕಿ ಕೆಲವು ರಾಷ್ಟ್ರಗಳು ಇಸ್ರೇಲ್ ಮತ್ತು ಅಮೆರಿಕಾದ ಪರವಾಗಿ ನಿಂತಿದ್ದರೆ ಇನ್ನು ಕೆಲವು ದೇಶಗಳು ಇರಾನ್ ಪರವಾಗಿ ವಕಾಲತ್ತು ನಡೆಸುತ್ತಿವೆ. ಭಾರತ ಮಾತ್ರ ತಟಸ್ಥ ನಿಲುವು ಹೊಂದಿದ್ದು ಶಾಂತಿ ಸಂಧಾನಕ್ಕಾಗಿ ಪ್ರತಿಪಾದಿಸುತ್ತಿದೆ. ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷದಲ್ಲಿ ವಿಶ್ವ ರಾಷ್ಟ್ರಗಳು ವಿವಿಧ ಪಾತ್ರಗಳನ್ನು ವಹಿಸುತ್ತಿವೆ. ಅಮೆರಿಕಾದ ಜತೆಗೆ ಬ್ರಿಟನ್ ಕೂಡ ಇಸ್ರೇಲ್‌ನ ಪ್ರಮುಖ ಮಿತ್ರ ರಾಷ್ಟ್ರವಾಗಿದೆ ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ವಿರೋಧಿಸುವ ಬ್ರಿಟನ್, ಈ ವಿಷಯದಲ್ಲಿ ಇಸ್ರೇಲ್‌ಗೆ ಬೆಂಬಲ ನೀಡುತ್ತದೆ ಮತ್ತು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ಖಂಡಿಸುತ್ತದೆ.

**ಇಸ್ರೇಲ್ - ಇರಾನ್ ನಡುವಿನ ಯುದ್ಧಕ್ಕೆ ದಶಕಗಳಿಂದ ಬೆಳೆದುಕೊಂಡು ಬಂದಿರುವ ವೈರತ್ವ ಕಾರಣ. ಇರಾನ್‌ನ ಸಂಕೀರ್ಣ ಪರಮಾಣು ಕಾರ್ಯಕ್ರಮವನ್ನು ತನಗೆ ಒಂದು ಬೆದರಿಕೆ ಎಂದು ಇಸ್ರೇಲ್ ಭಾವಿಸುತ್ತಾ ಬಂದಿದೆ. ಇರಾನ್ ಬೆಂಬಲಿತ ಉಗ್ರವಾದಿ ಗುಂಪುಗಳು ಆಗಾಗ್ಗೆ ಇಸ್ರೇಲ್ ಮೇಲೆ ದಾಳಿ ನಡೆಸಿದ್ದು, ಇಸ್ರೇಲ್ ಅದರ ವಿರುದ್ಧ ಪ್ರತಿರೋಧ ವ್ಯಕ್ತಪಡಿಸಿದೆ. ಇಲ್ಲಿ ಇಸ್ರೇಲ್ ಅಮೆರಿಕಾದ ಆಪ್ತ ರಾಷ್ಟ್ರವಾಗಿದೆ. ಅಂತಹ ಮಿತ್ರನಿಗೆ ಅನ್ಯಾಯವಾಗುವುದನ್ನು ಅಮೆರಿಕಾ ಸಹಿಸುವುದಿಲ್ಲ. ಅದೂ ಅಲ್ಲದೆ ತನ್ನ ಪರಮಾಣು ಕಾರ್ಯಕ್ರಮವನ್ನು ನಿಲ್ಲಿಸುವಂತೆ ಹಲವು ವರ್ಷಗಳಿಂದ ಅಮೆರಿಕ ಇರಾನ್ ಮೇಲೆ ಒತ್ತಡ ಹೇರುತ್ತಾ ಬಂದಿದೆ ಆದರೆ ಇರಾನ್ ಅದಕ್ಕೆ ಕ್ಯಾರೇ ಎನ್ನಲಿಲ್ಲ. ಅದಕ್ಕಾಗಿ ಇರಾನ್ ವಿರುದ್ಧದ ಯುದ್ಧದಲ್ಲಿ ಅಮೆರಿಕ ಕೂಡ ಸೇರಿಕೊಂಡಿದೆ.**



ಜರ್ಮನಿ ಕೂಡ ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ತಡೆಯಲು ಅಮೆರಿಕ ಮತ್ತು ಇಸ್ರೇಲ್‌ಗೆ ಬೆಂಬಲ ನೀಡುತ್ತದೆ. ಜಿ7 ರಾಷ್ಟ್ರಗಳ ಪೈಕಿ ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಇಂಗ್ಲೆಂಡ್ ಮತ್ತು ಅಮೆರಿಕ ಇಸ್ರೇಲ್ ಜತೆಗೆ ನಿಂತಿರುವುದು ಬಹುತೇಕ ಖಚಿತ. ಇಲ್ಲಿ ಪರಮಾಣು ಕಾರ್ಯಕ್ರಮ ಮತ್ತು ಕೆಲವು ಉಗ್ರವಾದಿ ಪರ ಗುಂಪುಗಳಿಗೆ ಬೆಂಬಲ ಸಹಿತ ಇರಾನ್ ಮಾಡುತ್ತಾ ಬಂದಿರುವ ತಪ್ಪುಗಳನ್ನು ಮುಚ್ಚಿ ಹಾಕಲು ಸಾಧ್ಯವಿಲ್ಲ. ಈ ಎರಡು ವಿಚಾರಗಳಲ್ಲಿ ಇರಾನ್ ಉದ್ಧಟತನವನ್ನು ತೋರಿಸುತ್ತಾ ಬಂದಿದೆ. ಜಾಗತಿಕ ಶಾಂತಿಗೆ ಸಂಬಂಧಿಸಿದ ಪ್ರಕ್ರಿಯೆಯಲ್ಲಿ ಅದು ಯಾವತ್ತೂ ಒಂದು ಭಾಗವಾಗಿರುವುದು ಕಡಿಮೆ. ರಕ್ಷಣಾ ಸಾಧನಗಳ ಉತ್ಪಾದನೆಯಲ್ಲಿ ಇರಾನ್, ಇಸ್ರೇಲ್‌ಗೆ ಸರಿಸಾಟಿಯಾಗಲು ಸಾಧ್ಯವಿಲ್ಲ. ಆದರೂ ಇಸ್ರೇಲ್‌ನಿಂದ ತನಗೆ ಅಪಾಯವಿರುವುದನ್ನು ಅರಿತುಕೊಂಡು ಇರಾನ್ ಕೂಡ ಸಾಕಷ್ಟು ಪ್ರಮಾಣದ ಮಿಸೈಲ್ ಸಹಿತ ಯುದ್ಧ ಸಾಧನಗಳನ್ನು ಅಭಿವೃದ್ಧಿಪಡಿಸಿಕೊಂಡಿದೆ.

ಇನ್ನು ಇರಾನ್‌ಗೆ ಬೆಂಬಲ ನೀಡುವ ರಾಷ್ಟ್ರಗಳ ಪೈಕಿ ರಷ್ಯಾ ಮತ್ತು ಚೀನಾ ಪ್ರಮುಖವಾಗಿವೆ. ರಷ್ಯಾ ಇರಾನ್‌ನೊಂದಿಗೆ ದೀರ್ಘಕಾಲದ ಸಂಬಂಧವನ್ನು ಹೊಂದಿದ್ದು, ಇಸ್ರೇಲ್‌ನ ದಾಳಿಗಳನ್ನು ಖಂಡಿಸುತ್ತದೆ. ಅದೇ ರೀತಿ ಚೀನಾ ಇರಾನ್‌ನೊಂದಿಗೆ ಆರ್ಥಿಕ ಸಂಬಂಧಗಳನ್ನು ಹೊಂದಿದೆ ಮತ್ತು ಇಸ್ರೇಲ್‌ನ ದಾಳಿಗಳನ್ನು ಖಂಡಿಸುತ್ತದೆ.

ಟರ್ಕಿ ಕೂಡ ಇರಾನ್‌ಗೆ ಬೆಂಬಲ ನೀಡುತ್ತದೆ ಮತ್ತು ಇಸ್ರೇಲ್‌ನ ದಾಳಿಗಳನ್ನು ಖಂಡಿಸುತ್ತದೆ. ಅದೇ ರೀತಿ ಲೆಬನಾನ್ ಇರಾನ್‌ನ ಪ್ರಾಕ್ಸಿ ಸಂಘಟನೆಯಾದ ಹೆಜ್ಬೊಲ್ಲಾಗೆ ಬೆಂಬಲ ನೀಡುತ್ತದೆ. ಇಷ್ಟಾದರೂ ವಿಶ್ವಸಂಸ್ಥೆ ಈಗ ಇರಾನ್-ಇಸ್ರೇಲ್ ಸಂಘರ್ಷವನ್ನು ಪರಿಹರಿಸಲು ಹೇಗೆ ಪ್ರಯತ್ನಿಸುತ್ತಿದೆ. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯರ ನಡುವಿನ ಭಿನ್ನಾಭಿಪ್ರಾಯದಿಂದಾಗಿ ಎರಡು ರಾಷ್ಟ್ರಗಳ ಸಂಘರ್ಷದ ವಿಷಯದಲ್ಲಿ ಯಾವುದೇ ಕಠಿಣ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ. ಮುಖ್ಯವಾಗಿ ಈ ಸಂಘರ್ಷವು ಜಾಗತಿಕ ಶಾಂತಿ ಮತ್ತು ಸ್ಥಿರತೆಗೆ ಬೆದರಿಕೆಯನ್ನು ಒಡ್ಡುತ್ತಿದೆ ಮತ್ತು ವಿಶ್ವ ರಾಷ್ಟ್ರಗಳು ಶಾಂತಿಯುತ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕಾಗಿದೆ. ಈ ಸಂಘರ್ಷವು ಜಾಗತಿಕ ಆರ್ಥಿಕತೆಯ ಮೇಲೆ ಯಾವ ಪರಿಣಾಮಗಳನ್ನು ಬೀರಬಹುದು? ಜಾಗತಿಕ ಶಾಂತಿಗಾಗಿ ಸಣ್ಣ ದೇಶಗಳಿಗೆ ದಾರಿ ತೋರಿಸಬೇಕಾದ ಅಮೆರಿಕಾ, ರಷ್ಯಾ ಮತ್ತು ಚೀನಾದಂತಹ ದೊಡ್ಡ ದೇಶಗಳು ಈಗಿನ ಪರಿಸ್ಥಿತಿಯಲ್ಲಿ ವಿಘಟನೆಗೊಂಡಿರುವುದು ವಿಷಾಧಕರ ಸಂಗಾತಿಯಾಗಿದೆ.

ಇಸ್ರೇಲ್-ಇರಾನ್ ಯುದ್ಧವು ವಿಶ್ವ ಶಾಂತಿಗೆ ಗಂಭೀರ ಬೆದರಿಕೆಯನ್ನು ಒಡ್ಡಿದೆ. ಈ ಸಂಘರ್ಷವು ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆಯನ್ನು ಹೆಚ್ಚಿಸಿದ್ದು, ವಿಶ್ವದಾದ್ಯಂತ ಆರ್ಥಿಕ ಮತ್ತು ರಾಜಕೀಯ ಪರಿಣಾಮಗಳನ್ನು ಉಂಟು ಮಾಡಿದೆ. ಮುಖ್ಯವಾಗಿ ಇರಾನ್ ಸಮೀಪದ ಹಾರ್ಮುಜ್ ಜಲಸಂಧಿಯ ಮೂಲಕ ಸಾಗುವ ತೈಲ ಪೂರೈಕೆಗೆ ಅಡ್ಡಿಯಾಗಿದೆ. ಇದರಿಂದ ಜಾಗತಿಕ ತೈಲ ಬೆಲೆಗಳು ಏರಿಕೆಯಾಗಬಹುದು. ಪ್ರಾದೇಶಿಕ ಅಸ್ಥಿರತೆ ಬಗ್ಗೆ ಯೋಚಿಸುವುದಾದರೆ ಈ ಸಂಘರ್ಷವು ಮಧ್ಯ ಪ್ರಾಚ್ಯದಲ್ಲಿ ಅಸ್ಥಿರತೆಯನ್ನು ಹೆಚ್ಚಿಸಬಹುದು, ಇದು ಇತರ ದೇಶಗಳನ್ನು ಒಳಗೊಳ್ಳುವಂತೆ ಮಾಡಬಹುದು. ಭಯೋತ್ಪಾದನೆ ವಿಚಾರಕ್ಕೆ ಬಂದಾಗ ಇರಾನ್ ಬೆಂಬಲಿತ ಗುಂಪುಗಳು ಇಸ್ರೇಲ್ ಮತ್ತು ಅದರ ಮಿತ್ರರ ವಿರುದ್ಧ ದಾಳಿಗಳನ್ನು ನಡೆಸಬಹುದು. ಇದರ ಜೊತೆಗೆ ಭವಿಷ್ಯದ ಪರಿಣಾಮಗಳ ಚಿಂತೆ ಕೂಡ ಕಾಡುತ್ತಿದೆ. ಯುದ್ಧದ ಕಾರಣ ಪೂರೈಕೆ ಸರಪಳಿಯಲ್ಲಿ ಅಸ್ತವ್ಯಸ್ಥತೆ ಉಂಟಾಗಿದ್ದು, ಇದು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು, ವಿಶೇಷವಾಗಿ ತೈಲ ಆಮದು ಮಾಡಿಕೊಳ್ಳುವ ದೇಶಗಳಿಗೆ ಅದರ ಬಿಸಿ ತಟ್ಟಬಹುದು.

ಈ ಸಂಘರ್ಷವು ಮಧ್ಯಪ್ರಾಚ್ಯದಲ್ಲಿ ರಾಜಕೀಯ ಪರಿಸ್ಥಿತಿಯನ್ನು ಬದಲಾಯಿಸಬಹುದು ಮತ್ತು ಹೊಸ ಮಿಲಿಟರಿ ಮಧ್ಯಸ್ಥಿಕೆಗಳಿಗೆ ಕಾರಣವಾಗಬಹುದು. ಸಂಘರ್ಷವನ್ನು ನಿಯಂತ್ರಿಸಲು ಮತ್ತು ಶಾಂತಿ ಮಾತುಕತೆಗಳನ್ನು ಪ್ರಾರಂಭಿಸಲು ಅಂತಾರಾಷ್ಟ್ರೀಯ ಸಮುದಾಯದ ಪ್ರಯತ್ನಗಳು ಹೆಚ್ಚಾಗಬಹುದು. ಇಸ್ರೇಲ್-ಇರಾನ್ ಸಂಘರ್ಷದ ಭವಿಷ್ಯ ಏನು ಎಂದು ನಾವು ಯೋಚಿಸುವುದಾದರೆ ಈ ಸಂಘರ್ಷವನ್ನು ನಿಯಂತ್ರಿಸಲು ಅಂತಾರಾಷ್ಟ್ರೀಯ ಸಮುದಾಯ ಯಾವ ಕ್ರಮಗಳನ್ನು ತೆಗೆದುಕೊಳ್ಳಲಿದೆ ಎಂಬುದನ್ನು ಕಾದು ನೋಡಬೇಕು.

ವಿಶ್ವನಾಥ್ ಅಮೀನ್, ನಿಡ್ಡೋಡಿ.

## ತನ್ನ ಸಾಹಿತ್ಯಕ್ಕಿಂತಲೂ ಎತ್ತರದಲ್ಲಿ ತನ್ನ ಬದುಕನ್ನೇ ನಿಲ್ಲಿಸಿದ ಬಿ ಎಮ್ ರೋಹಿಣಿ






ಕರಾವಳಿ ಭಾಗದ ಖ್ಯಾತ ಸಂಶೋಧಕರೂ ಲೇಖಿಕೆಯೂ ಆದ ಬಿ.ಎಮ್. ರೋಹಿಣಿ ಅವರಿಗೆ ಅವರ ಅಭಿಮಾನಿಗಳೆಲ್ಲ ಸೇರಿ ಫೆಬ್ರವರಿ 21 ರಂದು ಮಂಗಳೂರಿನಲ್ಲಿ ಅಭಿನಂದನ ಗ್ರಂಥವನ್ನು ಅರ್ಪಿಸಿ ಅಭಿನಂದನ ಸಮಾರಂಭವನ್ನು ನಡೆಸಿದ್ದಾರೆ. ಹತ್ತು ವರ್ಷಗಳ ಹಿಂದೆ ರೋಹಿಣಿಯವರ ಕುರಿತ ಅಭಿನಂದನ ಗ್ರಂಥ ತರುವ ವಿಚಾರವನ್ನು ನಾನು ಪ್ರಸ್ತಾಪಿಸಿದ್ದೆ. ಎಷ್ಟು ಮಾತ್ರಕ್ಕೂ ಅವರು ಒಪ್ಪಲಿಲ್ಲ. ಈ ಬಾರಿಯೂ ಒಪ್ಪಿರಲಿಲ್ಲವಂತೆ. ಕೊನೆಗೆ ಅವರ ಗೆಳತಿಯರು, 'ನೀವು ಒಪ್ಪದಿದ್ದರೆ ಬೇಡ. ನಾವಂತೂ ಮಾಡುತ್ತೇವೆ. ನೀವು ಏನಾದರೂ ಮಾಡ್ಕೊಳ್ಳಿ' ಎಂದರಂತೆ. ಆದ್ದರಿಂದ ಅವರಿಗೆ ಇದೆಲ್ಲ ಅನಿವಾರ್ಯವಾಯಿತು.

ಬಿ.ಎಮ್. ರೋಹಿಣಿ ಶಿಕ್ಷಣದ ಬಗ್ಗೆ ಮಾತನಾಡುತ್ತಾರೆ. ಕೇವಲ ಅಧ್ಯಯನದಿಂದಲ್ಲ. ಸ್ವತಃ ಅವರ ಪ್ರಾಥಮಿಕ ಶಾಲಾ ಅಧ್ಯಾಪಿಕೆಯಾಗಿದ್ದು ವಾಸ್ತವದ ಅನುಭವದ ಆಧಾರದಲ್ಲಿ ಅಧ್ಯಯನ ನಡೆಸಿ ಮಾತನಾಡುತ್ತಾರೆ ಮತ್ತು ಬರೆಯುತ್ತಾರೆ. ರೋಹಿಣಿಯವರ ಕಥೆಗಳು ಮತ್ತು ಕವಿತೆಗಳು ಹೆಚ್ಚು ವೈಚಾರಿಕ ನೆಲೆಗಟ್ಟಿನವು. ಅವರು ವೈಚಾರಿಕ ನೆಲೆಯಲ್ಲಿ ವಿಸ್ತರಿಸಿಕೊಂಡ ಹಾಗೆಲ್ಲ ಅವರು ವೈಚಾರಿಕತೆ ಮತ್ತು ಸಂಶೋಧನೆಗಳಿಗೆ ಆದ್ಯತೆ ನೀಡಿ ಸೃಜನಶೀಲ ಪ್ರಕಾರಗಳಿಂದ ದೂರ ಹೋದರು. ರೋಹಿಣಿಯವರ ಸಂಶೋಧನೆಗಳು ಹೆಚ್ಚು ಕ್ಷೇತ್ರ ಕಾರ್ಯ ಮತ್ತು ಸಮೀಕ್ಷಾ ಅನುಭವಗಳಿಗೆ ಒತ್ತು ಕೊಟ್ಟಂತಹವುಗಳು. ಸ್ವಾತಂತ್ರ್ಯ ಹೋರಾಟದಲ್ಲಿ ಜೈಲು ಸೇರಿದ ಕರಾವಳಿಯ ಎಲ್ಲರ ಮಾಹಿತಿಗಳನ್ನು ಮಂಗಳೂರು ಜೈಲಿನಿಂದ ಸಂಗ್ರಹಿಸಿ ಅವರನ್ನೆಲ್ಲ ಗುರುತಿಸಿದ್ದಾರೆ. ಲೈಂಗಿಕ ಕಾರ್ಯಕರ್ತೆಯರ ಬಳಿಗೇ ಹೋಗಿ ಅವರ ಬೈಗುಳಗಳನ್ನೂ ಕೇಳಿಸಿಕೊಂಡು ಅವರ ಕುರಿತ ಅಧ್ಯಯನವನ್ನು ನಡೆಸಿದ್ದಾರೆ. ವಿಧವೆಯರಿಗೆ ಮಾಸಾಶನ ಕೊಡಿಸುವುದರಲ್ಲಿ ರೋಹಿಣಿಯವರ ಪ್ರಯತ್ನ ಅತಿ ದೊಡ್ಡದು. ಅನೇಕ ಬಡ ವಿದ್ಯಾರ್ಥಿಗಳಿಗೆ ಹಣ ವ್ಯವಸ್ಥೆ ಮಾಡಿಸಿ ಅವರ ವ್ಯಾಸಂಗದ ಜವಾಬ್ದಾರಿ ನಿರ್ವಹಿಸಿದ್ದಾರೆ. ಹೀಗೆ ಸಮಾಜಕ್ಕೆ ರೋಹಿಣಿಯವರ ಕೊಡುಗೆಗಳು ಬಹಳ.




ಆದರೆ ನಾನು ಹೇಳಲು ಬಯಸಿದ್ದು ಇದನ್ನಲ್ಲ. ಸುಮಾರು 25 ವರ್ಷಗಳಿಂದ ರೋಹಿಣಿಯವರು ನನಗೆ ಆಪ್ತರು. ಇಷ್ಟು ವರ್ಷಗಳಲ್ಲಿ ಅವರನ್ನು ನಾನು ಕಂಡುಕೊಂಡಾಗ ದೊರಕ್ಕಿದ್ದನ್ನು ಹೇಳುವುದು ನನ್ನ ಉದ್ದೇಶ. 85 ವರ್ಷದ ವಯೋ ವೃದ್ಧರಾದ ರೋಹಿಣಿಯವರು 'ನೀವೊಬ್ಬ ಸಾಧಕರು' ಎಂದರೆ ಒಪ್ಪಲು ಇಂದಿಗೂ ತಯಾರಿಲ್ಲ. ಅವರು ಸಾಧಕರು ಯಾಕೆ ಎನ್ನುವುದನ್ನು ಹೇಳಬೇಕು. ರೋಹಿಣಿಯವರು ಸುಶಿಕ್ಷಿತ ಹಿನ್ನೆಲೆಯ ಕುಟುಂಬದವರಲ್ಲ. ಅವರ ಶಾಲಾ ವ್ಯಾಸಂಗಕ್ಕೆ ಬೆಂಬಲವಾಗಿ ಯಾರೂ ಇರಲಿಲ್ಲ. ಅವರ ತಂದೆ ದೊಡ್ಡ ಜವಾಬ್ದಾರಿ ತೆಗೆದುಕೊಳ್ಳುವ ವ್ಯಕ್ತಿತ್ವದವರಲ್ಲ. ತಾಯಿಗೆ ಮನಸ್ಸಿದ್ದರೂ ಬೆಂಬಲಿಸಬಹುದಾದ ಶಕ್ತತೆಯನ್ನು ಹೊಂದಿದ್ದವರಲ್ಲ. ಇರುವ ಏಕೈಕ ಸಹೋದರ ಬಿ. ಎಮ್. ರೋಹಿತ್ ರೋಹಿಣಿಯವರಿಗಿಂತ ಹನ್ನೆರಡು ವರ್ಷಕ್ಕೆ ಕಿರಿಯರು. ಆದ್ದರಿಂದ ಬದುಕಿಗೆ ತಳಪಾಯವಾಗುವ ರೋಹಿಣಿಯವರ ಬಾಲ್ಯ ಕೇವಲ ಅವರದೇ ಆಗಿತ್ತು. ತಾನು ಕೆಲಸ- ಸಂಪಾದನೆಯನ್ನೂ ಮಾಡಿಕೊಂಡು ಶಾಲಾ ವ್ಯಾಸಂಗವನ್ನೂ ಒಬ್ಬ ಹೆಣ್ಣು ಮಗಳು ಆ ಕಾಲಕ್ಕೆ ನಡೆಸಿದ್ದೇ ಒಂದು ದೊಡ್ಡ ಸಾಧನೆ. ಇದನ್ನೊಮ್ಮೆ ನಾನು ಹೇಳಿದ್ದಾಗ, 'ನೀವೂ ಬಾಲ್ಯದ ಸಂಕಷ್ಟಗಳನ್ನು ಎದುರಿಸಲಿಲ್ಲವೆ?' ಎಂದಿದ್ದರು. ನಾನು ಎದುರಿಸಿದ್ದು ಹೌದು. ಆದರೆ ಅವರಿಗಿಂತ 35 ವರ್ಷಕ್ಕೆ ಕಿರಿಯನಾದ ನನಗೆ ಅವರಿಗಿಂತ ತುಸು ಜಾಸ್ತಿ ಸಾಧ್ಯತೆಗಳಿದ್ದವು. ಅಲ್ಲದೆ ನಾನು ಹುಡುಗನಾಗಿದ್ದೆ. ಹುಡುಗನಿಗೆ ಇರಿಯುವ ಕಾಮದ ಕಣ್ಣುಗಳನ್ನು ಎದುರಿಸಬೇಕಾದ ಸಮಸ್ಯೆ ಬರುವುದಿಲ್ಲ. ಹುಡುಗಿಯ ಪರಿಸ್ಥಿತಿ ಹೀಗಲ್ಲ. ದಶ ದಿಕ್ಕುಗಳಿಂದಲೂ ಹುಡುಗಿಯ ದೇಹವನ್ನು ಸ್ಕ್ಯಾನ್ ಮಾಡುವ ಕಣ್ಣುಗಳನ್ನು ನಿಭಾಯಿಸಿ ವ್ಯಕ್ತಿತ್ವವನ್ನು ದೃಢವಾಗಿ ಇರಿಸಿಕೊಳ್ಳುವ ಸವಾಲು ಇರುತ್ತದೆ. ಆ ಕಷ್ಟವನ್ನು ಹೆಣ್ಣಲ್ಲದಿದ್ದರೂ ನಾನು ಅರ್ಥ ಮಾಡಿಕೊಳ್ಳಬಲ್ಲೆ. ಇಂತಹ ಸವಾಲುಗಳೆಲ್ಲವನ್ನೂ ನಿಭಾಯಿಸಿಕೊಂಡು ತನಗೆ ತಾನೇ ಆದಾಯ ಗಳಿಕೆಯನ್ನೂ ಶಿಕ್ಷಣ ಗಳಿಕೆಯನ್ನೂ ಉದ್ಯೋಗ ಗಳಿಕೆಯನ್ನೂ ಮಾಡಿಕೊಂಡು ರೋಹಿಣಿಯವರು ತನ್ನ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ. ಇದು ಸಣ್ಣ ಸಾಧನೆಯಲ್ಲ.

ರೋಹಿಣಿಯವರು ಅವಿವಾಹಿತೆ. 'ಆಗುವ ಕಾಲಕ್ಕೆ ಮದುವೆಗೆ ಬೇಕಾದ ಅನುಕೂಲತೆಗಳಿರಲಿಲ್ಲ. ಆಮೇಲೆ ಮದುವೆ ಬೇಕು ಎಂದು ಅನಿಸಲಿಲ್ಲ' ಎಂದು ಒಂದು ಸಣ್ಣ ವಿಷಯದ ಹಾಗೆ ಹೇಳಿ ಮುಗಿಸಬಲ್ಲ ಅವರು ಅದಕ್ಕಾಗಿ ಕೊರಗಿಯೂ ಇಲ್ಲ ಎನ್ನುವುದು ಮುಖ್ಯ ವಿಷಯ. ಸಾಮಾನ್ಯವಾಗಿ ಈ ರೀತಿ ಇದ್ದಾಗ ಕಾಲಾನುಕ್ರಮದಲ್ಲಿ ಅಸಹಾಯಕತೆಯ ಭಾವ ಉಂಟಾಗಿ ಯಾರನ್ನೊ ದೋಷಿಯಾಗಿಸುವುದು, ರೇಗಾಡುವುದು, ಮನ್ನಣೆಯ ದಾಹದ ನಾನಾ ಪ್ರತಿಕ್ರಿಯೆಗಳೆಲ್ಲ ತಲೆದೋರುತ್ತವೆ. ಆದರೆ ರೋಹಿಣಿಯವರನ್ನು ಇಂತಹ 'ಕಾಡುವಿಕೆ' ಗಳನ್ನು ಹತ್ತಿರಕ್ಕೂ ಸೇರಿಸಿಲ್ಲ. ಅವರ ನಿರ್ಧಾರದಲ್ಲಿ ಅವರ ಯೌವ್ವನದಲ್ಲಿ ಎಷ್ಟು ದೃಢವಾಗಿ ಇದ್ದಿರಬಹುದೊ ಅದೇ ದೃಢತೆಯಲ್ಲೆ ಈಗಲೂ ಇದ್ದಾರೆ.

'ನನಗೆ ಏನೋ ಬೇಕಿತ್ತು. ಆದರೆ ಸಿಗಲಿಲ್ಲ' ಎನ್ನುವ ಭಾವದ ಮಾತುಗಳನ್ನು ಅವರಿಂದ ಒಂದು ಬಾರಿಯೂ ನಾನು ಕೇಳಿಲ್ಲ. ತಾನು ಹಿಂದುಳಿದ ವರ್ಗದ ಮಹಿಳೆ ಎಂದು ಸ್ವಲ್ಪ ಮೂವ್ ಮಾಡಿದ್ದರೆ ಅವರ ಪೊಸಿಷನ್ ಇನ್ನೇನೊ ಆಗಿಬಿಡಲು ಸಾಧ್ಯವಿತ್ತು. ಹಾಗೆ ಹೊರಟಿದ್ದರೆ ಅದರಲ್ಲಿ ಯಾವ ತಪ್ಪೂ ಇರಲಿಲ್ಲ. ಆದರೆ ಅವರು ಯಾವ ಕನ್ಸಿಡರೇಷನ್‌ಗಳನ್ನೂ ಹಿಡಿದುಕೊಂಡು ಓಡಾಡುವವರೇ ಅಲ್ಲ. ಒಂದು ಸಂವಾದದಲ್ಲಿ ಅವರಿಗೆ, 'ನೀವು ಸ್ತ್ರೀಯರ ಪರವಾದ ಗಟ್ಟಿ ಧ್ವನಿ. ಅದಕ್ಕೆ ನನ್ನ ಬೆಂಬಲವೂ ಇದೆ. ಆದರೆ ಉದ್ಯೋಗದ ಸ್ಥಳಗಳಲ್ಲಿ ಕೆಲವು ಸ್ತ್ರೀಯರು ಅವರ ಕೆಲಸವನ್ನು ನಯವಾಗಿ ಪುರುಷರಿಗೆ ದಾಟಿಸಿಬಿಡುತ್ತಾರೆ. ಇಂತಾದ್ದನ್ನು ಏನು ಮಾಡಬೇಕು?' ಎಂದು ಕೇಳಿದ್ದೆ. 'ಅಂತಾದ್ದಕ್ಕೆಲ್ಲ ಪುರುಷರು ಮಣಿಯಬಾರದು. ತಮ್ಮ ಜವಾಬ್ದಾರಿಯನ್ನು ತಾವೇ ಮಾಡಬೇಕು ಎಂಬ ಬದ್ಧತೆ ಸ್ತ್ರೀಯರಿಗಿರಬೇಕು. ಯಾರ ತಲೆಗೊ ಹಾಕಿ ಹೋಗುವುದಲ್ಲ' ಎಂದು ಉತ್ತರಿಸಿದ್ದರು. ಅವರ ಸ್ತ್ರೀವಾದ ಎಂದೂ ಮುಲಾಜಿಲ್ಲದ ಅತ್ಯಂತ ಜವಾಬ್ದಾರಿಯುತ ಸ್ತ್ರೀವಾದ.

ಈ ನಡೆವಳಿಕೆ ಕೇವಲ ಸಾರ್ವಜನಿಕವಾಗಿ ಮಾತ್ರ ಅಲ್ಲ. ಕೌಟುಂಬಿಕವಾಗಿಯೂ ಕೂಡ. ಅವರು ತಮ್ಮ ಸಹೋದರ, ಸಹೋದರನ ಪತ್ನಿ, ಸಹೋದರನ ಮಗಂದಿರು,ಸೊಸೆಯಂದಿರು ಮತ್ತು ಮೊಮ್ಮಕ್ಕಳೊಂದಿಗೇ ಇದ್ದಾರೆ. ಮತ್ತು ಡಿಸ್ಪ್ಯೂಟ್‌ಗಳಿಲ್ಲ. ಈಗ ರೋಹಿಣಿಯವರು, ಅವರ ಸಹೋದರ, ಸಹೋದರನ ಪತ್ನಿ ಮೂವರೂ ನಿವೃತ್ತರು. ಮನೆಯಲ್ಲಿ ಖುಷಿಖುಷಿಯಾಗಿಯೇ ಇರುತ್ತಾರೆ. ರೋಹಿಣಿಯವರನ್ನು ನಾವು ಕಾಣಲು ಹೋದರೆ ಆ ಭೇಟಿ ರೋಹಿಣಿಯವರಿಗೆ ಸೀಮಿತ ಆಗಿರುವುದಿಲ್ಲ. ಮನೆಯವರೆಲ್ಲರೂ ನಮ್ಮೊಂದಿಗೆ ಒಂದಾಗುತ್ತಾರೆ. ಅದು ಇಡೀ ಕುಟುಂಬದ ಭೇಟಿಯೇ ಆಗಿರುತ್ತದೆ. ಬದುಕಿನ ಬಗ್ಗೆ ಒಂದು ಸ್ಪಷ್ಟ vision ಇದ್ದು ತಾನು ತೆಗೆದುಕೊಂಡ ಯಾವ ನಿರ್ಧಾರಗಳಿಗೂ ಆಮೇಲೆ ಪಶ್ಚಾತ್ತಾಪ ಪಡದೆ ಬದುಕುವ ಶಕ್ತಿ ಇರುವ ಅತೀ ವಿರಳ ವ್ಯಕ್ತಿತ್ವಗಳಿಗೆ ಮಾತ್ರ ರೋಹಿಣಿಯವರ ಹಾಗೆ ಬದುಕಲು ಸಾಧ್ಯವಾಗುತ್ತದೆ.

ಕೆಲಸ ಮಾಡಬೇಕಾದರೆ ಪ್ರಶಸ್ತಿ, ಅಧಿಕಾರ, ಪ್ರಚಾರ ಯಾವುದರ ಅಗತ್ಯವೂ ಇಲ್ಲ ಎನ್ನುವ ರೋಹಿಣಿಯವರ ಧೋರಣೆ ನನ್ನನ್ನು ಪ್ರಭಾವಿಸಿದೆ. ಸಾಮಾನ್ಯವಾಗಿ ನಾನು ಯಾರಿಂದಲೂ ಪ್ರಭಾವಿತನಾಗುವುದಿಲ್ಲ. 'ನೀವು ಯಾರ ಸಾಹಿತ್ಯದಿಂದ ಪ್ರಭಾವಿತರಾಗಿ ಬರೆಯತೊಡಗಿದಿರಿ? ನಿಮಗೆ ಅತಿ ಇಷ್ಟವಾಗುವ ಸಾಹಿತ್ಯ ಯಾರದು?' ಎಂದು ಯಾರಾದರೂ ನನ್ನ ಬಳಿ ಕೇಳಿದರೆ ನನ್ನ ಬಳಿ ಉತ್ತರವಿಲ್ಲ. ಆದರೆ ಬದುಕುವ ವಿಧಾನದಲ್ಲಿ ರೋಹಿಣಿಯವರಿಂದ ಒಂದಷ್ಟು ಮಟ್ಟಿಗೆ ಖಂಡಿತವಾಗಿಯೂ ಪ್ರಭಾವಿತನಾಗಿದ್ದೇನೆ. 'ಮೌಲ್ಯ ಆಧಾರಿತ ರಾಜಕಾರಣ' ಎಂದು ರಾಮಕೃಷ್ಣ ಹೆಗಡೆಯವರ ಒಂದು ಪರಿಕಲ್ಪನೆ ಇದೆ. 'ಮೌಲ್ಯ ಆಧಾರಿತ ಜೀವನ' ಎಂದೇನಾದರೂ ಇದ್ದರೆ ಅದನ್ನು ರೋಹಿಣಿಯವರಿಂದ ಕಲಿಯಬೇಕು. 'ನಾನು ಈ ಅಭಿನಂದನೆ ಎಲ್ಲ ಬೇಡ ಎಂದು ಹೇಳಿದೆ ಆಯ್ತ ಅರವಿಂದ್, ಆದರೆ ಕೇಳಲಿಲ್ಲ' ಎಂದು ಮುಕ್ತವಾಗಿ ಅವರು ಹೇಳುವುದನ್ನು ಕೇಳಿದಾಗ ರೋಹಿಣಿಯವರು ಸಮಾಜಕ್ಕೆ ಕೊಟ್ಟ ಕೊಡುಗೆಗಳಿಗಿಂತ ಸ್ವತಃ ರೋಹಿಣಿಯವರೇ ಸಮಾಜಕ್ಕೆ ದೊಡ್ಡ ಕೊಡುಗೆ ಎನಿಸಿತು. ನೈತಿಕ ಸ್ಥೈರ್ಯ ಇರುವವರಲ್ಲಿ ಕೆಲವೊಮ್ಮೆ ನೈತಿಕತೆಯ ಅಟ್ಟಹಾಸ ಇರುತ್ತದೆ. ಇನ್ನೊಬ್ಬರ ಮಾನವ ಸಹಜ ದೌರ್ಬಲ್ಯಗಳನ್ನಿರಿಸಿಕೊಂಡು ಅದು ಅಟ್ಟಹಾಸಕ್ಕೆ ಇಳಿಯುತ್ತದೆ. ರೋಹಿಣಿಯವರಲ್ಲಿ ಅಗಾಧ ನೈತಿಕ ಶಕ್ತಿ ಇದೆ. ಆದರೆ ನೈತಿಕ ಸ್ಥೈರ್ಯದ ಅಟ್ಟಹಾಸವಿಲ್ಲ.

ತಮ್ಮ ಬದುಕಿಗಿಂತ ಶ್ರೇಷ್ಠ ಸಾಹಿತ್ಯವನ್ನು ಕೊಟ್ಟ ಹಲವರಿದ್ದಾರೆ. ಆದರೆ ರೋಹಿಣಿಯವರು ತನ್ನ ಸಾಹಿತ್ಯಕ್ಕಿಂತಲೂ ಎತ್ತರದಲ್ಲಿ ತನ್ನ ಬದುಕನ್ನೆ ನಿಲ್ಲಿಸಿದವರು. ಒಬ್ಬ ವ್ಯಕ್ತಿಯೇ ಒಂದು ಇನ್ಸ್ಟಿಟ್ಯೂಷನ್ ಆಗಲು ಸಾಧ್ಯ ಎನ್ನಲು ಮಾದರಿ ರೋಹಿಣಿಯವರು. ಇಂಥವರ ಕಾಲದಲ್ಲಿ ನಾವು ಬದುಕಿದ್ದೆವು ಎಂದು ಹೆಮ್ಮೆ ಪಡಲು ಸಾಧ್ಯವಾಗುವವರು ಅತೀ ವಿರಳ. ಅಂತಹ ವಿರಳರಲ್ಲೊಬ್ಬರು ರೋಹಿಣಿಯವರು.

ಅರವಿಂದ ಚೊಕ್ಕಾಡಿ

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗ : ಮಾ.20 ರಂದು ಪ್ರಭಾಕರ ದೇವಾಡಿಗ ಆರೂರು ಅವರ ಚೊಚ್ಚಲ ಕೃತಿ ಬಿಡುಗಡೆ


ಗುಣಪಾಲ ಉಡುಪಿ


ಡಾ. ಭರತ್ ಕುಮಾರ್ ಪೊಲಿಪು


ಪ್ರಭಾಕರ ದೇವಾಡಿಗ

ಮುಂಬಯಿ, ಮಾ. 8 - ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಆಯೋಜನೆಯಲ್ಲಿ ಲೇಖಕ ಪ್ರಭಾಕರ ದೇವಾಡಿಗ ಆರೂರು ಅವರ 'ಲಲಿತರಂಗ ಗುಣನಾಯಕ' ಹಿರಿಯ ರಂಗ ತಜ್ಞ, ನಾಟಕರಂಗದ ಸವ್ಯಸಾಚಿ ಗುಣಪಾಲ ಉಡುಪಿ ಅವರ 'ಬದುಕು ಬರಹ' ಕೃತಿಯು ಮಾರ್ಚ್ 20ರ ಶುಕ್ರವಾರದಂದು ಲೋಕಾರ್ಪಣೆಗೊಳ್ಳಲಿದೆ. ಈ ಕೃತಿಯನ್ನು ಅಭಿಜಿತ್ ಪ್ರಕಾಶನ ಪ್ರಕಟಿಸಿದೆ. ಈ ಕಾರ್ಯಕ್ರಮವು ಮುಂಬೈ ವಿವಿಯ ಸಾಂತಾಕ್ರೂಸ್ ಪೂರ್ವದ ವಿದ್ಯಾನಗರಿ ಕಲೀನಾದ ಜೆ. ಪಿ.ನಾಯಕ್ ಸಭಾಗೃಹದಲ್ಲಿ ಮಧ್ಯಾಹ್ನ ಗಂಟೆ 2 ರಿಂದ ನಡೆಯಲಿದೆ.

ಖ್ಯಾತ ರಂಗತಜ್ಞ ಡಾ. ಭರತ್ ಕುಮಾರ್ ಪೊಲಿಪು ಇವರು ಈ ಕೃತಿಯನ್ನು ಬಿಡುಗಡೆ ಮಾಡುವರು. ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ಹಿರಿಯ ಪ್ರಾಧ್ಯಾಪಕರೂ ಆದ ಪ್ರೊ. ಜಿ. ಎನ್. ಉಪಾಧ್ಯ ಅವರು ಅಧ್ಯಕ್ಷತೆ ವಹಿಸುವರು. ಕೃತಿಯ ಪರಿಚಯವನ್ನು ಲೇಖಕಿ ಲತಾ ಸಂತೋಷ್ ಶೆಟ್ಟಿ ಅವರು ಮಾಡುವರು. ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಸುಧಾಕರ್ ಶೆಟ್ಟಿ ಅವರು ಕಾರ್ಯಕ್ರಮವನ್ನು ನಿರೂಪಿಸಲಿದ್ದಾರೆ.

ಸಾಹಿತ್ಯಾಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸುವಂತೆ ಕನ್ನಡ ವಿಭಾಗದ ಪ್ರಕಟಣೆ ತಿಳಿಸಿದೆ.

ಪ್ರಭಾಕರ ದೇವಾಡಿಗ, ಇವರು ಮೂಲತಃ ಉಡುಪಿ ಜಿಲ್ಲೆಯ ಆರೂರಿನವರು. ಇವರು ಮುಂಬಯಿ ವಿವಿಯ ಕನ್ನಡ ವಿಭಾಗದ ಹಿರಿಯ ವಿದ್ಯಾರ್ಥಿ. ಮುಂಬಯಿ ವಿವಿಯಿಂದ ಎಂ.ಎ. ಪದವಿಯನ್ನು ಪಡೆದಿದ್ದಾರೆ. ಉದ್ಯೋಗವನ್ನು ಅರಸಿಕೊಂಡು ಮುಂಬಯಿ ಮಹಾನಗರಕ್ಕೆ 1979ರಲ್ಲಿ ಆಗಮಿಸಿ, ರಾತ್ರಿ ಶಾಲೆ, ಕಾಲೇಜುಗಳಲ್ಲಿ ಶಿಕ್ಷಣ ಪಡೆದು ಬಿ. ಕಾಮ್. ಪದವೀಧರರಾಗಿ, ನವಿ ಮುಂಬಯಿಯ ಒಂದು ಸಾಪ್ತಾಹಿಕ ಆಂಗ್ಲ ವಾರಪತ್ರಿಕೆಯಲ್ಲಿ ಓರ್ವ ಪತ್ರಕರ್ತನಾಗಿ ಉದ್ಯೋಗ ಮಾಡುತ್ತಾ ಬಳಿಕ ಎಲ್. ಎಲ್. ಬಿ. ಪರೀಕ್ಷೆ ಬರೆದು ಉತ್ತೀರ್ಣರಾಗಿ ವಕೀಲರಾದರು. ಮುಂಬಯಿಯಲ್ಲಿ ವಕೀಲ ವೃತ್ತಿಯನ್ನು ಮಾಡುತ್ತಾ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದಲ್ಲಿ ಎಂ.ಎ. ಅಭ್ಯಾಸಕ್ರಮವನ್ನು ಪೂರ್ಣಗೊಳಿಸಿದರು.

ತಮ್ಮ ಶಿಕ್ಷಣದ ಜೊತೆಯಲ್ಲಿ ನವಿಮುಂಬಯಿ ಕನ್ನಡ ಸಂಘ, ದೇವಾಡಿಗ ಸಂಘ ಮುಂಬಯಿ, ನ್ಯೂ ಸಿಟಿ ಜರ್ನಲಿಸ್ಟ್ ಅಸೋಸಿಯೇಷನ್, ಜೈ ಅಂಬೇ ಚಾರಿಟೇಬಲ್ ಟ್ರಸ್ಟ್, ಮೊದಲಾದ ಅನೇಕ ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿದ್ದು, ಭಜನೆ ಮತ್ತು ಯಕ್ಷಗಾನದ ಕಲಾವಿದರಾಗಿ ಸಹ ಕಾರ್ಯ ನಿರ್ವಹಿಸುತ್ತಿದ್ದಾರೆ. ತಮ್ಮನ್ನು ಸಕ್ರಿಯವಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡ ಪ್ರಭಾಕರ ಅವರು ಮುಂಬಯಿಯಲ್ಲಿ ಸುಮಾರು ನಾಲ್ಕೂವರೆ ದಶಕಗಳ ಕಾಲ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಿಕೊಂಡು ಮುಂಬಯಿ ಕನ್ನಡಿಗರಿಗೆ ಚಿರಪರಿಚಿತರಾದವರು. ಹಲವು ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ. ಬಾಲ್ಯದಲ್ಲಿ ಅವರು ಪೇತ್ರಿ ಘೋರ್ಪಡೆ ಭಾಗವತರ ಮಾರ್ಗದರ್ಶನದಲ್ಲಿ ಬಡಗು ಯಕ್ಷಗಾನದ ನಾಟ್ಯ ಅಭ್ಯಸಿಸಿ ಬಳಿಕ ಯಕ್ಷಗಾನ ಗುರು ಸದಾನಂದ ಶೆಟ್ಟಿ ಇವರ ಮಾರ್ಗದರ್ಶನದಲ್ಲಿ ತೆಂಕುತಿಟ್ಟು ಯಕ್ಷಗಾನ ಅಭ್ಯಸಿಸಿದರು. ಮುಂಬಯಿಯ ಪ್ರಸಿದ್ಧ ನಿಡ್ವಣ್ಣಾಯ ಭಾಗವತರು ಮತ್ತು ಊರಿನ ಪ್ರಖ್ಯಾತ ರಾಮ ಸಾಲ್ಯಾನ್ ಇವರ ಮಾರ್ಗದರ್ಶನದಲ್ಲಿ ಭಾಗವತಿಕೆಯನ್ನು ಅಭ್ಯಸಿದ್ದಾರೆ. ಅವರು ತಮ್ಮ ಎಂ. ಎ. ಅಧ್ಯಯನಕ್ಕೆ ಪ್ರಸ್ತುತ ಪಡಿಸಿದ ಸಂಪ್ರಬಂಧ 'ಲಲಿತರಂಗ ಗುಣ ನಾಯಕ' ಈಗ ಕೃತಿಯಾಗಿ ಲೋಕಾರ್ಪಣೆಗೊಳ್ಳುತ್ತಿದೆ.

# ಕಪ್ಪು ದ್ರಾಕ್ಷಿ ಸೇವನೆಯಿಂದ ದೊರೆಯುವ ಆರೋಗ್ಯ ಪ್ರಯೋಜನಗಳಿವು

**ಕಪ್ಪು ಬಣ್ಣದ ದ್ರಾಕ್ಷಿಗಳು ರುಚಿಯಲ್ಲಿ ಸಿಹಿಯಾಗಿರುತ್ತವೆ ಆದರೆ ಇದು ಆರೋಗ್ಯಕ್ಕೆ ವರದಾನವೆಂದರೆ ತಪ್ಪಾಗಲ್ಲ. ದ್ರಾಕ್ಷಿಯಲ್ಲಿರುವ ಗ್ಲೂಕೋಸ್, ಮೆಗ್ನೀಸಿಯಮ್ ಮತ್ತು ಸಿಟ್ರಿಕ್ ಆಮ್ಲದಂತಹ ಅನೇಕ ಪೋಷಕಾಂಶಗಳು ವ್ಯಕ್ತಿಯನ್ನು ಅನೇಕ ಕಾಯಿಲೆಗಳಿಂದ ದೂರವಿರಿಸಲು ಸಹಾಯ ಮಾಡುತ್ತದೆ. ಕಪ್ಪು ದ್ರಾಕ್ಷಿಯನ್ನು ನಿಯಮಿತವಾಗಿ ಸೇವಿಸುವುದರಿಂದ ನಿಮ್ಮ ಬೊಜ್ಜು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಜೊತೆಗೆ ಮಧುಮೇಹ, ರಕ್ತದೊತ್ತಡ, ಹೃದ್ರೋಗಗಳು, ಚರ್ಮ ಮತ್ತು ಕೂದಲಿಗೆ ಸಂಬಂಧಿಸಿದ ಸಮಸ್ಯೆಗಳನ್ನು ನಿವಾರಿಸಬಹುದು ಎಂದು ನಿಮಗೆ ತಿಳಿದಿದೆಯೇ ಈ ಸ್ಟೋರಿ ನೋಡಿ. ಕಪ್ಪು ದ್ರಾಕ್ಷಿಯನ್ನು ಸೇವಿಸುವುದರಿಂದ ಆಗುವ ಆರೋಗ್ಯ ಪ್ರಯೋಜನಗಳು ಇಲ್ಲಿವೆ:**

■ **ತೂಕ ನಷ್ಟಕ್ಕೆ ಸಹಕಾರಿ:** ಕಪ್ಪು ದ್ರಾಕ್ಷಿಯನ್ನು ಸೇವಿಸುವುದರಿಂದ ತೂಕವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಬೊಜ್ಜು ಕಡಿಮೆ ಮಾಡಲು ಬಯಸುವ ಜನರು ಕಪ್ಪು ದ್ರಾಕ್ಷಿಯನ್ನು ತೆಗೆದುಕೊಳ್ಳಬೇಕು. ಇದು ರಕ್ತದಲ್ಲಿನ ಕೊಲೆಸ್ಟ್ರಾಲ್ ಉತ್ಪತ್ತಿಯಾಗುವುದನ್ನು ನಿಲ್ಲಿಸುವ ಮೂಲಕ ಬೊಜ್ಜಿನಂತಹ ಇತರ ಆರೋಗ್ಯ ಸಮಸ್ಯೆಗಳನ್ನು ತಡೆಯುತ್ತದೆ.

■ **ನೆನಪಿನ ಶಕ್ತಿ ವೃದ್ಧಿ:** ಕಪ್ಪು ದ್ರಾಕ್ಷಿಯನ್ನು ಸೇವಿಸುವುದರಿಂದ ವ್ಯಕ್ತಿಯ ಏಕಾಗ್ರತೆ ಮತ್ತು ಸ್ಮರಣೆಯೂ ಹೆಚ್ಚಾಗುತ್ತದೆ. ಅಷ್ಟೇ ಅಲ್ಲ, ಕಪ್ಪು ದ್ರಾಕ್ಷಿಯನ್ನು ತಿನ್ನುವುದರಿಂದ ಮಾನಸಿಕ ಅಸ್ಥಿರತೆಗಳನ್ನು ಗುಣಪಡಿಸಬಹುದು ಮತ್ತು ಮೈಗ್ರೇನ್‌ನಂತಹ ಕಾಯಿಲೆಗಳನ್ನು ತೊಡೆದುಹಾಕುವ ಶಕ್ತಿ ಈ ದ್ರಾಕ್ಷಿಯಲ್ಲಿದೆ.

■ **ಮಧುಮೇಹಿಗಳಿಗೆ ಪ್ರಯೋಜನಕಾರಿ:** ಕಪ್ಪು ದ್ರಾಕ್ಷಿಯ ಸೇವನೆ ಮಧುಮೇಹವನ್ನು ಗುಣಪಡಿಸಲು ಸಹ ಸಹಾಯ ಮಾಡುತ್ತದೆ. ಕಪ್ಪು ದ್ರಾಕ್ಷಿಯಲ್ಲಿ ರೆಸ್ವೆರಾಟಲ್ ಎಂಬ ಪದಾರ್ಥವಿದೆ, ಇದು ರಕ್ತದಲ್ಲಿನ ಇನ್ಸುಲಿನ್ ಮಟ್ಟವನ್ನು ಹೆಚ್ಚಿಸುವ ಮೂಲಕ ದೇಹದಲ್ಲಿನ ಸಕ್ಕರೆಯ ಪ್ರಮಾಣವನ್ನು ಸಮತೋಲನಗೊಳಿಸಲು ಸಹಾಯ ಮಾಡುತ್ತದೆ. ಆದ್ದರಿಂದ ಡಯಬಿಟಿಸ್ ಇರುವವರಿಗೆ ಇದು ಉತ್ತಮವಾಗಲಿದೆ.

■ **ಸೋಂಕಿನಿಂದ ದೂರವಿರಿಸಲು ಸಹಕಾರಿ:** ಕಪ್ಪು ದ್ರಾಕ್ಷಿಯಲ್ಲಿನ ರೆಸ್ವೆರಾಟಲ್ ಅಂಶವು ಬ್ಯಾಕ್ಟೀರಿಯಾ ಮತ್ತು ಶಿಲೀಂಧ್ರವನ್ನು ಕೊಲ್ಲಲು ಸಹಾಯ ಮಾಡುತ್ತದೆ. ಇದು ಪೋಲಿಯೊ ಮತ್ತು ಹರ್ಪಿಸ್ ನಂತಹ ರೋಗಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ಕಪ್ಪು ದ್ರಾಕ್ಷಿಗಳು ವೈರಸ್ ವಿರುದ್ಧ ಹೋರಾಡುವ ಸಾಮರ್ಥ್ಯವನ್ನು ಸಹ ಹೊಂದಿವೆ.



# ಟಿಬಿ ಕಾಯಿಲೆಯ ರೋಗ ಲಕ್ಷಣಗಳು ಹೋಗಬೇಕೆಂದರೆ ಈ ಯೋಗ ಮಾಡಿ

**ಈ ಪ್ರಪಂಚದಲ್ಲಿ ಸಾವನ್ನು ತಂದುಕೊಡುವ ಕಾಯಿಲೆಗಳು ಎಂದರೆ ಅದು ಕ್ಯಾನ್ಸರ್, ಏಡ್ಸ್, ಈಗಿನ ಕೊರೋನಾ, ಡೆಂಗ್ಯೂ ಇತ್ಯಾದಿ. ಆದರೆ ಇದರ ಗುಂಪಿಗೆ ಟಿಬಿ ಕಾಯಿಲೆ ಕೂಡ ಸೇರುತ್ತದೆ ಎಂದರೆ ನಿಮಗೆ ಆಶ್ಚರ್ಯ ಅನಿಸಬಹುದು. ವಿಶ್ವ ಆರೋಗ್ಯ ಸಂಸ್ಥೆ ಹೇಳುವ ಪ್ರಕಾರ ಇದೊಂದು ಸೋಂಕು ಕಾಯಿಲೆ ಆಗಿದ್ದು, ಪ್ರಮುಖವಾಗಿ ಶ್ವಾಸಕೋಶ ವ್ಯವಸ್ಥೆಯ ಮೇಲೆ ದಾಳಿ ಮಾಡುವ ಬ್ಯಾಕ್ಟೀರಿಯಾಗಳು ಒಬ್ಬ ವ್ಯಕ್ತಿ ಕೆಮ್ಮಿದಾಗ ಅಥವಾ ಸೀನಿದಾಗ ಸಣ್ಣ ಸಣ್ಣ ನೀರಿನ ಕಣಗಳ ಮೂಲಕ ಬೇರೆಯವರಿಗೆ ವರ್ಗಾವಣೆಯಾಗುತ್ತವೆ. ಈ ಸಮಯದಲ್ಲಿ ಕೆಲವರಿಗೆ ಉಸಿರಾಟದ ತೊಂದರೆ, ಕೆಮ್ಮಿದಾಗ ರಕ್ತ ಕಂಡುಬರುವುದು, ಎದೆ ನೋವು, ದೇಹದಲ್ಲಿನ ತೂಕ ನಷ್ಟ, ಆಯಾಸ, ಜ್ವರ, ರಾತ್ರಿಯ ಸಮಯದಲ್ಲಿ ಮೈ ಬೆವರುವುದು ಮತ್ತು ನಡುಗುವುದು ಹೊಟ್ಟೆ ಹಸಿವು ಇಲ್ಲದಂತಾಗುವುದು ಇತ್ಯಾದಿ ಸಮಸ್ಯೆಗಳು ಕಂಡು ಬರುತ್ತವೆ.**





### ಕೆಲವೊಂದು ಯೋಗಾಭ್ಯಾಸದಿಂದ ಟಿಬಿ ಕಾಯಿಲೆ ನಿಯಂತ್ರಿಸಬಹುದು!

ಆದರೆ ನಿಮಗೆಲ್ಲ ಗೊತ್ತಿರುವ ಹಾಗೆ ಯಾವುದೇ ಕಾಯಿಲೆಯನ್ನು ಹೋಗಲಾಡಿಸಲು ನಾವು ವೈದ್ಯರು ಕೊಡುವ ಔಷಧಿಗಳನ್ನು ತೆಗೆದುಕೊಳ್ಳುವುದರ ಜೊತೆಗೆ ನಮ್ಮ ಜೀವನ ಶೈಲಿಯನ್ನು ಅತ್ಯುತ್ತಮವಾಗಿ ಕಾಪಾಡಿಕೊಳ್ಳಬೇಕು.ಇದರಲ್ಲಿ ಹೆಚ್ಚು ಸಹಾಯಕ ಎಂದರೆ ನಾವು ಯೋಗ ಮಾಡುವ ಅಭ್ಯಾಸವನ್ನು ರೂಡಿ ಮಾಡಿಕೊಳ್ಳುವುದು. ಅತ್ಯಂತ ಪರಿಣಾಮಕಾರಿಯಾಗಿ ಈ ಕೆಳಗೆ ತಿಳಿಸಿರುವ ಯೋಗಾಭ್ಯಾಸಗಳನ್ನು ಟ್ರೈ ಮಾಡುವುದರಿಂದ ನಮ್ಮ ಎದೆಯ ಭಾಗದಲ್ಲಿ ಉಸಿರು ಕಟ್ಟಿಕೊಂಡಿರುವ ಹಾಗೆ ಉಂಟಾಗುವ ಅನುಭವ ದೂರವಾಗುತ್ತದೆ. ಟಿಬಿ ಕಾಯಿಲೆಗೆ ಅತ್ಯಂತ ಪರಿಣಾಮಕಾರಿಯಾದ ಕೆಲವೊಂದು ವ್ಯಾಯಾಮಗಳು



### ಭಸ್ತ್ರಿಕಾ ಪ್ರಾಣಾಯಾಮ

ಭಸ್ತ್ರಿಕಾ ಪ್ರಾಣಾಯಾಮ ಯೋಗಾಭ್ಯಾಸದಲ್ಲಿ ಪ್ರಮುಖವಾಗಿ ನಮ್ಮ ಶ್ವಾಸಕೋಶಗಳು ಬಲಗೊಂಡು, ಅವುಗಳ ಭಾಗದಲ್ಲಿ ಕಂಡುಬರುವ ಕಫ ದೂರವಾಗಿ ರಕ್ತದಲ್ಲಿ ಆಮ್ಲಜನಕ ಹೆಚ್ಚಾಗಿ ದೇಹದ ಒಳಭಾಗದಲ್ಲಿ ಕಂಡುಬರುವ ಇಂಗಾಲ ಡೈ ಆಕ್ಸೈಡ್ ಹೊರಬರಲು ಅನುಕೂಲವಾಗುತ್ತದೆ. ಮುಖ್ಯವಾಗಿ ರಕ್ತ ಸಂಚಾರದಲ್ಲಿ ಆರೋಗ್ಯಕರವಾದ ಪೌಷ್ಟಿಕಾಂಶಗಳನ್ನು ಇಡೀ ದೇಹದ ತುಂಬ ಹರಡುವಂತೆ ನೋಡಿಕೊಳ್ಳುವ ಕೆಲಸವನ್ನು ಯೋಗಾಭ್ಯಾಸ ಮಾಡುತ್ತದೆ. ನಮ್ಮ ನರಮಂಡಲಕ್ಕೆ ಸಂಬಂಧ ಪಟ್ಟ ಹಲವಾರು ಖಚಿತ ಆರೋಗ್ಯ ಸಮಸ್ಯೆಗಳು ಯೋಗಾಭ್ಯಾಸ ಪ್ರಕ್ರಿಯೆಗಳಿಂದ ಬಗೆಹರಿಯುತ್ತವೆ. ಮಾನಸಿಕ ಒತ್ತಡ, ಆತಂಕ, ಮೈಗ್ರೇನ್ ತಲೆ ನೋವು, ಇತ್ಯಾದಿ ಸಮಸ್ಯೆಗಳು ಜೊತೆಗೆ ನರಮಂಡಲಕ್ಕೆ ಸಂಬಂಧಪಟ್ಟ ಹಾಗೂ ಗ್ಯಾಸ್ಟ್ರಿಕ್ ಸಮಸ್ಯೆಗೆ ಹೊಂದಿಕೊಂಡಿರುವ ಸಾಕಷ್ಟು ಸಮಸ್ಯೆಗಳು ಯೋಗಾಭ್ಯಾಸ ಮಾಡುವುದರಿಂದ ಪರಿಹಾರ ಹೊಂದುತ್ತವೆ.

### ತಾಡಾಸನ

ಇದನ್ನು ಗುಡ್ಡ ಭಂಗಿ ಎಂದು ಕರೆಯುತ್ತಾರೆ. ಈ ಯೋಗಾಭ್ಯಾಸವನ್ನು ಮಾಡುವಾಗ ಬೆಟ್ಟದ ರೀತಿ ಆಕಾರ ಕಂಡುಬರುವ ಕಾರಣ ಇದನ್ನು ಆ ರೀತಿ ಕರೆಯುತ್ತಾರೆ. ನಿಮ್ಮ ದೇಹದಲ್ಲಿ ರಕ್ತ ಸಂಚಾರ ಹೆಚ್ಚಾಗಿ ಮೈ ಕೈ ನೋವು, ಟಿಬಿ ಕಾಯಿಲೆ ಮತ್ತು ಇನ್ನಿತರ ಆರೋಗ್ಯ ಸಮಸ್ಯೆಗಳು ಬಗೆಹರಿಯುತ್ತವೆ. ಪ್ರತಿ ದಿನವೂ ನಿಯಮಿತವಾಗಿ ಈ ಯೋಗಾಭ್ಯಾಸವನ್ನು ಮಾಡುವುದರಿಂದ ನಿಮ್ಮ ಮಂಡಿಗಳು, ತೊಡೆಗಳು ಮತ್ತು ಮೊಣಕೈಗಳು ಬಲಗೊಳ್ಳುತ್ತವೆ.

### ಟಿಬಿ ಕಾಯಿಲೆ

ಶ್ವಾಸಕೋಶದ ಹೊರತಾಗಿ ಟಿಬಿ ಕಾಯಿಲೆ ದೇಹದ ಇತರ ಭಾಗಗಳಿಗೆ ಆಂತರಿಕವಾಗಿ ಬಹಳ ಬೇಗನೆ ಹರಡುತ್ತದೆ. ಬ್ಯಾಕ್ಟೀರಿಯಗಳ ಸೋಂಕು ಮೆದುಳು, ಮೂತ್ರಪಿಂಡಗಳು, ಹೃದಯ ಮೂಳೆಗಳು ಇತ್ಯಾದಿಗಳಿಗೆ ರಕ್ತ ಸಂಚಾರದ ಮೂಲಕ ಹರಡುತ್ತದೆ ಎಂದು ಹೇಳಬಹುದು. ಇದರಿಂದ ಬೆನ್ನುಹುರಿ ಭಾಗದಲ್ಲಿ ಸಹ ಸಮಸ್ಯೆ ಕಂಡು ಬರುವ ಸಾಧ್ಯತೆ ಇರುತ್ತದೆ. ಕೆಲವರಿಗೆ ಮೂತ್ರಪಿಂಡಗಳ ಅಸಹಜ ಕಾರ್ಯಚಟುವಟಿಕೆ ಸಹ ಉಂಟಾಗಬಹುದು. ಆದರೆ ರೋಗನಿರೋಧಕ ಶಕ್ತಿ ಹೆಚ್ಚಾಗಿದ್ದರೆ ಆಗಾಗ ಹುಷಾರು ತಪ್ಪುವುದು ಕಡಿಮೆಯಾಗುತ್ತದೆ. ದೇಹದಲ್ಲಿ ರೋಗ ನಿರೋಧಕ ಶಕ್ತಿ ಪ್ರಬಲವಾಗಿ ಇರದಿದ್ದರೆ ಅದರಿಂದ ಸೋಂಕು ಹರಡುವ ಸಾಧ್ಯತೆ ದಟ್ಟವಾಗಿರುತ್ತದೆ. ಅದರಲ್ಲೂ ಕೆಲವು ಬಾರಿ ತೆಗೆದುಕೊಳ್ಳುವ ಔಷಧಿಗಳಿಗೆ ವಿರುದ್ಧವಾಗಿ ಟಿವಿ ಕಾಯಿಲೆಯ ಬ್ಯಾಕ್ಟೀರಿಯಾಗಳು ಕೆಲಸ ಮಾಡುತ್ತವೆ. ಯಾರು ಈಗಾಗಲೇ ಅನಾರೋಗ್ಯಕರ ಆಹಾರ ಪದ್ಧತಿಯನ್ನು ಮತ್ತು ಜೀವನಶೈಲಿಯನ್ನು ಅನುಸರಿಸುತ್ತಿದ್ದಾರೆ ಮತ್ತು ಧೂಮಪಾನ, ಮದ್ಯಪಾನದಂತಹ ಕೆಟ್ಟ ಚಟಗಳನ್ನು ರೂಢಿ ಮಾಡಿಕೊಂಡಿದ್ದಾರೆ ಅಂತಹವರಿಗೆ ಟಿಬಿ ಕಾಯಿಲೆಗೆ ತೆಗೆದುಕೊಳ್ಳುವ ಔಷಧಿಗಳು ಸಹ ನಿಷ್ಪ್ರಯೋಜಕ ಎಂದು ಹೇಳುತ್ತಾರೆ.



### ಕಪಾಲಭಟಿ ಪ್ರಾಣಾಯಾಮ

ಈ ಯೋಗಾಭ್ಯಾಸವನ್ನು ಪ್ರತಿದಿನವೂ ಮಾಡುವುದರಿಂದ ನಿಮ್ಮ ಶ್ವಾಸಕೋಶಗಳ ಸಾಮರ್ಥ್ಯ ಹೆಚ್ಚಾಗುತ್ತದೆ ಮತ್ತು ಅವುಗಳ ಕಾರ್ಯಚಟುವಟಿಕೆಯ ಪಾತ್ರ ದ್ವಿಗುಣಗೊಳ್ಳುತ್ತದೆ. ಜೊತೆಗೆ ನಿಮ್ಮ ಲಿವರ್ ಭಾಗದ ಕಾರ್ಯಚಟುವಟಿಕೆ ಅತ್ಯುತ್ತಮಗೊಳ್ಳುತ್ತದೆ ಮತ್ತು ಮೂತ್ರಪಿಂಡಗಳ ಕಾರ್ಯಕ್ಷಮತೆ ಹೆಚ್ಚುತ್ತದೆ. ಕಪಾಲಭಟಿ ವ್ಯಾಯಾಮ ನಿಮ್ಮ ದೇಹದಲ್ಲಿ ಉಷ್ಣದ ಪ್ರಭಾವವನ್ನು ಹೆಚ್ಚು ಮಾಡಿ ದೇಹದಿಂದ ವಿಷಕಾರಿ ತ್ಯಾಜ್ಯಗಳು ಹೊರ ಹೋಗುವಂತೆ ಮಾಡುತ್ತದೆ. ನಿಮ್ಮ ದೇಹದ ರೋಗ ನಿರೋಧಕ ಶಕ್ತಿ ಕೂಡ ಈ ಸಮಯದಲ್ಲಿ ಹೆಚ್ಚಾಗುತ್ತದೆ. ನಿಮ್ಮ ಮಾನಸಿಕ ಸ್ಥಿತಿ ಉತ್ತಮಗೊಳ್ಳುವುದರ ಜೊತೆಗೆ ನಿಮ್ಮ ಗಮನ ಒಂದೇ ಕಡೆ ಕೇಂದ್ರೀಕೃತವಾಗಲು ಅನುಕೂಲವಾಗುತ್ತದೆ. ಇದರ ಜೊತೆಗೆ ಕಪಾಲಭಟಿ ಪ್ರಣಯಮ ನಿಮ್ಮ ದೇಹದಲ್ಲಿ ರಕ್ತ ಸಂಚಾರವನ್ನು ಹೆಚ್ಚು ಮಾಡಿ ನಿಮ್ಮ ಜೀರ್ಣ ಪ್ರಕ್ರಿಯೆಯನ್ನು ಉತ್ತಮವಾಗಿಸಿ ನಿಮ್ಮ ಮೆಟಬಾಲಿಸಂ ಪ್ರಕ್ರಿಯೆಯನ್ನು ಉತ್ತೇಜಿತಗೊಳಿಸುತ್ತದೆ. ಇದರಿಂದ ನಿಮ್ಮ ಮಾನಸಿಕ ಆತಂಕ ದೂರವಾಗಿ ನಿಮ್ಮ ಅಸ್ತಮ ಸಮಸ್ಯೆ, ತಲೆಕೂದಲು ಉದುರುವಿಕೆ ಸಮಸ್ಯೆ ದೂರವಾಗುತ್ತದೆ.

## ಆರೋಗ್ಯ ಮಾಹಿತಿ

# ಕುಂಬಳಕಾಯಿ ರಸ ಕುಡಿಯುವುದರಿಂದಾಗುವ ಆರೋಗ್ಯ ಪ್ರಯೋಜನಗಳು



**ಕುಂಬಳಕಾಯಿಯನ್ನು** ಸೇವಿಸುವುದು ಆರೋಗ್ಯಕರ. ನಿಮಗೆ ಕುಂಬಳಕಾಯಿ ಪಲ್ಯ ತಿನ್ನಲು ಸಾಧ್ಯವಾಗದಿದ್ದರೆ, ಅದರಿಂದ ತಯಾರಿಸಿದ ರಸವನ್ನು ಕುಡಿಯಬಹುದು. ಕುಂಬಳಕಾಯಿ ರಸವು ತುಂಬಾ ಟೇಸ್ಟಿ ಮತ್ತು ಆರೋಗ್ಯಕರವಾಗಿದೆ. ನೀವೇನಾದರೂ ಕುಂಬಳಕಾಯಿ ರಸವನ್ನು ಕುಡಿಯದಿದ್ದರೆ ಕುಡಿಯಲು ಪ್ರಾರಂಭಿಸಿ. ಕುಂಬಳಕಾಯಿ ರಸವನ್ನು ಕುಡಿಯುವುದರಿಂದ ಹೃದಯವು ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತದೆ. ಜೀರ್ಣಕ್ರಿಯೆಯನ್ನು ಉತ್ತಮವಾಗಿಸುತ್ತದೆ. ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ. ಚರ್ಮವು ಆರೋಗ್ಯಕರ -ವಾಗಿರುತ್ತದೆ. ದೇಹದಲ್ಲಿ ರಕ್ತ ಪರಿಚಲನೆ ಸರಿಯಾಗಿ ಸಂಭವಿಸುತ್ತದೆ. ಕುಂಬಳಕಾಯಿ ರಸದಲ್ಲಿ ಇರುವ ಪೋಷಕಾಂಶಗಳ ಬಗ್ಗೆ ಹೇಳುವುದಾದರೆ ಇದರಲ್ಲಿ ವಿಟಮಿನ್ ಸಿ, ವಿಟಮಿನ್ ಇ, ಪೊಟ್ಯಾಸಿಯಮ್, ಬೀಟಾ ಕ್ಯಾರೋಟಿನ್, ಕ್ಯಾಲ್ಸಿಯಂ, ಮೆಗ್ನೀಸಿಯಮ್, ಕಬ್ಬಿಣ ಇತ್ಯಾದಿಗಳಿವೆ.

**ಮಲಬದ್ಧತೆ, ಮೂತ್ರದ ಸೋಂಕಿನ ಸಮಸ್ಯೆಗೆ ಪರಿಹಾರ**

ಆಗಾಗ್ಗೆ ಮಲಬದ್ಧತೆ ಸಮಸ್ಯೆಯಿಂದ ಬಳಲುತ್ತಿರುವ ಜನರು ಖಂಡಿತವಾಗಿ ಕುಂಬಳಕಾಯಿ ರಸವನ್ನು ಕುಡಿಯಬೇಕು. ಇದು ಜೀರ್ಣಾಂಗ ವ್ಯವಸ್ಥೆಯನ್ನು ಸಹ ಸುಧಾರಿಸುತ್ತದೆ. ಅತಿಸಾರದ ಸಂದರ್ಭದಲ್ಲಿ ನೀವು ಅದನ್ನು ತೆಗೆದುಕೊಳ್ಳಬಹುದು. ಇದಲ್ಲದೆ ಇದು ಹೊಟ್ಟೆಯ ಹುಣ್ಣು, ಗ್ಯಾಸ್ಟ್ರಿಕ್, ಮೂತ್ರಪಿಂಡದ ಕಾಯಿಲೆ, ಮೂತ್ರದ ಸೋಂಕನ್ನು ಸಹ ತಡೆಯುತ್ತದೆ.

**ಹೃದಯ ಸಂಬಂಧಿ ಕಾಯಿಲೆಯನ್ನು ಗುಣಪಡಿಸುತ್ತದೆ**

ಕುಂಬಳಕಾಯಿ ರಸವನ್ನು ಸೇವಿಸುವುದರಿಂದ ಹೃದಯ ಕಾಯಿಲೆಗಳನ್ನು ಗುಣಪಡಿಸಬಹುದು. ಇದು ಹೃದಯದ ಅಪಧಮನಿಗಳನ್ನು ಸ್ವಚ್ಛವಾಗಿರಿಸುತ್ತದೆ, ಇದು ಹೃದಯಾಘಾತದ ಅಪಾಯವನ್ನು ಕಡಿಮೆ ಮಾಡುತ್ತದೆ. ಕುಂಬಳಕಾಯಿ ಜ್ಯೂಸ್ ನಲ್ಲಿ ಹೆಚ್ಚಿನ ಉತ್ಕರ್ಷಣ ನಿರೋಧಕಗಳು ಇರುವುದರಿಂದ, ಅಪಧಮನಿಗಳು ಗಟ್ಟಿಯಾಗಲು ಇದು ಅನುಮತಿಸುವುದಿಲ್ಲ.

**ರಕ್ತದೊತ್ತಡ ಸಮಸ್ಯೆಯನ್ನು ನಿಯಂತ್ರಿಸುತ್ತದೆ**

ನಿಮ್ಮ ರಕ್ತದೊತ್ತಡ ಹೆಚ್ಚಾದರೆ, ನೀವು ಒಂದು ಕಪ್ ಕುಂಬಳಕಾಯಿ ರಸವನ್ನು ಕುಡಿಯುತ್ತೀರಿ. ಇದು ಹೃದಯವನ್ನು ಹಾಗು ಮನಸ್ಸನ್ನು ಶಾಂತವಾಗಿರಿಸುತ್ತದೆ. ನಿದ್ರಾಹೀನತೆಯ ಲಕ್ಷಣಗಳನ್ನು ಕಡಿಮೆ ಮಾಡಲು ಕುಂಬಳಕಾಯಿ ರಸವು ಸಹಕಾರಿಯಾಗಿದೆ. ನಿಮಗೆ ನಿದ್ರಾಹೀನತೆ ಸಮಸ್ಯೆ ಇದ್ದರೆ ಕುಂಬಳಕಾಯಿ ರಸಕ್ಕೆ ಅರ್ಧ ಟೀ ಚಮಚ ಜೇನುತುಪ್ಪವನ್ನು ಸೇರಿಸಿ ಕುಡಿಯಿರಿ. ಪೆಕ್ಟಿನ್ ಅಂಶ ಇರುವುದರಿಂದ ಇದು ಕೊಲೆಸ್ಟ್ರಾಲ್ ಮಟ್ಟವನ್ನು ಕಂಟ್ರೋಲ್ ನಲ್ಲಿಡುತ್ತದೆ.



**ರೋಗ ನಿರೋಧಕ ಶಕ್ತಿ ಹೆಚ್ಚಿಸುತ್ತದೆ**

ಕುಂಬಳಕಾಯಿ ರಸದಲ್ಲಿ ವಿಟಮಿನ್ ಸಿ ಮತ್ತು ಇತರ ಅನೇಕ ಖನಿಜಗಳು ಸಮೃದ್ಧವಾಗಿವೆ, ಇದು ರೋಗ ನಿರೋಧಕ ಶಕ್ತಿಯನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಅಂತಹ ಪರಿಸ್ಥಿತಿಯಲ್ಲಿ, ನಿಮ್ಮ ದೇಹವು ಅನೇಕ ರೋಗಗಳು, ಸೋಂಕುಗಳು, ವೈರಸ್‌ಗಳ ವಿರುದ್ಧ ಹೋರಾಡಬಹುದು. ಗರ್ಭಾವಸ್ಥೆಯಲ್ಲಿ ನೀವು ಕುಂಬಳಕಾಯಿ ರಸವನ್ನು ಸೇವಿಸಿದರೆ ವಾಂತಿ, ವಾಕರಿಕೆ ಸಮಸ್ಯೆ ಇರುವುದಿಲ್ಲ.

# ಅನಿಯಮಿತ ಮುಟ್ಟನ್ನು ಸರಿಪಡಿಸುವ ಸರಳ ಮನೆಮದ್ದುಗಳಿವು

**ಪ್ರತಿ** ಮಹಿಳೆ ವಿಭಿನ್ನ ಮುಟ್ಟಿನ ರೋಗಲಕ್ಷಣಗಳನ್ನು ಅನುಭವಿಸುತ್ತಾರೆ ಆದರೆ ಕೆಲವು ಸಾಮಾನ್ಯ ಲಕ್ಷಣಗಳೆಂದರೆ ಹೊಟ್ಟೆಯ ಸೆಳೆತ, ಕಾಲುಗಳಲ್ಲಿ ನೋವು, ಬೆನ್ನಿನ ನೋವು, ಅತಿಯಾದ ರಕ್ತಸ್ರಾವವಾಗಿದೆ. ಅಧ್ಯಯನದ ಪ್ರಕಾರ, ಮಹಿಳೆಯರು 11 ರಿಂದ 14 ವರ್ಷ ವಯಸ್ಸಿನಲ್ಲಿ ಋತುಮತಿಯಾಗುತ್ತಾರೆ. ಇದು ಸುಮಾರು 50 ವರ್ಷಗಳವರೆಗೂ ಇದ್ದು ನಂತರ ಋತುಬಂಧದ ಹಂತವನ್ನು ತಲುಪುತ್ತದೆ. ನಿಮ್ಮ ಅವಧಿ ಪ್ರತಿ ತಿಂಗಳು 4 ರಿಂದ 8 ದಿನಗಳವರೆಗೆ ಇದ್ದರೆ, ನೀವು ಸಾಮಾನ್ಯ ಮತ್ತು ಆರೋಗ್ಯಕರ ಚಕ್ರವನ್ನು ಹೊಂದಿರುವಿರಿ ಎಂಬುದರ ಸಂಕೇತವಾಗಿದೆ. ಆದರೆ ಪ್ರತಿಯೊಬ್ಬ ಮಹಿಳೆ ನಿಯಮಿತ ಅವಧಿಗಳನ್ನು ಎದುರಿಸುವುದಿಲ್ಲ ಎಂದು ನಮಗೆಲ್ಲರಿಗೂ ತಿಳಿದಿದೆ. ಇದು ಮಹಿಳೆಯರು ಎದುರಿಸುವ ಋತುಚಕ್ರದ ಸಾಮಾನ್ಯ ಸಮಸ್ಯೆಯಾಗಿದೆ. ಒತ್ತಡ, ಹಾರ್ಮೋನುಗಳ ಸಮಸ್ಯೆಗಳನ್ನು ಒಳಗೊಂಡಂತೆ ಹಲವಾರು ಅಂಶಗಳು ಇದಕ್ಕೆ ಕಾರಣಗಳಾಗಿವೆ. ಸರಿಯಾದ ಸಮಯಕ್ಕೆ ಮುಟ್ಟಾಗದಿರುವುದು ವಿವಿಧ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು. ಹೀಗಾಗಿ, ಮಹಿಳೆಯರು ತಮ್ಮ ಮುಟ್ಟಿನ ಕೊನೆಯ ದಿನಾಂಕದ ಬಗ್ಗೆ ನಿಗಾ ಇಡುವುದು ತುಂಬಾ ಮುಖ್ಯ ಹಾಗೂ ಮುಂದಿನ ತಿಂಗಳು ಸಮಯಕ್ಕೆ ಸರಿಯಾಗಿ ತಮ್ಮ ಅವಧಿಯನ್ನು ಪಡೆಯುತ್ತಾರೆಯೇ ಎಂದು ಪರಿಶೀಲಿಸಬೇಕು. ಇನ್ನೂ ಅನಿಯಮಿತ ಅವಧಿಗಳನ್ನು ಸರಿಪಡಿಸಲು ಐದು ಸರಳ ಮನೆಮದ್ದುಗಳು ಇಲ್ಲಿವೆ:



■ **ದಾಲ್ಚಿನ್ನಿ:** ದಾಲ್ಚಿನ್ನಿ ಮುಟ್ಟಿನ ಸಮಸ್ಯೆಗಳಿಗೆ ಬಂದಾಗ ಅದ್ಭುತಗಳನ್ನು ಮಾಡುತ್ತದೆ. ಪಿಸಿಓಎಸ್ ಚಿಕಿತ್ಸೆಯಲ್ಲಿ ದಾಲ್ಚಿನ್ನಿ ಸಹ ಸಹಾಯ ಮಾಡುತ್ತದೆ. ಇದು ನಿಮ್ಮ ಅವಧಿಗಳನ್ನು ಕ್ರಮಬದ್ಧಗೊಳಿಸಲು ಸಹಾಯ ಮಾಡುತ್ತದೆ ಮತ್ತು ಅವಧಿಗಳಲ್ಲಿ ಉಂಟಾಗುವ ನೋವನ್ನು ಕಡಿಮೆ ಮಾಡುತ್ತದೆ.



■ **ಆಪಲ್ ಸೈರ್ಡ ವಿನೆರ್ಗ:** ಸೇಬುಹಣ್ಣಿನ ಜ್ಯೂಸ್ ಕುಡಿಯುವುದು ಋತುಚಕ್ರವನ್ನು ನಿಯಂತ್ರಿಸಲು ಮತ್ತು ಪಿಸಿಓಎಸ್ ಚಿಕಿತ್ಸೆಯಲ್ಲಿ ಸಹಾಯ ಮಾಡುತ್ತದೆ. ಆಪಲ್ ಸೈರ್ಡ ವಿನೆರ್ಗ ಅನ್ನು ದುರ್ಬಲಗೊಳಿಸಿದ ನಂತರ ಮಾತ್ರ ಸೇವಿಸಿ.



■ **ಶುಂಠಿ:** ಪಿಎಂಎಸ್ ರೋಗಲಕ್ಷಣಗಳನ್ನು ನಿವಾರಿಸಲು ಮತ್ತು ಅವಧಿಗಳನ್ನು ಕ್ರಮಬದ್ಧಗೊಳಿಸಲು ಶುಂಠಿ ಸಹಾಯ ಮಾಡುತ್ತದೆ. ಉತ್ತಮ ಫಲಿತಾಂಶಗಳನ್ನು ಪಡೆಯಲು ನಿಮ್ಮ ನಿಗದಿತ ದಿನಾಂಕಕ್ಕಿಂತ ಏಳು ದಿನಗಳ ಮೊದಲು ಶುಂಠಿಯನ್ನು ಸೇವಿಸುವುದನ್ನು ಪ್ರಾರಂಭಿಸಿ. ಮುಟ್ಟಿನ ಸಮಯದಲ್ಲಿ ಆಗುವ ರಕ್ತಸ್ರಾವದ ಪ್ರಮಾಣವನ್ನು ಕಡಿಮೆ ಮಾಡಲು ಸಹ ಇದು ಸಹಾಯ ಮಾಡುತ್ತದೆ.

■ **ಅನಾನಸ್:** ಅನಿಯಮಿತ ಅವಧಿಗಳಿಗೆ ಅನಾನಸ್ ಉತ್ತಮ ಮನೆಮದ್ದು. ಅನಾನಸ್ ಬ್ರೊಮೆಲೈನ್ ಎಂಬ ಕಿಣ್ವವನ್ನು ಹೊಂದಿರುತ್ತದೆ, ಇದು ಗರ್ಭಾಶಯದ ಒಳಪದರವನ್ನು ಮೃದುಗೊಳಿಸುತ್ತದೆ ಮತ್ತು ಅವಧಿಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಪ್ರಕೃತಿಯಲ್ಲಿ ಉರಿಯೂತದ ಮತ್ತು ಅವಧಿಯ ನೋವನ್ನು ನಿವಾರಿಸಲು ಸಹಾಯ ಮಾಡುತ್ತದೆ.



■ **ಜೀರಿಗೆ:** ಜೀರಿಗೆ ಗರ್ಭಾಶಯದ ಸ್ನಾಯುಗಳನ್ನು ಸಂಕುಚಿತಗೊಳಿಸುವ ಮೂಲಕ ಮತ್ತು ಅನಿಯಮಿತ ಅವಧಿಗಳನ್ನು ಸರಿಪಡಿಸುವ ಮೂಲಕ ಸಹಾಯ ಮಾಡುತ್ತದೆ. ಉತ್ತಮ ಫಲಿತಾಂಶಗಳನ್ನು ಪಡೆಯಲು ಪ್ರತಿದಿನ ಬೆಳಿಗ್ಗೆ ನೆನೆಸಿದ ಜೀರಿಗೆಯನ್ನು ಬೆಚ್ಚಗಿನ ನೀರಿನ ಜೊತೆ ಸೇವಿಸಿ.

# ಆಡಿನ ಹಾಲು:ತಾಯಿಯ ಎದೆ ಹಾಲಿನಷ್ಟೇ ಆರೋಗ್ಯಕಾರಿ

**ಹಾಲು ಅಂದರೆ ನಮಗೆ ಮೊದಲು ನಾವು ಪರಿಗಣಿಸುವುದು ದನದ ಹಾಲನ್ನು, ಇದರ ಬಳಿಕ ಎಮ್ಮೆ ಹಾಲು, ಆಡಿನ ಹಾಲು ಇತ್ಯಾದಿಗಳು ಕೂಡ ಸೇವನೆ ಮಾಡಬಹುದು. ಹಾಲು ಹಲವಾರು ರೀತಿಯ ಪೋಷಕಾಂಶಗಳನ್ನು ಹೊಂದಿದ್ದು, ಇದು ಆರೋಗ್ಯಕ್ಕೆ ತುಂಬಾ ಒಳ್ಳೆಯದು ಎಂದು ಪರಿಗಣಿಸಲಾಗಿದೆ. ಆದರೆ ಹೆಚ್ಚಾಗಿ ಬಳಕೆಯಲ್ಲಿರುವುದು ದನದ ಹಾಲು. ಈ ಲೇಖನದಲ್ಲಿ ನಾವು ನಿಮಗೆ ಆಡಿನ ಹಾಲಿನ ಬಗ್ಗೆ ತಿಳಿಸಿಕೊಡಲಿದ್ದೇವೆ. ಇದನ್ನು ಸೇವಿಸಿದರೆ ಆಗ ಅದು ಆರೋಗ್ಯಕ್ಕೆ ಯಾವ ರೀತಿಯಿಂದ ಪರಿಣಾಮ ಬೀರುವುದು ಎಂದು ಹೇಳುತ್ತೇವೆ.**



### ದನದ ಹಾಲು V/S ಆಡಿನ ಹಾಲು

ದನದ ಹಾಲು ತುಂಬಾ ಒಳ್ಳೆಯದು ಎಂದು ಪರಿಗಣಿಸಲಾಗಿದೆ. ಇದರ ಬಗ್ಗೆ ಸಂಶಯವೇ ಇಲ್ಲ. ಆದರೆ ಇದು ಕಬ್ಬಿಣಾಂಶ ಮತ್ತು ತಾಮ್ರವನ್ನು ಹೀರಿಕೊಳ್ಳಲು ತಡೆ ಉಂಟು ಮಾಡುವುದು ಎಂದು ತಜ್ಞರು ಹೇಳುವರು. ಲ್ಯಾಕ್ಟೋಸ್ ಅಸಹಿಷ್ಣುತೆ ಇರುವವರು ದನದ ಹಾಲಿನ ಸೇವನೆ ಮಾಡಬಾರದು. ಲ್ಯಾಕ್ಟೋಸ್ ಅಸಹಿಷ್ಣುತೆ ಹೊಂದಿರುವವರು ಯಾವಾಗಲೂ ಆಡಿನ ಹಾಲಿನ ಬಳಕೆ ಮಾಡಿದರೆ ಒಳ್ಳೆಯದು ಎಂದು ಹೇಳಲಾಗುತ್ತದೆ. ಇದು ಯಾವುದೇ ರೀತಿಯ ಅಸಿಡಿಟಿ ಉಂಟು ಮಾಡುವುದು ಮತ್ತು ಸುಲಭವಾಗಿ ಜೀರ್ಣವಾಗುವುದು. ದನದ ಹಾಲಿನ ಸೇವನೆಯಿಂದ ಜೀರ್ಣಕ್ರಿಯೆ ಸಮಸ್ಯೆಯಾಗುತ್ತಲಿದ್ದರೆ ಆಗ ಅವರು ಆಡಿನ ಹಾಲು ಬಳಸಬಹುದು.

### ಕಾಯಿಲೆಗೆ ಆಡಿನ ಹಸಿ ಹಾಲು

ಆಡಿನ ಹಸಿ ಹಾಲು ಹಲವಾರು ರೀತಿಯ ಸಮಸ್ಯೆಗಳನ್ನು ನಿವಾರಣೆ ಮಾಡಲು ತುಂಬಾ ಪರಿಣಾಮಕಾರಿ. ಡೆಂಗ್ಯೂ ಮತ್ತು ಇತರ ಕೆಲವು ವೈರಲ್ ಕಾಯಿಲೆ ಸಂದರ್ಭದಲ್ಲಿ ಇದು ಪ್ಲೇಟ್ಲೆಟ್ ಗಣತಿಯನ್ನು ಸುಧಾರಣೆ ಮಾಡುವುದು. ಇದರಲ್ಲಿ ಇರುವ ಪ್ರತಿಕಾಯಗಳು(ಆಂಟಿಬಾಡಿ) ಕಾಮಾಲೆಯನ್ನು ನೈಸರ್ಗಿಕವಾಗಿ ನಿವಾರಣೆ ಮಾಡುವುದು ಎಂದು ಪರಿಗಣಿಸಲಾಗಿದೆ.

### ದನದ ಹಾಲಿಗೆ ಪರ್ಯಾಯ

ದನದ ಹಾಲಿಗೆ ಇದು ಒಳ್ಳೆಯ ಪರ್ಯಾಯವಾಗಿದೆ ಮತ್ತು ಇದು ಸಂಪೂರ್ಣ ದೇಹದ ಬೆಳವಣಿಗೆಗೆ ಬೇಕಾಗುವ ಎಲ್ಲಾ ರೀತಿಯ ಪೋಷಕಾಂಶಗಳನ್ನು ಒದಗಿಸುವುದು. ಆಡಿನ ಹಾಲು ಬೇರೆ ಆಹಾರದಲ್ಲಿ ಇರುವಂತಹ ಪೋಷಕಾಂಶಗಳನ್ನು ಹೀರಿಕೊಳ್ಳಲು ಸಹಕಾರಿ.

### ಗ್ಯಾಸ್ಟ್ರಿಕ್, ಅಸಿಡಿಟಿ ಸಮಸ್ಯೆಗೆ ಒಳ್ಳೆಯದು

ಆಡಿನ ಹಾಲಿನಲ್ಲಿ ಇರುವಂತಹ ಉರಿಯೂತ ಶಮನಕಾರಿ ಗುಣವು ಹೊಟ್ಟೆಯ ಉರಿಯೂತವನ್ನು ಪರಿಣಾಮಕಾರಿ ಆಗಿ ನಿಯಂತ್ರಿಸಲು ಸಹಕಾರಿ. ಜೀರ್ಣಕ್ರಿಯೆ ಸಮಸ್ಯೆ ಇರುವವರಿಗೆ ಇದು ತುಂಬಾ ಸಹಕಾರಿ. ಯಾಕೆಂದರೆ ಇದರಿಮದ ಯಾವುದೇ ಗ್ಯಾಸ್ಟ್ರಿಕ್, ಅಸಿಡಿಟಿ ಮತ್ತು ಮಲಬದ್ಧತೆಯು ಉಂಟಾಗದು.

### ಹೃದಯದ ರಕ್ಷಣೆ

ದನದ ಹಾಲಿಗಿಂತಲೂ ಎರಡು ಪಟ್ಟು ಹೆಚ್ಚು ಲಾಭಕಾರಿ ಕೊಬ್ಬಿನಾಮ್ಲವು ಆಡಿನ ಹಾಲಿನಲ್ಲಿದೆ. ಇದರಿಂದಾಗಿ ಕೊಲೆಸ್ಟ್ರಾಲ್‌ನ್ನು ನಿಯಂತ್ರಣದಲ್ಲಿ ಇಡುವುದು ಮತ್ತು ದೇಹದಲ್ಲಿನ ಕೊಬ್ಬಿನಾಮ್ಲವನ್ನು ಸಮತೋಲನದಲ್ಲಿ ಇಡುವುದು. ಹೃದಯಾಘಾತ, ಪಾರ್ಶ್ವವಾಯು ಮತ್ತು ಇತರ ರಕ್ತನಾಳ ಸಂಬಂಧಿ ಕಾಯಿಲೆಗಳನ್ನು ಇದು ದೂರ ಮಾಡಬಹುದು. ಆಡಿನ ಹಾಲಿನಲ್ಲಿ ಇರುವ ಪೊಟಾಶಿಯಂ ಅಂಶವು ರಕ್ತದೊತ್ತಡ ನಿವಾರಣೆ ಮಾಡುವುದು. ಇದು ರಕ್ತನಾಳಗಳಿಗೆ ಆರಾಮ ಮಾಡುವುದು ಮತ್ತು ಅಪಧಮನಿ ವ್ಯವಸ್ಥೆಯಲ್ಲಿನ ಒತ್ತಡ ನಿವಾರಿಸುವುದು.



### ಬೆಳೆಯುವ ಮಕ್ಕಳಿಗೆ ಒಳ್ಳೆಯದು

ಆಡಿನ ಹಾಲಿನಲ್ಲಿ ಪ್ರೋಟೀನ್ ಸಮೃದ್ಧವಾಗಿದ್ದು, ಆರೋಗ್ಯಕಾರಿ ಕೊಬ್ಬು, ವಿಟಮಿನ್‌ಗಳು, ಕಬ್ಬಿಣಾಂಶ ಮತ್ತು ಇತರ ಕೆಲವೊಂದು ಪೋಷಕಾಂಶಗಳು ಇವೆ. ಇದು ಮೂಳೆ ಹಾಗೂ ಹಲ್ಲುಗಳನ್ನು ಬಲಿಷ್ಠವಾಗಿ ಇಡುತ್ತದೆ. ಇದರಲ್ಲಿ ಇರುವ ಉನ್ನತ ಮಟ್ಟದ ಕ್ಯಾಲ್ಸಿಯಂ ಮಗುವಿನ ಬೆಳವಣಿಗೆಗೆ ಸಹಕಾರಿ.

### ಪ್ರೋಟೀನ್ ಅಂಶ

ಆಡಿನ ಹಾಲಿನಲ್ಲಿ ಇರುವಂತಹ ಪ್ರೋಟೀನ್ ಅಂಶವು ಬೆಳವಣಿಗೆಗೆ ಸಹಕಾರಿ. ಪ್ರೋಟೀನ್ ಅಂಗಾಂಶ, ಕೋಶಗಳು, ಸ್ನಾಯುಗಳು ಮತ್ತು ಮೂಳೆಗಳನ್ನು ಬೆಳೆಸುವುದು. ಪ್ರೋಟೀನ್ ಸೇವನೆಯಿಂದಾಗಿ ಚಯಾಪಚಯ ಕ್ರಿಯೆ ರಕ್ಷಣೆ ಆಗುವುದು ಮತ್ತು ಸಂಪೂರ್ಣ ಬೆಳವಣಿಗೆ ಉತ್ತಮವಾಗುವುದು.



### ಮೂಳೆಗಳನ್ನು ಬಲಿಷ್ಠಗೊಳಿಸುವುದು

ಆಡಿನ ಹಾಲಿನಲ್ಲಿ ಉನ್ನತ ಮಟ್ಟದ ಕ್ಯಾಲ್ಸಿಯಂ ಇದೆ ಮತ್ತು ಯಾವುದೇ ರೀತಿಯ ಅಡ್ಡಪರಿಣಾಮಗಳು ಇಲ್ಲದೆ ಇದು ತುಂಬಾ ಪರಿಣಾಮಕಾರಿ ಆಗಿ ಕ್ಯಾಲ್ಸಿಯಂ ದೇಹಕ್ಕೆ ಒದಗಿಸುವುದು. ಇದರಿಂದ ಅಸ್ಥಿರಂಧ್ರತೆ ಸಮಸ್ಯೆಯು ದೂರವಾಗುವುದು.

### ಉರಿಯೂತ ಶಮನಕಾರಿ ಗುಣ

ದನದ ಹಾಲು ಹೆಚ್ಚಾಗಿ ಹೊಟ್ಟೆಯಲ್ಲಿ ಉರಿಯೂತ ಉಂಟು ಮಾಡುವುದು. ಹೀಗಾಗಿ ಆಡಿನ ಹಾಲು ತುಂಬಾ ಲಾಭಕಾರಿ. ಆಡಿನ ಹಾಲು ಸೇವನೆ ಮಾಡಿದರೆ ಇದು ಹೊಟ್ಟೆಯಲ್ಲಿ ಉರಿಯೂತ ಕಡಿಮೆ ಮಾಡುವುದು. ದೇಹದ ಇತರ ಭಾಗಗಳಿಗೂ ಇದರ ಉರಿಯೂತದ ಅಂಶವು ಕೆಲಸ ಮಾಡುವುದೇ ಎಂದು ತಿಳಿಯಲು ಅಧ್ಯಯನಗಳು ನಡೆಯುತ್ತಲಿದೆ. ಆದರೆ ಹೊಟ್ಟೆಗೆ ಇದು ತುಂಬಾ ಒಳ್ಳೆಯದು.

# ಬಂಟರ ಸಂಘ ಮುಂಬಯಿ ಮಹಿಳಾ ವಿಭಾಗದ ಆಶ್ರಯದಲ್ಲಿ ಮಹಿಳಾ ದಿನಾಚರಣೆ-2026ರ ಸಂಭ್ರಮ

# ಬಂಟರ ಸಂಘದಲ್ಲಿ ಬಂಟ ಮಹಿಳೆಯರಿಗೆ ವಿಶೇಷ ಗೌರವ ಪ್ರಾಧಾನ್ಯತೆ ನೀಡಲಾಗುತ್ತದೆ - ಪ್ರವೀಣ್ ಭೋಜ ಶೆಟ್ಟಿ


ಡಾ. ಪೂರ್ಣಿಮಾ ಸುಧಾಕರ ಶೆಟ್ಟಿಯವರಿಗೆ ಪ್ರಶಸ್ತಿಯನ್ನು ಪ್ರದಾನಿಸಿದಾಗ.


ಆಶಾ ವಿಠ್ಠಲ ರೈ ದಂಪತಿಯನ್ನು ಸನ್ಮಾನಿಸಿದಾಗ.


ಡಾ. ರಶ್ಮಾ ಮೋಹಿತೆ ಶೆಟ್ಟಿ ದಂಪತಿಯನ್ನು ಸನ್ಮಾನಿಸಿದಾಗ.


ಬಂಟರ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿಯವರನ್ನು ಗೌರವಿಸಿದಾಗ.


ಪ್ರೊ. ಶುಭಲಕ್ಷ್ಮೀ ಸುದರ್ಶನ ಹೆಗ್ಡೆಯವರನ್ನು ಗೌರವಿಸಿದಾಗ.


ಮೋಹಿನಿ ಪಿ. ಶೆಟ್ಟಿಯವರನ್ನು ಗೌರವಿಸಿದಾಗ.

ವರದಿ - ಪ್ರೇಮನಾಥ ಶೆಟ್ಟಿ ಮುಂಡ್ಕೂರು, ಚಿತ್ರ - ಗುರುದತ್ತ ಪೂಂಜ ಮುಂಡ್ಕೂರು

ಮುಂಬಯಿ, ಮಾ. 8- ವಿಶ್ವದಾದ್ಯಂತ ಇರುವ ಮಹಿಳೆಯರ ಸಾಧನೆಯನ್ನು ಗುರುತಿಸಿ ಗೌರವಿಸುವ ದಿನವೇ ವಿಶ್ವ ಮಹಿಳಾ ದಿನಾಚರಣೆಯಾಗಿದೆ. ನಮ್ಮಲ್ಲಿ ಮಹಿಳೆಯರು ಪುರುಷರು ಎಂಬ ಭೇದ ಸಲ್ಲದು. ಎಲ್ಲಿ ಮಹಿಳೆಯರಿಗೆ ಗೌರವ ಸಿಗುತ್ತದೋ ಅಲ್ಲಿ ದೇವರೂ ಸಂತೃಪ್ತಿ ಹೊಂದುತ್ತಾರೆಂದು ಬಂಟರ ಸಂಘ ಮುಂಬಯಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ಅವರು ನುಡಿದರು.

ಮಾರ್ಚ್ 7ರಂದು ಶನಿವಾರ ಕುರ್ಲಾ ಪೂರ್ವ ಬಂಟರ ಭವನದ ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಗೃಹದಲ್ಲಿ ಸಂಘದ ಮಹಿಳಾ ವಿಭಾಗದವರು ಆಯೋಜಿಸಿದ ಮಹಿಳಾ ದಿನಾಚರಣೆ-2026 ಸಮಾರಂಭವನ್ನು ಉದ್ಘಾಟಿಸಿ, ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಬಂಟ ಸಮಾಜದ 'ಭೀಷ್ಮ' ಎಂಬ ಖ್ಯಾತಿ ಹೊಂದಿರುವ ಬಂಟರ ಸಂಘದ ಮಾಜಿ ಅಧ್ಯಕ್ಷ, ತುಳು ಕನ್ನಡಿಗರ ಕಣ್ಮಣಿ ಎಂ.ಡಿ. ಶೆಟ್ಟಿಯವರು 1977ರಲ್ಲಿ ಸ್ಥಾಪಿಸಿದ ಬಂಟರ ಸಂಘದ ಮಹಿಳಾ ವಿಭಾಗವು ಇಂದು ಅತಿ ಪ್ರತಿಷ್ಠೆಯ ಸಂಸ್ಥೆಯಾಗಿ ಎತ್ತರಕ್ಕೆ ಬೆಳೆದಿದ್ದರೆ ಅದಕ್ಕೆ ಈವರೆಗೆ ಮಹಿಳಾ ಕಾರ್ಯಾಧ್ಯಕ್ಷರುಗಳಾಗಿ ಸೇವೆ ಸಲ್ಲಿಸಿರುವ 12 ಮಂದಿ ಮಹಿಳೆಯರೇ ಸಾಕ್ಷಿಯಾಗಿದ್ದಾರೆ. ಆರಂಭದ ಕಾರ್ಯಾಧ್ಯಕ್ಷೆಯಾಗಿದ್ದ ಶಾರದಾ ಶೆಟ್ಟಿ (ರೈ)ಯವರಿಂದ ಹಿಡಿದು ಈಗ ಕಾರ್ಯಾಧ್ಯಕ್ಷೆಯಾಗಿ ಸೇವೆ ಸಲ್ಲಿಸುತ್ತಿರುವ ಚಿತ್ರಾ ಆರ್. ಶೆಟ್ಟಿಯವರೆಗಿನ ಕಾರ್ಯಾಧ್ಯಕ್ಷರು, ಪದಾಧಿಕಾರಿಗಳನ್ನು ನಾವೆಂದೂ ಮರೆಯುವಂತಿಲ್ಲ. ಅವರೆಲ್ಲರ ಪರಿಶ್ರಮವಿಂದು ಸಾರ್ಥಕವಾಗಿದೆ. ಮುಂದಿನವರೆಗೂ ಇವರಿಂದ ಸ್ಫೂರ್ತಿ, ಪ್ರೇರಣೆ ಒದಗಲೆಂದು ಹಾರೈಸಿದರು.

ಹೆಣ್ಣು ಪ್ರಕೃತಿ, ಕನಸು ವಾಸ್ತವವಾಗಿದ್ದಾಳೆ. ಸ್ತ್ರೀ ಸಮೃದ್ಧಿಯ ಸಂಕೇತವಾಗಿದ್ದಾಳೆ ಎಂದು ನುಡಿದ ಅವರು ಬಂಟ ಸಮಾಜವು ಅದರಲ್ಲೂ ಬಂಟರ ಸಂಘವು ನಮ್ಮ ಬಂಟ ಮಹಿಳೆಯರಿಗೆ ವಿಶೇಷ ಗೌರವ, ಪ್ರಾಮುಖ್ಯತೆ ನೀಡುತ್ತಾ ಬಂದಿದೆ. ಅದನ್ನು ಮುಂದೆಯೂ ಉಳಿಸಿಕೊಂಡು ಬರುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ಅವರು ತಿಳಿಸಿದರು. ಮಹಿಳಾ ವಿಭಾಗವು ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಇಬ್ಬರು ಶಿಕ್ಷಣ ತಜ್ಞರನ್ನು ಅತಿಥಿಗಳನ್ನಾಗಿ ಆಮಂತ್ರಿಸಿರುವ ಜೊತೆಗೆ ಪ್ರತಿಷ್ಠಿತ ರಾಧಾಬಾಯಿ ಟಿ. ಭಂಡಾರಿ ಪ್ರಶಸ್ತಿಯನ್ನು ಕೂಡಾ ಶಿಕ್ಷಣ ಸೇವೆಗೈಯುವವರಿಗೆ ನೀಡಿರುವುದು ಇದೊಂದು ಅರ್ಥಪೂರ್ಣ ಸಮಾರಂಭವೆಂದು ಅವರು ಬಣ್ಣಿಸಿದರು.

**ಡಾ. ಪೂರ್ಣಿಮಾ ಸುಧಾಕರ ಶೆಟ್ಟಿಯವರಿಗೆ**
**ಪ್ರತಿಷ್ಠಿತ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಪ್ರಶಸ್ತಿ**

ಬಂಟರ ಸಂಘ ಮುಂಬಯಿ ಇದರ ಮಹಿಳಾ ವಿಭಾಗವು ದಿವಂಗತ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಕುಟುಂಬದ ಲತಾ ಪಿ. ಭಂಡಾರಿ, ದೀಪಾ ಭಂಡಾರಿ ಪ್ರಾಯೋಜಕತ್ವದಲ್ಲಿ ಪ್ರತಿವರ್ಷ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುವ ಮಹಿಳಾ ಸಾಧಕಿಯರಿಗೆ ನೀಡುತ್ತಾ ಬರುತ್ತಿರುವ ಪ್ರತಿಷ್ಠಿತ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಪ್ರಶಸ್ತಿಯನ್ನು ಈ ಬಾರಿ ಶಿಕ್ಷಣ ಕ್ಷೇತ್ರದ ವಿಶಿಷ್ಟ ಸಾಧಕಿ, ಮುಂಬಯಿಯ ಖ್ಯಾತ ನಿರೂಪಕಿ, ಸಾಹಿತಿ, ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ಇವರಿಗೆ ಗಣ್ಯರ ಸಮ್ಮುಖದಲ್ಲಿ ಪ್ರದಾನಿಸಲಾಯಿತು. ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ ದಂಪತಿ ಶಾಲು ಹೊದಿಸಿ, ಸ್ಮರಣಿಕೆ, ಪ್ರಶಸ್ತಿ ಪತ್ರ, ನೆನಪಿನ ಕಾಣಿಕೆ ನೀಡಿ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ, ಅತಿಥಿ ಗಣ್ಯರು, ಮಹಿಳಾ ವಿಭಾಗದ ಪದಾಧಿಕಾರಿಗಳು ಸನ್ಮಾನಿಸಿ ಅಭಿನಂದಿಸಿದರು. ಮಹಿಳಾ ವಿಭಾಗದ ಕೋಶಾಧಿಕಾರಿ ಸುಚಿತಾ ಕೆ. ಶೆಟ್ಟಿ, ಪ್ರಶಸ್ತಿ ಪುರಸ್ಕೃತರ ಪರಿಚಯ, ಪ್ರಶಸ್ತಿ ಪತ್ರ ವಾಚಿಸಿದರು.

**ಈ ಪ್ರಶಸ್ತಿಯಿಂದ ನನ್ನ ಜವಾಬ್ದಾರಿಯನ್ನು**
**ಮತ್ತಷ್ಟು ಹೆಚ್ಚಿಸಿದ್ದೀರಿ - ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ**

ಡಾ. ಪೂರ್ಣಿಮಾ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಬಂಟರ ಸಂಘ ಮಹಿಳಾ ವಿಭಾಗದ ಮಹಿಳಾ ದಿನಾಚರಣೆಯ ವೇದಿಕೆಯಲ್ಲಿ ನಿರೂಪಕಿಯಾಗಿ ಎಷ್ಟೋ ಬಾರಿ ಈ ಪ್ರಶಸ್ತಿಯ ಬಗ್ಗೆ ಮಾತನಾಡಿದ್ದೆ. ನನ್ನ ನಿಜವಾದ ಈ ಜಾಗದಲ್ಲಿ ನನ್ನನ್ನೇ ಈ ಪ್ರಶಸ್ತಿ ಅರಸಿಕೊಂಡು ಬಂದಿರುವುದನ್ನು ಕಂಡು ಅಚ್ಚರಿಗೊಂಡಿದ್ದೇನೆ. ಇದೊಂದು ಯೋಗ ಭಾಗ್ಯವೆಂದು ನಂಬಿ ಪ್ರೀತಿಯಿಂದ, ಭಕ್ತಿ ಗೌರವದಿಂದ ಸ್ವೀಕರಿಸಿದ್ದೇನೆ. ಈ ಪ್ರಶಸ್ತಿಗೆ ನಾನು ಯೋಗ್ಯತೆ ಅರ್ಹತೆ ಇದ್ದವಳೆಂದು ಗುರುತಿಸಿದ ಸಂಘದ ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ, ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಮತ್ತು ಪದಾಧಿಕಾರಿಗಳಿಗೆ ಮನತುಂಬಿ ವಂದಿಸುತ್ತೇನೆ, ಕೃತಜ್ಞತೆ ಸಲ್ಲಿಸುತ್ತೇನೆಂದು ಅವರು ನುಡಿದರು.

ಹೆಣ್ಣು ಮಗುವಿಗೆ ವಿದ್ಯೆ ಕಲಿಸಬೇಕೆಂಬ ಅಪಾರ ಆಸೆ ನನ್ನ ಕುಟುಂಬದವರಿಗೆ ಇತ್ತು. ನಾನು ಬೆಳೆದಂತೆ ನನ್ನ ಸ್ವಂತ ಪರಿಶ್ರಮದಿಂದ ಅವರೆಲ್ಲರ ಆಸೆಯನ್ನು ಈಡೇರಿಸಿದೆ. ಕಲ್ಲು ಮುಳ್ಳಿನ ದಾರಿಯನ್ನು ಸವೆಸಿ ಯಶಸ್ವಿಯಾದೆ. ನನ್ನ ಕನಸಿಗೆ ಒಂದಷ್ಟು ಬಣ್ಣ ತುಂಬಿದವರು ನನ್ನ ಪತಿದೇವರು ಮತ್ತು ಪುತ್ರಿ. ಮತ್ತು ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಮತ್ತು ನನ್ನ ಸಹೋದ್ಯೋಗಿಗಳು, ಜೊತೆಗೆ ತಮ್ಮೆಲ್ಲರ ಪ್ರೋತ್ಸಾಹ, ಪ್ರೀತಿ ವಿಶ್ವಾಸದ ಹಾರೈಕೆ ಎಂದು ಅವರು ನುಡಿದು, ಬಂಟರ ಸಂಘದ ಮಹಿಳಾ ವಿಭಾಗಕ್ಕೆ ಆರಂಭದಲ್ಲಿ ಪರಿಚಯಿಸಿದ ಪ್ರಶಾಂತಿ ಡಿ. ಶೆಟ್ಟಿ ಬಳಿಕ ಲತಾ ಜಯರಾಮ ಶೆಟ್ಟಿ, ರಂಜನಿ ಸುಧಾಕರ ಹೆಗ್ಡೆ, ಉಮಾ ಕೃಷ್ಣ ಶೆಟ್ಟಿ, ಚಿತ್ರಾ ಆರ್. ಶೆಟ್ಟಿಯವರ ಪ್ರೋತ್ಸಾಹಕ್ಕೆ ಕೃತಜ್ಞತೆ ಸಲ್ಲಿಸಿದರು. ನಿನಗೆ ದೊರೆತ ಪ್ರಶಸ್ತಿ ಮನೆಗೆ ಸಂದಷ್ಟು ಸಂತಸವಾಗಿದೆ ಎಂದು ರಂಜನಿ ಸುಧಾಕರ ಹೆಗ್ಡೆ ನುಡಿಯನ್ನು ಸಂತಸದಿಂದ ಪುನರುಚ್ಚರಿಸಿದರು. ನನ್ನ ಜವಾಬ್ದಾರಿಯನ್ನು ಈ ಪ್ರಶಸ್ತಿಯಿಂದ ಹೆಚ್ಚಿಸಿದ್ದೀರಿ ಅದಕ್ಕಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆಂದು ನುಡಿದರು.


ಬಂಟರ ಸಂಘದ ಮಹಿಳಾ ವಿಭಾಗದ ಮಾಜಿ ಮಹಿಳಾ ಅಧ್ಯಕ್ಷೆಯರನ್ನು ಗೌರವಿಸಿದಾಗ.

## ಮಹಿಳೆಯರೆಲ್ಲರೂ ನಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳೋಣ - ಚಿತ್ರಾ ಆರ್. ಶೆಟ್ಟಿ



ಬಂಟರ ಸಂಘದ ಮಹಿಳಾ ವಿಭಾಗವು ಈ ಬಾರಿಯ ಮಹಿಳಾ ದಿನಾಚರಣೆಯನ್ನು ಅನಿವಾರ್ಯ ಕಾರಣದಿಂದ ಒಂದು ದಿನದ ಮೊದಲು ಅಂದರೆ ಮಾರ್ಚ್ 7ರಂದು ಆಚರಿಸುತ್ತಿದೆ. ಮಹಿಳಾ ದಿನಾಚರಣೆಯನ್ನು ಆಚರಿಸುವ ಉದ್ದೇಶ ಮಹಿಳೆಯರನ್ನು ಗೌರವಿಸಬೇಕು, ಸಮಾನತೆಯನ್ನು ನೀಡಬೇಕು ಎಂಬುದಾಗಿದೆ ಎಂದು ಬಂಟರ ಸಂಘದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ ನುಡಿದರು. ಆದರೆ ಇಂದು ಬಂಟ ಮಹಿಳೆಯರಿಗೆ ಮರ್ಯಾದೆ ಗೌರವ ಸಿಗುತ್ತದೆಯೇ ಎಂಬುದೊಂದು ಬಹುದೊಡ್ಡ ಪ್ರಶ್ನೆಯಾಗಿದೆ. ಇತ್ತೀಚೆಗೆ ಬಂಟ ಮಹಿಳೆಯೊಬ್ಬರನ್ನು ಟಾರ್ಗೆಟ್ ಮಾಡಿ ವೈರಲ್ ಮಾಡಿರುವುದು ಸಮಸ್ತ ಬಂಟ ಮಹಿಳೆಯರಿಗೆ ಇದರಿಂದ ಬಹಳಷ್ಟು ಬೇಸರವನ್ನುಂಟುಮಾಡಿದೆ. ಅವಮಾನವಾಗಿದೆ. ವೈರಲ್ ಮಾಡಿದವರ ಬಗ್ಗೆ ಬಂಟ ಸಮಾಜವು ಕಠಿಣ ಕ್ರಮ ಕೈಗೊಳ್ಳಬೇಕು ಎಂದರು. ವೈಯಕ್ತಿಕ ಹಕ್ಕನ್ನು ಯಾರೂ ಕಸಿದುಕೊಳ್ಳುವಂತಿಲ್ಲ. ಮಹಿಳೆ ಯಾರೇ ಆಗಲಿ ಅವರು ನಮ್ಮ ತಾಯಿಗೆ ಸಮಾನ, ಅಕ್ಕ ತಂಗಿಯರಿಗೆ ಸಮಾನ ಎಂಬುದನ್ನು ವೈರಲ್ ಮಾಡಿದವರು ಮರೆತಂತಿದೆ. ಇನ್ನು ಮುಂದೆ ಹಾಗಾಗದಂತೆ ಜಾಗ್ರತೆವಹಿಸಬೇಕು ಎಂದರು.

ಮಹಿಳೆಯಾದವರು ತಮ್ಮ ಅಸ್ತಿತ್ವವನ್ನು ಕಾಪಾಡಿಕೊಳ್ಳುವುದು ಅತಿ ಅಗತ್ಯವಾಗಿದೆ. ಸ್ವಾಭಿಮಾನದಿಂದ ಬಾಳಬೇಕು. ನಮ್ಮನ್ನು ನಾವೇ ಗೌರವಿಸಿದರೆ, ಸಮಾಜವೂ ನಮ್ಮನ್ನು ಗೌರವಿಸುತ್ತದೆ ಎಂದು ಅವರು ಕಿವಿಮಾತು ನುಡಿದರು. ಮಹಿಳಾ ದಿನಾಚರಣೆಯ ಕಾರ್ಯಕ್ರಮಕ್ಕೆ ಸಹಕಾರ, ಪ್ರೋತ್ಸಾಹ ನೀಡಿದ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ, ಯುವ ವಿಭಾಗ, ಸಂಘದ ಒಂಬತ್ತು ಪ್ರಾದೇಶಿಕ ಸಮಿತಿಗಳಿಗೆ ಅವರು ಕೃತಜ್ಞತೆ ಸಲ್ಲಿಸಿದರು.

**ಲಕ್ಕಿ ಡಿಪ್ ವಿಜೇತರು**
**1. ದಿವ್ಯಾ ದೇಜು ಶೆಟ್ಟಿ 2. ಸುಭಾಶಿನಿ 3 ವಿನೋದ ಶೆಟ್ಟಿ 4. ಅಮೃತಾ ಶೆಟ್ಟಿ 5. ಶಾವಿರ 6. ನಯನಾ ಜಿ. ಶೆಟ್ಟಿ 7. ಮಮತಾ ಶೆಟ್ಟಿ**
**ಪ್ರಾಯೋಜಕರು- ಮಹಿಳಾ ವಿಭಾಗದ ಪದಾಧಿಕಾರಿಗಳು**

ಇದೇ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಹಾಗೂ ಸಮಾರಂಭದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿಯವರನ್ನು ಮಹಿಳಾ ವಿಭಾಗದ ಪರವಾಗಿ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ ಮತ್ತು ಪದಾಧಿಕಾರಿಗಳು ಶಾಲು, ಸ್ಮರಣಿಕೆ, ಹೂಗುಚ್ಛ ನೀಡಿ ಗೌರವಿಸಿದರು. ಮುಖ್ಯ ಅತಿಥಿ ಪ್ರೊ. ಶುಭಲಕ್ಷ್ಮೀ ಸುದರ್ಶನ್ ಹೆಗ್ಡೆ, ಗೌರವ ಅತಿಥಿ ಮೋಹಿನಿ ಪಿ. ಶೆಟ್ಟಿ, ರಾಧಾಬಾಯಿ ಟಿ. ಭಂಡಾರಿ ಪ್ರಶಸ್ತಿ ಪುರಸ್ಕೃತೆ ಡಾ. ಪೂರ್ಣಿಮಾ ಶೆಟ್ಟಿಯವರನ್ನು ಮಹಿಳಾ ಪದಾಧಿಕಾರಿಗಳು ಶಾಲು ಹೊದಿಸಿ, ಸ್ಮರಣಿಕೆ ಹೂಗುಚ್ಛ ನೀಡಿ ಗೌರವಿಸಿದರು.

ಅತಿಥಿ ಗಣ್ಯರ ಪರಿಚಯವನ್ನು ಕ್ರಮವಾಗಿ ಮಹಿಳಾ ವಿಭಾಗದ ಉಪ ಕಾರ್ಯಾಧ್ಯಕ್ಷೆ ಕವಿತಾ ಐ. ಆರ್. ಶೆಟ್ಟಿ, ಕಾರ್ಯದರ್ಶಿ ಆಶಾ ಸುಧೀರ್ ಶೆಟ್ಟಿ, ಸುಚಿತಾ ಕೆ. ಶೆಟ್ಟಿ ನೀಡಿದರು. ಸಂಘದ ಪದಾಧಿಕಾರಿಗಳಲ್ಲಿ ಉಪಸ್ಥಿತರಿದ್ದ ಗೌ. ಪ್ರ. ಕಾರ್ಯದರ್ಶಿ ಡಾ. ಆರ್.ಕೆ. ಶೆಟ್ಟಿ, ಯುವ ವಿಭಾಗದ ಕಾರ್ಯಾಧ್ಯಕ್ಷ ಸವಿನ್ ಶೆಟ್ಟಿಯವರನ್ನು ಗೌರವಿಸಲಾಯಿತು. ಮಹಿಳಾ ವಿಭಾಗವು ಪ್ರತಿವರ್ಷ ನೀಡುವ ಸುರತ್ಕಲ್ ಭಂಡಾರಿ ಬಹುಮಾನವನ್ನು ಈ ಬಾರಿ ಚೇತನಾ ಸಂತೋಷ್ ಶೆಟ್ಟಿ, 0ಶ್ರೀಮತಿ ಶಾಂತಾ ವಿಠಲ್ ಶೆಟ್ಟಿ ಬಹುಮಾನವನ್ನು ರಮಾನಾಥ ಪಯ್ಯಡೆ ಕಾಲೇಜಿನ ಮನಿಷಾರಿಗೆ ನೀಡಿ ಗೌರವಿಸಲಾಯಿತು.

ಯುವ ಪ್ರತಿಭೆಗಳಾದ ಕಣಂಜಾರು ಸೃಷ್ಟಿ ಸತೀಶ್ ಶೆಟ್ಟಿ, ಲಾವಣ್ಯ ಶೆಟ್ಟಿ, ರಿಶಾ ಗಣೇಶ್ ಶೆಟ್ಟಿ ಮತ್ತಿತರರನ್ನು ಗೌರವಿಸಲಾಯಿತು. ಮಿಸೆಸ್ ಇಂಡಿಯಾ- 2025 ವಿಜೇತೆ ಡಾ. ರಶ್ಮಾ ಮೋಹಿತ್ ಶೆಟ್ಟಿ ದಂಪತಿ, ಲೇಖಕಿ, ಛಾಯಾಕಿರಣದ ಸಂಪಾದಕಿ, ನಿರೂಪಕಿ ಶಾಲಿನಿ ಸಂತೋಷ್ ಶೆಟ್ಟಿ ಕಲ್ಯಾಣ್ ಇವರನ್ನು ಸನ್ಮಾನಿಸಲಾಯಿತು.

ಆರಂಭದಲ್ಲಿ ಸಂಘದ ಅಧ್ಯಕ್ಷ ಪ್ರವೀಣ್ ಭೋಜ ಶೆಟ್ಟಿ ದೀಪ ಬೆಳಗಿಸಿ ಸಮಾರಂಭಕ್ಕೆ ಚಾಲನೆ ನೀಡಿದರು. ಗೀತಾ ಸತೀಶ್ ಶೆಟ್ಟಿ ಪ್ರಾರ್ಥಿಸಿದರು. ಬಂಟ ಗೀತೆಯನ್ನು ಮೊಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಚಿತ್ರಾ ಆರ್. ಶೆಟ್ಟಿ ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶಾಲಿನಿ ಸಂತೋಷ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಮಹಿಳಾ ವಿಭಾಗದ ಕಾರ್ಯದರ್ಶಿ ಆಶಾ ಎಸ್. ಶೆಟ್ಟಿ ಧನ್ಯವಾದ ನೀಡಿದರು. ಸಭಾ ಕಾರ್ಯಕ್ರಮಕ್ಕೆ ಮುನ್ನ ಸಂಘದ ಒಂಬತ್ತು ಪ್ರಾದೇಶಿಕ ಸಮಿತಿಗಳ ಸದಸ್ಯೆಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು, ಮಹಿಳಾ ವಿಭಾಗದ ಸದಸ್ಯೆಯರಿಂದ 'ಭವ ಸ್ವರೂಪಿಣಿ' ಎಂಬ ವಿಶೇಷ ಕಾರ್ಯಕ್ರಮ ಎಲ್ಲರ ಮೆಚ್ಚುಗೆ ಗಳಿಸಿತು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಿಲ್ಪಾ ಸಂತೋಷ್ ಶೆಟ್ಟಿ ನಿರೂಪಿಸಿದರು.

## ಅಸಮಾನತೆಯನ್ನು ಹೋಗಲಾಡಿಸಲು ಪಣ ತೊಡೋಣ - ಮೋಹಿನಿ ಪಿ. ಶೆಟ್ಟಿ

ಗೌರವ ಅತಿಥಿ, ಸಾಂತಾಕ್ರೂಜ್ ಪಾನ್‌ಬಾಯ್ ಇಂಟರ್‌ನೇಶನಲ್ ಸ್ಕೂಲ್‌ನ ನಿರ್ದೇಶಕಿ ಮೋಹಿನಿ ಪಿ. ಶೆಟ್ಟಿ ಮಾತನಾಡುತ್ತಾ, ಮಹಿಳೆಯರು ಸಮಾನತೆಗಾಗಿ ಹೋರಾಡಿ ಅಸಮಾನತೆಯನ್ನು ಓಡಿಸಲು ಕಂಕಣ ಬದ್ಧರಾಗಬೇಕೆಂದು ಕರೆ ನೀಡಿದರು. ಮಹಿಳಾ ದಿನಾಚರಣೆಯು ಕೇವಲ ವಾರ್ಷಿಕ ದಿನಾಚರಣೆಯಾಗಿ ಉಳಿಯದೆ, ಪ್ರತಿದಿನದ ದಿನಾಚರಣೆಯಾಗಬೇಕೆಂದು ನುಡಿದರು. ಬಂಟರ ಸಂಘದ ಮಹಿಳಾ ವಿಭಾಗವು ಮಹಿಳೆಯರ ಆರ್ಥಿಕ, ಸಾಮಾಜಿಕ, ಶಿಕ್ಷಣ, ವೈದ್ಯಕೀಯ ತೊಂದರೆಗಳಿಗಾಗಿ ಸದಾ ಸ್ಪಂದಿಸುತ್ತಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು.

## ಮಹಿಳೆಯರು ಸ್ವತಂತ್ರವಾಗಿ ಯೋಚಿಸುವ ಜೊತೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಿ - ಪ್ರೊ. ಶುಭಲಕ್ಷ್ಮಿ ಹೆಗ್ಡೆ

ಮುಖ್ಯ ಅತಿಥಿ, ಬದ್ಲಾಪುರ ಭಾರತ್ ಕಾಲೇಜ್ ಆಫ್ ಇಂಜಿನಿಯರಿಂಗ್ ಇದರ ಸ್ಥಾಪಕ ವಿಶ್ವಸ್ಥೆ ಪ್ರೊ. ಶುಭಲಕ್ಷ್ಮೀ ಸುದರ್ಶನ್ ಹೆಗ್ಡೆ ಮಾತನಾಡುತ್ತಾ ಬಂಟರ ಸಂಘ ಮಹಿಳಾ ವಿಭಾಗದ ಸಾಧನೆಯನ್ನು ಪ್ರತ್ಯಕ್ಷವಾಗಿ ಕಂಡು ಅತ್ಯಂತ ಸಂತಸವಾಗುತ್ತಿದೆ. ಬಂಟರ ಸಂಘವು ಹಲವಾರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಕ್ರಾಂತಿಯನ್ನೇ ಮಾಡುತ್ತಿದೆ. ತಮ್ಮ ಶಿಕ್ಷಣ, ಸಮಾಜ ಸೇವೆ, ಸಾಂಸ್ಕೃತಿಕ ಸೇವೆ ಪ್ರಶಂಸನೀಯವಾದುದು. ಈ ಹಿಂದೆಯೂ ಮಹಿಳಾ ವಿಭಾಗದ ಶೆಫಾಲಿ ಹೆಗ್ಡೆ ಪ್ರಶಸ್ತಿ ಪಡೆದಿರುವ ತಮಗೆ ಈ ಪ್ರಶಸ್ತಿಗಳಿಂದ, ಸನ್ಮಾನದಿಂದ ಹೆಚ್ಚು ಸ್ಫೂರ್ತಿ ದೊರಕುತ್ತಿದೆ ಎಂದರು.

ಮಹಿಳೆಯರ ಸಾಧನೆಯನ್ನು ಗುರುತಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಸಂಘದ ಮಹಿಳಾ ವಿಭಾಗವು ಮಹಿಳಾ ದಿನಾಚರಣೆಯ ಈ ಸಂದರ್ಭದಲ್ಲಿ ಇಂತಹ ಶ್ಲಾಘನೀಯ ಕಾರ್ಯವನ್ನು ಮಾಡುತ್ತಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ಮಹಿಳೆಯರ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುವ ಜೊತೆಗೆ ಸ್ವತಂತ್ರವಾಗಿ ಯೋಚಿಸಿ ಕಾರ್ಯತತ್ಪರಾಗಬೇಕೆಂದು ಕಿವಿಮಾತು ನುಡಿದರು. ಮಹಿಳೆ ಶಿಕ್ಷಣ ಪಡೆದಾಗ ಕುಟುಂಬ, ಸಮಾಜ, ದೇಶ, ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ನೀವು ನಿಮ್ಮ ಆಸನಕ್ಕಾಗಿ ಇತರರನ್ನು ಹೊಂದಿಕೊಳ್ಳದಿರಿ. ನಿಮ್ಮದೇ ಸ್ವಂತ ಆಸನ ತಯಾರಿ ನಡೆಸಿರೆಂದು ನುಡಿದು ಎಲ್ಲರಿಗೂ ಮಹಿಳಾ ದಿನಾಚರಣೆಯ ಶುಭಾಶಯ ಸಲ್ಲಿಸಿದರು.

# ಬಂಟರ ಸಂಘ ನವಮುಂಬಯಿ ಪ್ರಾದೇಶಿಕ ಸಮಿತಿ : ಆರ್ಥಿಕ ಸಹಾಯ ಹಸ್ತದ ಅರ್ಜಿ ಫಾರ್ಮ್ ವಿತರಣೆ

ನವಿಮುಂಬಯಿ,ಮಾ.8- ಬಂಟರ ಸಂಘ ಮುಂಬಯಿಯ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿ ಕೊಡಮಾಡುವ ಆರ್ಥಿಕ ಸಹಾಯ ಹಸ್ತದ ಅರ್ಜಿ ಫಾರ್ಮ್‌ಗಳನ್ನು ಬಂಟರ ಸಂಘ ಮುಂಬಯಿ ಇದರ ನವಿಮುಂಬಯಿ ಪ್ರಾದೇಶಿಕ ಸಮಿತಿಯ ಆಶ್ರಯದಲ್ಲಿ ಮಾರ್ಚ್ 27 ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ನೇರುಲ್ ಶ್ರೀ ಶನೀಶ್ವರ ಮಂದಿರದಲ್ಲೂ, ಮಾರ್ಚ್ 28 ಶನಿವಾರದಂದು ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಘನ್ಸೋಲಿ ಶ್ರೀ ಮೂಕಾಂಬಿಕಾ ದೇವಾಲಯದಲ್ಲೂ ವಿತರಿಸಲಾಗುವುದು.

ತುಂಬಿದ ಅರ್ಜಿ ಫಾರ್ಮ್‌ಗಳನ್ನು ಎಪ್ರಿಲ್ 3 ರ ಶುಕ್ರವಾರದಂದು ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ನೆರುಲ್ ಶ್ರೀ ಶನೀಶ್ವರ ಮಂದಿರದಲ್ಲೂ, ಎಪ್ರಿಲ್ 4 ಶನಿವಾರದಂದು ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಘನ್ಸೋಲಿ ಶ್ರೀ ಮೂಕಾಂಬಿಕಾ ದೇವಾಲಯದಲ್ಲೂ ವಾಪಾಸು ಸ್ವೀಕರಿಸಲಾಗುವುದು. ಅರ್ಹರು ಇದರ ಲಾಭವನ್ನು ಪಡಕೊಳ್ಳಬೇಕಾಗಿ ನವಮುಂಬಯಿ ಪ್ರಾದೇಶಿಕ ಸಮಿತಿಯ ಕಾರ್ಯಾಧ್ಯಕ್ಷ ದಕ್ಷಿಣ್ ಭಾಸ್ಕರ್ ಶೆಟ್ಟಿ ಹಾಗೂ ಶಿಕ್ಷಣ ಮತ್ತು ಸಮಾಜ ಕಲ್ಯಾಣ ಸಮಿತಿಯ ಕಾರ್ಯಾಧ್ಯಕ್ಷ ಸುರೇಶ್. ವಿ. ಶೆಟ್ಟಿ ಸಿಬಿಡಿ ಹಾಗೂ ಸಮಿತಿಯ ಸರ್ವ ಪದಾಧಿಕಾರಿಗಳು, ಮಹಿಳಾ ವಿಭಾಗ, ಯುವ ವಿಭಾಗದವರು ವಿನಂತಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸುರೇಶ್. ವಿ. ಶೆಟ್ಟಿ, ಮೊ.ನಂಬ್ರ -9821467854 , ಗೀತಾ. ಎಸ್. ಶೆಟ್ಟಿ ಮೊ.ನಂಬ್ರ - 9967122636 ಮತ್ತು ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ಮೊ.ನಂಬ್ರ- 9320129094 ಇವರನ್ನು ಸಂಪರ್ಕಿಸ ಬಹುದು .

# ಮಾ. 17-18: ಶಿರ್ವ ಮಾರಿಗುಡಿ ಶ್ರೀ ಮಹಾಮಾಯಿ ಅಮ್ಮನವರ ಸಾನಿಧ್ಯದಲ್ಲಿ ಹರಕೆಯ ಮಾರಿಪೂಜೆ

ಶಿರ್ವ, ಮಾ. 8- ಶಿರ್ವ ಮಾರಿಗುಡಿ ಶ್ರೀ ಮಹಾಮಾಯಿ ಅಮ್ಮನವರ ಸಾನಿಧ್ಯದಲ್ಲಿ ಹರಕೆಯ ಮಾರಿಪೂಜೆಯು ಮಾರ್ಚ್ 17 ಮಂಗಳವಾರ ಮತ್ತು 18 ಬುಧವಾರರಂದು ನಡೆಯಲಿದೆ.

ಹರಕೆಯ ಮಾರಿ ಪೂಜೆಯು ಮಾರಿಗುಡಿ ಹತ್ತಿರದ ಬಲ್ಲಾಡಿಕೆರೆ ದೇವಿಪ್ರಸಾದ್ ಶ್ರೀ ಸುಂದರ್‌ಪೂಜಾರಿ ಮತ್ತು ಕುಟುಂಬದ ವತಿಯಿಂದ ಜರಗಲಿದೆ .



ಧಾರ್ಮಿಕ ಕಾರ್ಯಕ್ರಮದ ಅಂಗವಾಗಿ ಮಾರ್ಚ್ 17 ರಂದು ಸಂಜೆ ಆರು ಗಂಟೆಗೆ ಶಿರ್ವ ಶ್ರೀ ಮಹತೋಭಾರ ಶ್ರೀ ವಿಷ್ಣುಮೂರ್ತಿ ದೇವಸ್ಥಾನದಿಂದ ಮೆರವಣಿಗೆಯು ಮಾರಿಗುಡಿ ಅಮ್ಮನವರ ಸಾನಿಧ್ಯಕ್ಕೆ ಬರುವುದು. ಸಂಜೆ 7:30ಕ್ಕೆ ಗೊಂಬೆ ಪ್ರತಿಷ್ಠೆ ನಡೆಯುವುದು. ಮಾರ್ಚ್ 18 ಬುಧವಾರ ಬೆಳಗ್ಗಿನಿಂದ ಸಂಜೆವರೆಗೆ ಮಾರಿಪೂಜೆ ಸೇವೆಯು ನಡೆಯುವುದು. 'ನಮ ಶಿರ್ವದ ಅಪ್ಪೆನ ಜೋಕುಲು' ಎಂಬ ನುಡಿ ವಾಣಿಯಂತೆ ಶಿರ್ವ ಪರಿಸರದ ಮಹಮ್ಮಾಯಿ ದೇವರ ಭಕ್ತಾಭಿಮಾನಿಗಳೆಲ್ಲರೂ ಈ ಧಾರ್ಮಿಕ ಮಾರಿ ಪೂಜೆ ಕಾರ್ಯಕ್ರಮಕ್ಕೆ ಆಗಮಿಸಬೇಕಾಗಿ ಸಾನಿಧ್ಯದ ತಂತ್ರಿಗಳು, ಅರ್ಚಕರು, ಮಕ್ತೇಸರರು, ಆಡಳಿತ ಮಂಡಳಿ, ಸದಸ್ಯರು ಹಾಗೂ ಪದಾಧಿಕಾರಿಗಳು ಮತ್ತು ಗ್ರಾಮಸ್ಥರು ಹಾಗೂ ಆಯೋಜಕರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

# ಸಂಘಟಕ ಭಾಯಂದರ್ ಜಯಪ್ರಕಾಶ್ ಪೂಜಾರಿಯವರ ನೇತೃತ್ವದಲ್ಲಿ ನಡೆದ ದಕ್ಷಿಣ ಭಾರತ ಪ್ರವಾಸ







ಮುಂಬಯಿ, ಮಾ. 8 - ಭಾಯಂದರ್ ಬಿಲ್ಲವರ ಅಸೋಸಿಯೇಷನ್‌ನ ಸ್ಥಳೀಯ ಸಮಿತಿಯ ಮಾಜಿ ಅಧ್ಯಕ್ಷರು ಹಾಗೂ ಮೀರಾ- ಭಾಯಂದರ್ ತುಳುನಾಡ ಸಮಾಜ ಸೇವಾ ಸಂಘದ ಸಂಚಾಲಕರು ಆದ ಜಯಪ್ರಕಾಶ್ ಪೂಜಾರಿಯವರ ನೇತೃತ್ವದಲ್ಲಿ ಇತ್ತೀಚೆಗೆ ದಕ್ಷಿಣ ಭಾರತದ ವಿವಿಧ ಪುಣ್ಯಕ್ಷೇತ್ರಗಳ ಪ್ರವಾಸ ಕಾರ್ಯಕ್ರಮ ನಡೆಯಿತು.

ಫೆ.21ರಂದು ಮುಂಬಯಿಯಿಂದ ಹಂಪೆಗೆ ತೆರಳಿದ ಈ ಯಾತ್ರಾರ್ಥಿಗಳ ತಂಡ ಫೆ. 22ರಂದು ಹಂಪೆಯ ವಿವಿಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಮಾರನೇ ದಿನ ಮಂತ್ರಾಲಯಕ್ಕೆ ತೆರಳಿ ಪಂಚಮುಖಿ ಆಂಜನೇಯ ಟೆಂಪಲ್‌ಗೆ ಭೇಟಿನೀಡಿ ತದನಂತರ ಮಂತ್ರಾಲಯ ರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದರು.

ಫೆ. 24ರಂದು ತಿರುಪತಿಯತ್ತ ತೆರಳಿದ ಯಾತ್ರಾರ್ಥಿಗಳು ಫೆ.25 ರಂದು ತಿರುಪತಿ ತಿಮ್ಮಪ್ಪ ದೇವರ ದರ್ಶನ ಪಡೆದು ಫೆ.26ರಂದು ಶ್ರೀನಿವಾಸ ಕಲ್ಯಾಣ ಗರ್ಶನ,ಕಾಣಿಪಾಕಂ ಗಣಪತಿ ದರ್ಶನ, ವೆಲ್ಲೂರು, ಗೋಲ್ಡನ್ ಟೆಂಪಲ್, ಕಾಂಚಿಪುರಂ ಕಂಚಿಕಾಮಾಕ್ಷೀ, ವಿಷ್ಣು ಕಾಶಿ, ಶಿವಕಾಶಿ ಮಂದಿರ ಗಳಿಗೆ ಭೇಟಿ ನೀಡಿ ದೇವರ ದರ್ಶನ ಪಡೆದು ರಾತ್ರಿ ತಿರುಪತಿಯಲ್ಲಿ ವಾಸ್ತವ್ಯ ಹೂಡಿದರು.



ಫೆ. 27 ರಂದು ತಿರುಪತಿಯಲ್ಲಿ ಕಪಿಲೇಶ್ವರ ಟೆಂಪಲ್, ಇಸ್ಕಾನ್ ಮಂದಿರ , ಗೋವಿಂದ ರಾಜ್ ಪದ್ಮಾವತಿ ಮಂಂದಿರ ಹಾಗೂ ಕಾಳಹಸ್ತಿ ಮಂದಿರ ಗಳಿಗೆ ಭೇಟಿ ನೀಡಿ ರಾತ್ರಿ ಮಹಾರಾಷ್ಟ್ರದ ಕೊಲ್ಹಾಪುರ್‌ಗೆ ತೆರಳಿ ಫೆ. 28ರಂದು ಕೊಲ್ಹಾಪುರ ಮಹಾಲಕ್ಷ್ಮಿ ದೇವಿಯ ದರ್ಶನ ಪಡೆದು ಮುಂಬೈ ಯತ್ತ ಪ್ರಯಾಣಿಸಿದ ಯಾತ್ರಾರ್ಥಿಗಳು ಮಾ. 1ರಂದು ಮುಂಬೈ ಮಹಾನಗರ ತಲುಪಿದರು.

ಜಯಪ್ರಕಾಶ್ ಪೂಜಾರಿಯವರ ನೇತೃತ್ವದಲ್ಲಿ ಮುಂದಿನ ಪ್ರವಾಸ ಕಾರ್ಯಕ್ರಮಗಳು ಉತ್ತರ ಭಾರತದ ತೀರ್ಥಕ್ಷೇತ್ರಗಳತ್ತ ಹಮ್ಮಿಕೊಂಡಿದ್ದು, ಎಪ್ರಿಲ್ 5 ರಿಂದ 10 ರವರೆಗೆ ಸೋಮನಾಥ್, ಜ್ಯೋತಿರ್ಲಿಂಗ, ದ್ವಾರಕ ಬೆಟ್,ದ್ವಾರಕ, ನಾಗೇಶ್ವರ್, ಜ್ಯೋತಿರ್ಲಿಂಗ ಮುಂತಾದ ಕ್ಷೇತ್ರ ಗಳತ್ತ ಭೇಟಿ ನೀಡಲಿದೆ.

ಜೂನ್ 25 ರಿಂದ 30 ರವರೇಗೆ ಉಜ್ಜಯಿನಿ ಮಂಕಾಳೇಶ್ವರ, ಓಂಕಾರೇಶ್ವರ, ಜ್ಯೋತಿರ್ಲಿಂಗ, ಮಹೇಶ್ವರಿ, ಅಹಲ್ಯಬಾಯಿ ,ಮಾಂಡೋ, ಇಂದೋರ್ ಪ್ರವಾಸ ತೆರಳುವ ಕಾರ್ಯಕ್ರಮವಿದೆ .

ಮೇ 18 ರಿಂದ 31ರವರೇಗೆ ಚಾರ್‌ಧಾಮ್ ಯಾತ್ರೆ ಹಾಗೂ ಆಗಸ್ಟ್ 7 ರಿಂದ 14 ರವರೆಗೆ ಮಧುರೈ ಮೀನಾಕ್ಷಿ, ರಾಮೇಶ್ವರ, ಕನ್ಯಾಕುಮಾರಿ,ಅನಂತ ಪದ್ಮನಾಭ ಮತ್ತು ಗುರುವಾಯೂರು ಶ್ರೀ ಕೃಷ್ಣ ಟೆಂಪಲ್ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಆಗಸ್ಟ್ 31 ರಿಂದ ಸೆಪ್ಟೆಂಬರ್7 ರವರೆಗೆ ಪ್ರಯಾಗ್ ರಾಜ್, ಚಿತ್ರಕೂಟ,ಅಯೋಧ್ಯ, ವಾರಣಾಶಿ, ಕಾಶಿವಿಶ್ವನಾಥ ದರ್ಶನ ಯಾತ್ರೆ ಹಮ್ಮಿಕೊಳ್ಳಲಾಗಿದ್ದು. ಈ ಪ್ರವಾಸ ಕಾರ್ಯಕ್ರಮ ದಲ್ಲಿ ಪಾಲ್ಗೊಳ್ಳಲಿಚ್ಚಿಸಿರುವವರು ಜಯಪ್ರಕಾಶ್ ಪೂಜಾರಿ ಅವರ ಮೊಬೈಲ್ ಸಂಖ್ಯೆ- 8080446646 ಮತ್ತು 9222693858 ಕ್ಕೆ ಸಂಪರ್ಕಿಸಬಹುದಾಗಿದೆ .

# ಏಕೈಕ ಪಿಂಕ್‌ಬಾಲ್ ಟೆಸ್ಟ್: ಆಸೀಸ್ ವಿರುದ್ಧ ಭಾರತ ಮಹಿಳಾ ತಂಡಕ್ಕೆ 10 ವಿಕೆಟ್ ಸೋಲು



ಪರ್ತ್, ಮಾ.8 - ಕಳೆದ ಮೂರು ದಿನಗಳಲ್ಲಿ ತನ್ನ ಅಗಾಧ ಪ್ರಾಬಲ್ಯವನ್ನು ಪ್ರದರ್ಶಿಸಿದ ಆಸ್ಟ್ರೇಲಿಯಾ, ಪರ್ತ್‌ನಲ್ಲಿ ನಡೆದ ಏಕೈಕ ಮಹಿಳಾ ಹಗಲು-ರಾತ್ರಿ ಟೆಸ್ಟ್ ಪಂದ್ಯದಲ್ಲಿ ಭಾರತದ ವಿರುದ್ಧ 10 ವಿಕೆಟ್‌ಗಳ ಜಯ ಸಾಧಿಸಿತು. ಆ ಮೂಲಕ ಬಹು-ಮಾದರಿಯ ಸರಣಿಯನ್ನು ಆಸೀಸ್ ತಂಡವು 12-4 ಅಂಕಗಳಿಂದ ವಶಪಡಿಸಿಕೊಂಡಿತು. ಭಾರತ ತಂಡವು ಟಿ20 ಸರಣಿಯನ್ನು 2-1 ರಿಂದ ವಶಪಡಿಸಿಕೊಂಡಿದ್ದರೆ, ಆಸೀಸ್ ಏಕದಿನ ಸರಣಿಯನ್ನು 3-0ಯಿಂದ ಕ್ಲೀನ್‌ಸ್ವೀಪ್‌ಗೈದಿತು. ವೈಟ್-ಬಾಲ್ ಸರಣಿಯ ಪ್ರತಿ ಪಂದ್ಯಕ್ಕೆ 2 ಅಂಕ ಹಾಗೂ ಟೆಸ್ಟ್‌ಗೆ ನಾಲ್ಕು ಅಂಕ ನೀಡಲಾಗುತ್ತದೆ. ಟೆಸ್ಟ್ ಪಂದ್ಯದಲ್ಲಿ ಆಲ್‌ರೌಂಡರ್ ಪ್ರದರ್ಶನ ನೀಡಿದ ಆಸೀಸ್ ಆಟಗಾರ್ತಿ ಅನಾಬೆಲ್ ಸದರ್‌ಲ್ಯಾಂಡ್ ಪಂದ್ಯ ಹಾಗೂ ಸರಣಿ ಶ್ರೇಷ್ಠ ಪ್ರಶಸ್ತಿಗೆ ಪಾತ್ರರಾದರು.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ನಡೆಸಿದ ಭಾರತ ಮೊದಲ ಇನಿಂಗ್ಸ್‌ನಲ್ಲಿ 198 ರನ್‌ಗೆ ಆಲೌಟ್ ಆಯಿತು. ಇದಕ್ಕೆ ಪ್ರತಿಯಾಗಿ ಆಸ್ಟ್ರೇಲಿಯಾ 323 ರನ್ ಬಾರಿಸಿ ಇನಿಂಗ್ಸ್ ಮುನ್ನಡೆ ಸಾಧಿಸಿತು. ದ್ವಿತೀಯ ಇನಿಂಗ್ಸ್‌ನಲ್ಲಿ ಮತ್ತೆ ಬ್ಯಾಟಿಂಗ್ ವೈಫಲ್ಯ ಕಂಡ ಭಾರತ 149 ರನ್‌ಗೆ ಸರ್ವಪತನ ಕಂಡಿತು. ಗೆಲುವಿಗೆ 25 ರನ್ ಬೆನ್ನಟ್ಟಿದ ಆಸ್ಟ್ರೇಲಿಯಾ ಈ ಮೊತ್ತವನ್ನು ಅಜೇಯವಾಗಿ ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು. ವಿದಾಯದ ಪಂದ್ಯವನ್ನಾಡಿದ ನಾಯಕಿ ಅಲಿಸಾ ಹೀಲಿಗೆ ಈ ಗೆಲುವು ಸ್ಮರಣೀಯವಾಯಿತು.

ಭಾರತ ತಂಡ ಮೂರನೇ ದಿನವನ್ನು ಆರು ವಿಕೆಟ್ ನಷ್ಟಕ್ಕೆ 105 ರನ್‌ಗಳಿಂದ ಆರಂಭಿಸಿತು. ಪ್ರತೀಕಾ ರಾವಲ್ (63 ರನ್, 137 ಎಸೆತ, 8 ಬೌಂಡರಿ) ಮತ್ತು ಸ್ನೇಹ್ ರಾಣಾ (30) ಭಾರತವನ್ನು 132 ರನ್‌ಗಳ ಗಡಿ ದಾಟಿಸಿದರು. ಗಾರ್ಡ್ನರ್ ಮತ್ತು ಪಂದ್ಯಶ್ರೇಷ್ಠ ಆಟಗಾರ್ತಿ ಅನಾಬೆಲ್ ಸದರ್‌ಲ್ಯಾಂಡ್ ಅವರ ಸಂಯೋಜನೆಯು ಭಾರತದ ಇನ್ನಿಂಗ್ಸ್ ಅನ್ನು ಸೂಕ್ತವಾಗಿ ಕೊನೆಗೊಳಿಸಿತು. ಸದರ್‌ಲ್ಯಾಂಡ್(129) ಶತಕದ ಜತೆಗೆ ಒಟ್ಟು 6 ವಿಕೆಟ್ ಕಿತ್ತು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು.

ಚೇಸಿಂಗ್ ವೇಳೆ ಆಸ್ಟ್ರೇಲಿಯಾದ ಆರಂಭಿಕ ಆಟಗಾರ್ತಿಯರಾದ ಜಾರ್ಜಿಯಾ ವೋಲ್(ಅಜೇಯ 16) ಮತ್ತು ಫೋಬೆ ಲಿಚ್‌ಫೀಲ್ಡ್(ಅಜೇಯ 11) ಜೋಡಿ 25 ರನ್‌ಗಳನ್ನು ಕೇವಲ 4.3 ಓವರ್‌ಗಳಲ್ಲಿ ಬಾರಿಸಿದರು. ಭಾರತ ಪರ ಪ್ರತೀಕಾ ರಾವಲ್ ಹೊರತುಪಡಿಸಿ ಉಳಿದವರು ವಿಫಲರಾದರು.

**ವಿದಾಯ ಹೇಳಿದ ಹೀಲಿ....**

ಪಂದ್ಯದ ನಂತರ ಮಾತನಾಡಿದ ಹೀಲಿ, 'ಟಿ20 ಸರಣಿಯನ್ನು ಸೋತ ನಂತರ ಮತ್ತೆ ತಂಡಕ್ಕೆ ಮರಳಿದ್ದು ಅದ್ಭುತವಾಗಿತ್ತು. ನನಗೆ ಈ ತಂಡದ ಬಗ್ಗೆ ಹೆಮ್ಮೆಯಿದೆ. ನಾನು ಕೊನೆಯ ಬಾರಿಗೆ ತಂಡದ ಹಾಡನ್ನು ಹಾಡುತ್ತೇನೆ ಮತ್ತು ಈ ತಂಡ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ನನಗೆ ಸಂತೋಷವಾಗಿದೆ' ಎಂದು ಹೇಳಿದರು.

ಸೋಲಿನ ಬಳಿಕ ಮಾತನಾಡಿದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, 'ನಾವು ಟಿ20ಗಳಲ್ಲಿ ಸರಣಿ ಗೆಲುವಿನೊಂದಿಗೆ ಉತ್ತಮವಾಗಿ ಪ್ರಾರಂಭಿಸಿದೆವು, ಆದರೆ ಏಕದಿನ ಮತ್ತು ಟೆಸ್ಟ್‌ಗಳಲ್ಲಿ ಉತ್ತಮ ಕೆಲಸವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಆದರೆ ಆಸ್ಟ್ರೇಲಿಯಾದಲ್ಲಿ ಪೂರ್ಣ ಸರಣಿಯನ್ನು ಆಡುವುದು ಉತ್ತಮ ಅನುಭವವಾಗಿತ್ತು. ಪಿಂಕ್ ಬಾಲ್ ಟೆಸ್ಟ್ ವಿಭಿನ್ನ ಸವಾಲಾಗಿತ್ತು' ಎಂದು ಹೇಳಿದರು.

# ಸತತ 5 ಎಸೆತಗಳಿಗೆ ಐದು ವಿಕೆಟ್: ಕ್ರಿಕೆಟ್‌ನಲ್ಲಿ ಹೊಸ ದಾಖಲೆ ಬರೆದ ಕಿವೀಸ್ ವೇಗಿ



ನೇಪಿಯರ್(ನ್ಯೂಜಿಲೆಂಡ್), ಮಾ.8 - 254 ವರ್ಷಗಳ ಇತಿಹಾಸ ಹೊಂದಿರುವ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್‌ನ ವೇಗದ ಬೌಲರ್‌ಒಬ್ಬರು ಸತತ ಐದು ಎಸೆತಗಳಲ್ಲಿ 5 ವಿಕೆಟ್ ಪಡೆಯುವ ಮೂಲಕ ದಾಖಲೆ ಬರೆದಿದ್ದಾರೆ.

ನ್ಯೂಜಿಲೆಂಡ್‌ನ ನೇಪಿಯರ್‌ನ ಮೆಕ್‌ಲೀನ್ ಪಾರ್ಕ್ ಮೈದಾನದಲ್ಲಿ ಸೆಂಟ್ರಲ್ ಡಿಸ್ಟ್ರಿಕ್ಟ್ಸ್ ಹಾಗೂ ನಾರ್ದರ್ನ್ ಡಿಸ್ಟ್ರಿಕ್ಟ್ಸ್ ತಂಡಗಳು ಮುಖಾಮುಖಿಯಾಗಿದ್ದವು.

4 ದಿನಗಳ ಕ್ರಿಕೆಟ್ ಪಂದ್ಯಾವಳಿಯ ಎರಡನೇ ದಿನದಾಟದಲ್ಲಿ ಸೆಂಟ್ರಲ್ ಡಿಸ್ಟ್ರಿಕ್ಟ್ಸ್ ತಂಡದ ಪರ ಆಡುವ ಬ್ರೆಟ್ ರಾಂಡೆಲ್ ಅವರು ಸತತ 5 ಎಸೆತಗಳಲ್ಲಿ 5 ವಿಕೆಟ್ ಪಡೆದು ದಾಖಲೆ ಬರೆದಿದ್ದಾರೆ.

ದಾಖಲೆಗಳ ಪ್ರಕಾರ, ಮೊದಲ ಪ್ರಥಮ ದರ್ಜೆ ಪಂದ್ಯ ಕ್ರಿಕೆಟ್ ಪಂದ್ಯ ಆರಂಭವಾಗಿದ್ದು 1772 ರಲ್ಲಿ. ಅಲ್ಲಿಂದ ಇಲ್ಲಿಯವರೆಗೆ ಅನೇಕ ಧೀರ್ಘ ಮಾದರಿಯ ಪ್ರಥಮದರ್ಜೆ ಕ್ರಿಕೆಟ್ ಪಂದ್ಯಾವಳಿಗಳು ನಡೆದಿವೆ. ಅದರಲ್ಲಿ ಅಧಿಕ ಅಂದರೆ, ಸತತ ನಾಲ್ಕು ಎಸೆತಗಳಲ್ಲಿ ನಾಲ್ಕು ವಿಕೆಟ್ ಪಡೆದಿರುವುದು ಇದುವರೆಗಿನ ಸಾಧನೆ ಆಗಿತ್ತು. ಆದರೆ, ಇದೇ ಮೊದಲ ಬಾರಿಗೆ 5 ಎಸೆತಗಳಲ್ಲಿ 5 ವಿಕೆಟ್ ಪಡೆದ ಬೌಲರ್‌ಎಂಬ ಸಾಧನೆಯನ್ನು ಬ್ರೆಟ್ ರಾಂಡೆಲ್ ಅವರು ಮಾಡಿದ್ದಾರೆ. ಕಳೆದ ವರ್ಷ ನಡೆದ ದೇಶೀಯ ಟಿ-20 ಪಂದ್ಯದಲ್ಲಿ ಐರ್ಲೆಂಡ್‌ನ ಕರ್ಟಿಸ್ ಕ್ಯಾಂಪರ್ ಐದು ಎಸೆತಗಳಲ್ಲಿ ಐದು ವಿಕೆಟ್‌ಗಳನ್ನು ಕಬಳಿಸಿದ್ದರು. ಆದರೆ, ಅದು ಚುಟುಕು ಮಾದರಿಯ ಕ್ರಿಕೆಟ್ ಆಗಿತ್ತು.

30 ವರ್ಷದ ಬ್ರೆಟ್ ರಾಂಡೆಲ್ ಅವರು ತಮ್ಮ ಕೋಟಾದ ಎರಡನೇ ಓವರ್‌ನ ಕೊನೆಯ ಎಸೆತದಲ್ಲಿ ಹೆನ್ರಿ ಕೂಪರ್‌ಅವರನ್ನು ಕ್ಲೀನ್ ಬೌಲ್ಡ್ ಮಾಡಿದರು ಮತ್ತು ಮೂರನೇ ಓವರ್‌ನ ಮೊದಲ ನಾಲ್ಕು ಎಸೆತಗಳಲ್ಲಿ ನಾಲ್ಕು ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಕಳಿಸಿದರು. ಈ ಪಂದ್ಯದಲ್ಲಿ ಕೇವಲ 25 ರನ್ ನೀಡಿದ ಬ್ರೆಟ್ ರಾಂಡೆಲ್ 7 ವಿಕೆಟ್ ಕಬಳಿಸಿ ಮಿಂಚಿದರು.

# ವಿಚಿತ್ರವೆಂದರೆ, ಕೆಲವು ತಂಡಗಳು ಇತರರಿಗಿಂತ ಹೆಚ್ಚು ಪರಿಣಾಮ ಬೀರುತ್ತವೆ: ಐಸಿಸಿಯನ್ನು ಟೀಕಿಸಿದ ಡಿ ಕಾಕ್, ಮಿಲ್ಲರ್



ಹೊಸದಿಲ್ಲಿ, ಮಾ.8 - ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಘರ್ಷಣೆಗಳಿಂದ ಉಂಟಾದ ಅಡೆತಡೆಗಳ ನಡುವೆಯೂ ಎರಡೂ ತಂಡಗಳು ಇನ್ನೂ ತವರಿಗೆ ಮರಳಲು ಕಾಯುತ್ತಿರುವಾಗ, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್‌ಗಿಂತ ಇಂಗ್ಲೆಂಡ್‌ನ ಪ್ರಯಾಣ ವೇಳಾಪಟ್ಟಿಗೆ ಆದ್ಯತೆ ನೀಡುತ್ತಿದೆ ಎಂದು ಕ್ವಿಂಟನ್ ಡಿ ಕಾಕ್ ಮತ್ತು ಡೇವಿಡ್ ಮಿಲ್ಲರ್ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ)ಯನ್ನು ಟೀಕಿಸಿದ್ದಾರೆ.

ಗುರುವಾರ ನಡೆದ ಎರಡನೇ ಸೆಮಿಫೈನಲ್‌ನಲ್ಲಿ ಭಾರತ ವಿರುದ್ಧ ಸೋತ ಇಂಗ್ಲೆಂಡ್ ಶನಿವಾರ ಸಂಜೆ ಮುಂಬಯಿನಿಂದ ಲಂಡನ್‌ಗೆ ನೇರ ಚಾರ್ಟರ್ಡ್ ವಿಮಾನದಲ್ಲಿ ಹೊರಟಿತು. ಆದಾಗ್ಯೂ, ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ತಂಡಗಳು ಭಾರತದಲ್ಲಿಯೇ ಉಳಿದಿವೆ.

ಕಳೆದ ಭಾನುವಾರ ಈಡನ್ ಗಾರ್ಡನ್ಸ್‌ನಲ್ಲಿ ಭಾರತದ ವಿರುದ್ಧ ಐದು ವಿಕೆಟ್‌ಗಳಿಂದ ಸೋತ ನಂತರ ವೆಸ್ಟ್ ಇಂಡೀಸ್ ಟಿ20 ವಿಶ್ವಕಪ್‌ನಿಂದ ಹೊರಬಿತ್ತು. ಅದೇ ರೀತಿ ಬುಧವಾರ ಕೋಲ್ಕತ್ತಾದಲ್ಲಿ ನಡೆದ ಮೊದಲ ಸೆಮಿಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧದ ಸೋಲಿನೊಂದಿಗೆ ದಕ್ಷಿಣ ಆಫ್ರಿಕಾದ ಅಭಿಯಾನವೂ ಕೊನೆಗೊಂಡಿತು.

ದಕ್ಷಿಣ ಆಫ್ರಿಕಾ ಮತ್ತು ವೆಸ್ಟ್ ಇಂಡೀಸ್ ಎರಡೂ ತಂಡಗಳು ಕೋಲ್ಕತ್ತಾದಿಂದ ಮತ್ತೊಂದು ಚಾರ್ಟರ್ಡ್ ವಿಮಾನದಲ್ಲಿ ಒಟ್ಟಿಗೆ ಪ್ರಯಾಣಿಸುವ ನಿರೀಕ್ಷೆಯಿದೆ. ವಿಮಾನದ ಸಮಯವನ್ನು ಇನ್ನೂ ದೃಢಪಡಿಸಲಾಗಿಲ್ಲ, ಆದರೆ ಅದು ಭಾನುವಾರ ಹೊರಡುವ ನಿರೀಕ್ಷೆಯಿದೆ. 'ಐಸಿಸಿ ನಮಗೆ ಏನನ್ನೂ ಹೇಳದಿರುವುದು ತಮಾಷೆಯಾಗಿದೆ. ಏತನ್ಮಧ್ಯೆ, ಇಂಗ್ಲೆಂಡ್ ಹೇಗೋ ನಮಗಿಂತ ಮುಂದೆ ಹೇಗೆ ಹೋಗುತ್ತಿದೆ? ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ಕತ್ತಲೆಯಲ್ಲಿವೆ. ವಿಭಿನ್ನ ತಂಡಗಳು ಇತರರಿಗಿಂತ ಹೇಗೆ ಹೆಚ್ಚು ಪರಿಣಾಮ ಬೀರುತ್ತವೆ ಎಂಬುದು ವಿಚಿತ್ರ' ಎಂದು ಡಿ ಕಾಕ್ ಇನ್‌ಸ್ಟಾಗ್ರಾಮ್‌ನಲ್ಲಿ ಬರೆದಿದ್ದಾರೆ.

ಡಿ ಕಾಕ್ ಅವರ ತಂಡದ ಸಹ ಆಟಗಾರ ಮಿಲ್ಲರ್‌ಕೂಡ ನಿರಾಶೆಯನ್ನು ವ್ಯಕ್ತಪಡಿಸಿದರು. 'ಕುತೂಹಲಕಾರಿಯಾಗಿ, ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ನಂತರ ಇಂಗ್ಲೆಂಡ್ ತಂಡವು ಸೋಲನುಭವಿಸಿ ಇಂದು ರಾತ್ರಿ ಚಾರ್ಟರ್ಡ್ ವಿಮಾನದಲ್ಲಿ ಮನೆಗೆ ಮರಳಿತು. ಆದರೆ ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ಇನ್ನೂ ಕೋಲ್ಕತ್ತಾದಲ್ಲಿ ತಮ್ಮ ಪ್ರತಿಕ್ರಿಯೆಗಾಗಿ ಕಾಯುತ್ತಿವೆ' ಎಂದು ಇಎಸ್‌ಪಿಎನ್ ಕ್ರಿಕ್‌ಇನ್ಫೋ ಪೋಸ್ಟ್‌ನ ಕಾಮೆಂಟ್‌ಗಳ ವಿಭಾಗದಲ್ಲಿ ಮಿಲ್ಲರ್ ಬರೆದಿದ್ದಾರೆ.

ಎರಡು ಬಾರಿ ವಿಶ್ವಕಪ್ ಗೆದ್ದ ವೆಸ್ಟ್ ಇಂಡೀಸ್ ತಂಡದ ಮಾಜಿ ನಾಯಕ ಮತ್ತು ಪ್ರಸ್ತುತ ಮುಖ್ಯ ತರಬೇತುದಾರ ಡ್ಯಾರೆನ್ ಸ್ಯಾಮಿ ಕೂಡ ಈ ವಿಷಯದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. 'ಡೇವಿಡ್ ಮಿಲ್ಲರ್, ದಯವಿಟ್ಟು ನಿಮ್ಮ ಹಿಂದಿರುವ ಜನರಿಗೆ ಕೇಳಿಸುವಂತೆ ಸ್ವಲ್ಪ ಜೋರಾಗಿ ಮಾತನಾಡಿ' ಎಂದು ಸ್ಯಾಮಿ ಬರೆದಿದ್ದಾರೆ. ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾಕ್ಕಿಂತ ಮೊದಲು ಇಂಗ್ಲೆಂಡ್ ತಂಡವನ್ನು ಮನೆಗೆ ಕಳುಹಿಸುವ ಐಸಿಸಿ ನಿರ್ಧಾರವನ್ನು ಇಂಗ್ಲೆಂಡ್‌ನ ಮಾಜಿ ನಾಯಕ ಮೈಕೆಲ್ ವಾಘನ್ ಪ್ರಶ್ನಿಸಿದ್ದಾರೆ.' ಗುರುವಾರ ಇಂಗ್ಲೆಂಡ್ ಸೋತಿತು. ಇಂದು ಚಾರ್ಟರ್ಡ್ ವಿಮಾನದಲ್ಲಿ ಮನೆಗೆ ಹಾರುತ್ತಿದೆ. ವೆಸ್ಟ್ ಇಂಡೀಸ್ ಕಳೆದ ಭಾನುವಾರ ಸೋತಿತು ಮತ್ತು ಇನ್ನೂ ಕೋಲ್ಕತ್ತಾದಲ್ಲಿದೆ... ದಕ್ಷಿಣ ಆಫ್ರಿಕಾ ಅದೇ ಪರಿಸ್ಥಿತಿಯಲ್ಲಿದೆ. ಇಲ್ಲಿಯೇ ಬಲಾಬಲಗಳು ಸಂಪೂರ್ಣವಾಗಿ ತಪ್ಪಾಗಿದೆ' ಎಂದು ವಾಘನ್ ಎಕ್ಸ್‌ನಲ್ಲಿ ಬರೆದಿದ್ದಾರೆ. 'ಈ ಪರಿಸ್ಥಿತಿಯಲ್ಲಿ, ಎಲ್ಲಾ ತಂಡಗಳನ್ನು ಸಮಾನವಾಗಿ ಪರಿಗಣಿಸಬೇಕು. ಐಸಿಸಿಯಲ್ಲಿ ನಿಮಗೆ ಹೆಚ್ಚಿನ ಅಧಿಕಾರವಿದೆ ಎಂಬ ಕಾರಣಕ್ಕಾಗಿ, ನಿಮಗೆ ಅನುಕೂಲ ಸಿಗಬಾರದು' ಎಂದು ಅವರು ಹೇಳಿದರು. ವೆಸ್ಟ್ ಇಂಡೀಸ್ ಮತ್ತು ದಕ್ಷಿಣ ಆಫ್ರಿಕಾ ಜೋಹಾನ್ಸ್‌ಬರ್ಗ್‌ಗೆ ಹಾರುವ ನಿರೀಕ್ಷೆಯಿದೆ. ನಂತರ ವೆಸ್ಟ್ ಇಂಡೀಸ್ ತಂಡವು ಆಂಟಿಗುವಾಗೆ ತೆರಳಲಿದೆ. ತಂಡದ ನಿರ್ವಹಣಾ ಸದಸ್ಯರು ಮತ್ತು ಆಟಗಾರರಾದ ಕೇಶವ್ ಮಹಾರಾಜ್, ಜೇಸನ್ ಸ್ಮಿತ್ ಮತ್ತು ಜಾರ್ಜ್ ಲಿಂಡೆ ಸೇರಿದಂತೆ ದಕ್ಷಿಣ ಆಫ್ರಿಕಾ ತಂಡದ ಕೆಲವು ಸದಸ್ಯರು ಮಾರ್ಚ್ 15 ರಿಂದ ಪ್ರಾರಂಭವಾಗುವ ಸೀಮಿತ ಓವರ್‌ಗಳ ಪ್ರವಾಸಕ್ಕಾಗಿ ಭಾನುವಾರ ನ್ಯೂಜಿಲೆಂಡ್‌ಗೆ ತೆರಳಲಿದ್ದಾರೆ.


ಪಂಚಮ ಪುಣ್ಯಸ್ಮರಣೆ



D.O.B: 08-10-1948

D.O.D: 09-03-2021

Shri NARAYAN G. POOJARI, Palimar

(Suyog Nagar, Vasai West)

ಉದಾತ್ತ ಗುಣಗಳೊಂದಿಗೆ, ಸಹೃದಯತೆಯಿಂದ ಎಲ್ಲರ ಪ್ರೀತಿ, ವಿಶ್ವಾಸ ಗಳಿಸಿ, ಆದರ್ಶ ವ್ಯಕ್ತಿಯಾಗಿ ಎಲ್ಲರ ಮನವನ್ನು ಗೆದ್ದ ನಿಮ್ಮ ಜೀವನದ ಪ್ರತಿ ಕ್ಷಣಗಳು ಸ್ಮರಣೀಯ. ನೀವು ನಮ್ಮನ್ನಗಲಿ ವರುಷ 5 ಸಂದರೂ ಸದಾ ನಿಮ್ಮನ್ನು ಸ್ಮರಿಸುವ,

Smt. Sumita N. Poojari (Wife)
Children, Son-in-law,
Daughters-in-law,
Grandchildren, Brother
& ALL FAMILY MEMBERS


# ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್: ಫೈನಲ್‌ನಲ್ಲಿ ಎಡವಿದ ಲಕ್ಷ್ಯ ಸೇನ್



ಬರ್ಮಿಂಗ್‌ಹ್ಯಾಮ್, ಮಾ.8 - ಭಾರತದ ಯುವ ತಾರೆ ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಫೈನಲ್‌ನಲ್ಲಿ ಸೋಲನ್ನು ಅನುಭವಿಸಿದರು. ಅವರನ್ನು ಚೈನೀಸ್ ತೈಪೆಯ ಲಿನ್ ಚುನ್ ಯಿ 21-15, 22-20 ನೇರ ಗೇಮ್‌ಗಳಿಂದ ಸೋಲಿಸಿದರು. ಲಕ್ಷ್ಯ ಸೇನ್ ಆಲ್ ಇಂಗ್ಲೆಂಡ್ ಫೈನಲ್‌ನಲ್ಲಿ ಸೋತಿರುವುದು ಇದು ಎರಡನೇ ಬಾರಿ. 2022 ರಲ್ಲಿ ಅವರು ಪ್ರಶಸ್ತಿ ಪಂದ್ಯದಲ್ಲೂ ಸೋತರು. ಲಕ್ಷ್ಯ ಅವರ ಸೋಲು ಈ ಟೂರ್ನಿಯನ್ನು ಗೆಲ್ಲುವ ಭಾರತೀಯರಿಗಾಗಿ 25 ವರ್ಷಗಳ ಕಾಯುವಿಕೆಯನ್ನು ಮುಂದುವರೆಸಿದೆ. ಲಿನ್ ಚುನ್ ಯಿ 2026 ರಲ್ಲಿ ತಮ್ಮ ಎರಡನೇ ಪ್ರಶಸ್ತಿಯನ್ನು ಗೆದ್ದರು. ಜನವರಿಯಲ್ಲಿ ಅವರು ಇಂಡಿಯಾ ಓಪನ್ ಗೆದ್ದರು. ಲಿನ್ ಚುನ್ ಯಿ ಲಕ್ಷ್ಯ ಅವರನ್ನು ಐದನೇ ಬಾರಿಗೆ ಸೋಲಿಸಿದರು. ಇದಕ್ಕೂ ಮೊದಲು, ಇಬ್ಬರೂ ನಾಲ್ಕು ಬಾರಿ ಮುಖಾಮುಖಿಯಾಗಿದ್ದರು, ಮತ್ತು ಚೈನೀಸ್ ತೈಪೆ ಆಟಗಾರ ಪ್ರತಿ ಬಾರಿಯೂ ಜಯಗಳಿಸಿದ್ದರು. ಲಕ್ಷ್ಯ ಈ ಪಂದ್ಯಾವಳಿಯಲ್ಲಿ ಗಮನಾರ್ಹ ಪ್ರದರ್ಶನ ನೀಡಿದರು, ನಂಬರ್‌ಒನ್ ಶಿ ಯುಕಿ, ಆರನೇ ಶ್ರೇಯಾಂಕದ ಲಿ ಶಿಫೆಂಗ್ ಮತ್ತು ವಿಕ್ಟರ್‌ಲೈ ಅವರನ್ನು ಸೋಲಿಸಿದರು. ಫೈನಲ್‌ನಲ್ಲಿ ಭಾರತೀಯ ಬ್ಯಾಡ್ಮಿಂಟನ್ ತಾರೆ ಎದುರಿಸಿದ ಆಟಗಾರ 11 ನೇ ಶ್ರೇಯಾಂಕದವರು. ಆಲ್ ಇಂಗ್ಲೆಂಡ್ ಫೈನಲ್‌ಗೆ ಎರಡು ಬಾರಿ ತಲುಪಿದ ಮೂರನೇ ಭಾರತೀಯ ಎಂಬ ಹೆಗ್ಗಳಿಕೆ ಲಕ್ಷ್ಯ ಅವರದು.

# 25 ಮೀಟರ್‌ಪಿಸ್ತೂಲ್ ಟಿ3 ಟ್ರಯಲ್ಸ್: ಅರ್ಷದೀಪ್ ಕೌರ್‌ಗೆ ಚಿನ್ನ




ಹೊಸದಿಲ್ಲಿ, ಮಾ.8 - ರಾಷ್ಟ್ರೀಯ ಆಯ್ಕೆ ಟ್ರಯಲ್ಸ್‌ನಲ್ಲಿ (ಗುಂಪು ಎ) 25 ಮೀಟರ್‌ಮಹಿಳಾ ಪಿಸ್ತೂಲ್ ಸ್ಪರ್ಧೆಯಲ್ಲಿ ಅರ್ಷದೀಪ್ ಕೌರ್ ಅವರು ಡಬಲ್ ಒಲಿಂಪಿಕ್ ಪದಕ ವಿಜೇತೆ ಮನು ಭಾಕರ್‌ಸೇರಿದಂತೆ ಅಗ್ರ ಶೂಟರ್‌ಗಳನ್ನು ಸೋಲಿಸಿ ಚಿನ್ನದ ಪದಕ ಗೆದ್ದರು.

ಅರ್ಹತಾ ಸುತ್ತಿನಲ್ಲಿ ಎಂಟನೇ ಸ್ಥಾನ ಗಳಿಸಿ ಫೈನಲ್‌ಗೆ ತಲುಪಿದ ಪಂಜಾಬ್ ಶೂಟರ್, ಎಂಟು ಶೂಟರ್‌ಗಳ ಫೈನಲ್‌ನಲ್ಲಿ ಅನುಭವಿ ದಿವ್ಯಾ ಟಿಎಸ್ ಅವರನ್ನು 37-36 ಅಂತರದಿಂದ ಸೋಲಿಸುವ ಮೂಲಕ ಅಗ್ರಸ್ಥಾನ ಪಡೆದರು.

ಏಷ್ಯನ್ ಗೇಮ್ಸ್‌ನ ಮಾಜಿ ಚಾಂಪಿಯನ್ ರಾಹಿ ಸರ್ನೋಬತ್ 33 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ಸರ್ನೋಬತ್‌ರನ್ನು ಈ ಹಿಂದೆ ಶೂಟ್-ಆಫ್‌ನಲ್ಲಿ ದಿವ್ಯಾ ಸೋಲಿಸಿದ್ದರು. ಫೈನಲ್‌ನಲ್ಲಿ ಮನು ಆರನೇ ಸ್ಥಾನ ಪಡೆದರು. ಎರಡು ದಿನಗಳ ಅರ್ಹತಾ ಸುತ್ತಿನಲ್ಲಿ ಒಟ್ಟು 582 ಅಂಕಗಳೊಂದಿಗೆ (ಪ್ರಿಸಿಷನ್ 287, ರ್‍ಯಾಪಿಡ್ 295) ಪ್ರಿಸಿಷನ್ ಮತ್ತು ರ್‍ಯಾಪಿಡ್ ಹಂತದಲ್ಲಿ ಅಗ್ರಸ್ಥಾನ ಪಡೆದ ನಂತರ ಅವರು ಫೈನಲ್ ಪ್ರವೇಶಿಸಿದರು.

ಸರ್ನೋಬತ್ (ಪ್ರಿಸಿಷನ್ 292, ರ್‍ಯಾಪಿಡ್ 288) ಮತ್ತು ದಿವ್ಯಾ (ಪ್ರಿಸಿಷನ್ 290, ರ್‍ಯಾಪಿಡ್ 290) ಇಬ್ಬರೂ ಒಂದೇ ರೀತಿಯ 580 ಅಂಕಗಳನ್ನು ಗಳಿಸಿದರು, ಆದರೆ ಸರ್ನೋಬತ್ 'ಎಕ್ಸ್' (ಬುಲ್ಸ್ ಐ) ಗಿಂತ ಹೆಚ್ಚಿನ ಹೊಡೆತಗಳನ್ನು ಹೊಡೆದ ಕಾರಣ ಎರಡನೇ ಸ್ಥಾನ ಪಡೆದರು. ಸರ್ನೋಬತ್ 'ಎಕ್ಸ್' ಹೊಡೆತಗಳಲ್ಲಿ 20 ಬಾರಿಸಿದರೆ, ದಿವ್ಯಾ 13 ಬಾರಿಸಿದರು.

ಅರ್ಷದೀಪ್ ಒಟ್ಟು 575 (ಪ್ರಿಸಿಷನ್ 285, ರ್‍ಯಾಪಿಡ್ 290) ಗಳೊಂದಿಗೆ ಎಂಟನೇ ಸ್ಥಾನ ಪಡೆದರು.

# ಭಾರತ ಮೂಲದ ವಿನ್ಯಾಸಕರಿಂದ ಸಿದ್ಧವಾಗಿದೆ ಟಿ20 ವಿಶ್ವಕಪ್ ಟ್ರೋಫಿ



ಅಹಮದಾಬಾದ್, ಮಾ.8 - ಭಾರತ ಹಾಗೂ ನ್ಯೂಜಿಲೆಂಡ್ ತಂಡಗಳ ನಡುವೆ ಟಿ20 ವಿಶ್ವಕಪ್‌ನ ಫೈನಲ್ 2026ರ ಪಂದ್ಯವು ಇಂದು (ಮಾರ್ಚ್ 08) ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದಿದ್ದು, ಇನ್ನೂ ಈ ವಿಶ್ವಕಪ್ ಟ್ರೋಫಿಯು ಭಾರತದ ಜೈಪುರ ಮೂಲದ ವಿನ್ಯಾಸಕರು ತಯಾರಿಸಿದ್ದಾರೆ ಎಂಬುದು ವಿಶೇಷ.

ಜೈಪುರ ಮೂಲದ ಪ್ರಸಿದ್ಧ ಟ್ರೋಫಿ ವಿನ್ಯಾಸಕರಾದ ಅಮಿತ್ ಪಬುವಾಲ್ ಅವರು ಟಿ20 ವಿಶ್ವಕಪ್‌ನ ಟ್ರೋಫಿ ತಯಾರಿಸಿದ್ದಾರೆ. ಟಿ20 ವಿಶ್ವಕಪ್‌ನ ಆರಂಭದ ಚೊಚ್ಚಲ ಟ್ರೋಫಿ ಆಸ್ಟ್ರೇಲಿಯಾ ಮೂಲದ ಮಿನೇಲ್ ಬ್ರೈಸ್ ಅವರ ಪರಿಕಲ್ಪನೆಯಲ್ಲಿ ಸಿದ್ದವಾಗಿತ್ತು. 2007ರಲ್ಲಿ ಟ್ರೋಫಿಯ ಮೊದಲ ವಿನ್ಯಾಸ ಹಾಗೂ ರೂಪರೇಷೆಯನ್ನು ಮಿನೇಲ್ ಬ್ರೈಸ್ ಅವರು ಸಿದ್ದಪಡಿಸಿದ್ದರು. ಅವರು ಈ ಹಿಂದೆ ವಿಶ್ವದ ಅತಿದೊಡ್ಡ ಬೆಳ್ಳಿ ಕಪ್ ಆದ 'ಫ್ರೆಂಡ್‌ಶಿಪ್ ಕಪ್' ಎಂಬ ಟ್ರೋಫಿಯನ್ನು ವಿನ್ಯಾಸಗೊಳಿಸಿದ್ದರು. ನಂತರ ಅವರಿಗೆ ಐಸಿಸಿ ಟಿ20 ವಿಶ್ವಕಪ್ ಟ್ರೋಫಿಯನ್ನು ವಿನ್ಯಾಸಗೊಳಿಸುವ ಆಹ್ವಾನ ದೊರೆಯಿತು ಎಂದು ಹೇಳಿದ್ದಾರೆ. 'ಆರಂಭದಲ್ಲಿ ಟ್ರೋಫಿಯನ್ನು ಟೈಟಾನಿಯಂ ಹಾಗೂ ಗಾಜು ಬಳಸಿ ತಯಾರಿಸಲು ನಿರ್ಧರಿಸಲಾಗಿತ್ತು. ಅದರಂತೆ ಟ್ರೋಫಿಯ ಹಲವು ಮಾದರಿಗಳನ್ನು ಸಿದ್ದಪಡಿಸಲಾಗಿತ್ತು. ಆದರೆ ಲೋಹದೊಂದಿಗೆ ಗಾಜನ್ನು ಸಂಯೋಜಿಸಿ ತಯಾರಿಸಲಾದ ಟ್ರೋಫಿ ಬೇಗನೆ ಒಡೆಯುತ್ತಿದ್ದ ಕಾರಣಕ್ಕಾಗಿ ಮೊದಲ ಪರಿಕಲ್ಪನೆಯನ್ನು ಕೈಬಿಡಲಾಯಿತು' ಎಂದು ಅಮಿತ್ ಪಬುವಾಲ್ ಹೇಳಿದ್ದಾರೆ. ಅಂತಿಮವಾಗಿ ಬೆಳ್ಳಿ ಮತ್ತು ಪ್ಲಾಟಿನಂ ಸಂಯೋಗದಲ್ಲಿ ಟ್ರೋಫಿಯನ್ನು ತಯಾರಿಸಲು ನಿರ್ಧರಿಸಲಾಯಿತು. ಟಿ20 ವಿಶ್ವಕಪ್‌ಗಾಗಿ ತಯಾರಿಸಲಾದ ಮೂಲ ಟ್ರೋಫಿ ಐಸಿಸಿ ಕಚೇರಿಯಲ್ಲಿ ಇಂದಿಗೂ ಇದೆ. ಟ್ರೋಫಿಯ ಪ್ರತಿಕೃತಿಯನ್ನು ಗೆದ್ದ ತಂಡಕ್ಕೆ ನೀಡಲಾಗುತ್ತದೆ ಎಂದು ಅವರು ಹೇಳಿದ್ದಾರೆ. ಟಿ20 ವಿಶ್ವಕಪ್‌ನ ಟ್ರೋಫಿ ಸುಮಾರು 21 ಇಂಚು ಎತ್ತರ, 6 ಕೆ.ಜಿ ತೂಕವಿರಲಿದೆ. ಟ್ರೋಫಿಯನ್ನು ಬೆಳ್ಳಿಯಿಂದ ತಯಾರಿಸಿದ್ದು. ಪ್ಲಾಟಿನಂ ಲೇಪನ ಮಾಡಲಾಗುತ್ತದೆ.

# ಮಾರ್ಚ್ 25-27ರ ದೋಹಾ ಸಭೆಯನ್ನು ಮುಂದೂಡಿದ ಐಸಿಸಿ



ದುಬೈ, ಮಾ.8 - ಕತಾರ್‌ನ ದೋಹಾದಲ್ಲಿ ಮಾರ್ಚ್ 25-27 ರಂದು ನಿಗದಿಯಾಗಿದ್ದ ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿಯ (ಐಸಿಸಿ) ಸಭೆಯನ್ನು ಈ ಪ್ರದೇಶದಲ್ಲಿ ನಡೆಯುತ್ತಿರುವ ಯುದ್ಧದ ದೃಷ್ಟಿಯಿಂದ ಮುಂದೂಡಲಾಗಿದೆ. ಹೊಸ ದಿನಾಂಕವನ್ನು ಇನ್ನೂ ಘೋಷಿಸಲಾಗಿಲ್ಲವಾದರೂ, ಎಪ್ರಿಲ್‌ನಲ್ಲಿ ಸಭೆಯನ್ನು ಮತ್ತೆ ಕರೆಯುವ ನಿರೀಕ್ಷೆಯಿದೆ.

ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದಿಂದಾಗಿ ಮುಂದೂಡಿಕೆ ಅನಿವಾರ್ಯವಾಗಿತ್ತು ಮತ್ತು ಅಹಮದಾಬಾದ್‌ನಲ್ಲಿ ನಡೆದ ಟಿ20 ವಿಶ್ವಕಪ್ ಫೈನಲ್‌ಗೆ ಹಿಂದಿನ ದಿನ ಶನಿವಾರ ಸದಸ್ಯರಿಗೆ ಔಪಚಾರಿಕ ಸಂವಹನವನ್ನು ಕಳುಹಿಸಲಾಯಿತು. ಐಸಿಸಿ, ಮತ್ತೊಂದು ಸ್ಥಳವನ್ನು ಹುಡುಕುತ್ತಿದೆ ಎಂದು ತಿಳಿದುಬಂದಿದೆ.

ಕತಾರ್‌ನಲ್ಲಿ ಕ್ರಿಕೆಟ್ ಇತ್ತೀಚಿನ ವರ್ಷಗಳಲ್ಲಿ ಕ್ರೀಡೆಗೆ ಗಮನಾರ್ಹ ಪ್ರಗತಿಗೆ ಕಾರಣವಾಗಿದೆ ಈ ನಿಟ್ಟಿನಲ್ಲಿ ಅಲ್ಲಿನ ಕ್ರಿಕೆಟ್ ಮಂಡಳಿಗೆ ಹೆಚ್ಚಿನ ಉತ್ತೇಜನ ಸಿಗುವಂತಾಗಲು ಸಭೆಯನ್ನು ಇಲ್ಲಿ ನಡೆಸಲು ಐಸಿಸಿ ತೀರ್ಮಾನಿಸಿತ್ತು.

ಆದಾಗ್ಯೂ, ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಅಧ್ಯಕ್ಷ ಅಮೀನುಲ್ ಇಸ್ಲಾಂ ಸಭೆಯಲ್ಲಿ ಭಾಗವಹಿಸುವ ಬಗ್ಗೆ ತಕ್ಷಣದ ಮಾಹಿತಿ ಇಲ್ಲ. ಅವರು ಮೆಲ್ಬೋರ್ನ್‌ನಲ್ಲಿದ್ದಾರೆ ಎಂದು ನಂಬಲಾಗಿದೆ. ಪಾಕಿಸ್ತಾನ ಕ್ರಿಕೆಟ್ ಮಂಡಳಿಯ (ಪಿಸಿಬಿ) ಅಧ್ಯಕ್ಷ ಮೋಹ್ಸಿನ್ ನಖ್ವಿ ಇಲ್ಲಿ ಇರುವುದಿಲ್ಲ.

ಈ ಸಭೆಯು ಐಸಿಸಿ ಮಂಡಳಿ ನಿರ್ದೇಶಕರು, ಮುಖ್ಯ ಕಾರ್ಯನಿರ್ವಾಹಕರು, ಸಮಿತಿ ಸದಸ್ಯರು ಮತ್ತು ಹಿರಿಯ ನಾಯಕತ್ವವನ್ನು ಸಂಸ್ಥೆಯ ನಡೆಯುತ್ತಿರುವ ಆಡಳಿತ ಕ್ಯಾಲೆಂಡರ್‌ನ ಭಾಗವಾಗಿ ಒಟ್ಟುಗೂಡಿಸುವ ಉದ್ದೇಶವನ್ನು ಹೊಂದಿತ್ತು. ಇದು ಜಾಗತಿಕ ಆಟದ ಪ್ರಸ್ತುತ ಮತ್ತು ಭವಿಷ್ಯಕ್ಕೆ ಸಂಬಂಧಿಸಿದ ಪ್ರಮುಖ ವಿಷಯಗಳ ಕುರಿತು ಚರ್ಚಿಸಲು ಪ್ರಮುಖ ಅವಕಾಶವನ್ನು ಒದಗಿಸುತ್ತದೆ.

# ಪಂತ್ ಜೊತೆ ಕಾಣಿಸಿಕೊಂಡ ಯುವರಾಜ್ ಸಿಂಗ್; ಐಪಿಎಲ್ 2026ಕ್ಕೂ ಮುನ್ನ ಮೆಂಟರ್‌ಆಗಿ ಎಲ್‌ಎಸ್‌ಜಿ ಸೇರ್ಪಡೆ?



ಹೊಸದಿಲ್ಲಿ, ಮಾ.8 - ಯುವರಾಜ್ ಸಿಂಗ್ ಬಹುಶಃ ಭಾರತ ಕಂಡ ಅತ್ಯಂತ ಪ್ರತಿಭಾನ್ವಿತ ವೈಟ್-ಬಾಲ್ ಕ್ರಿಕೆಟಿಗ. ಇದೀಗ ಇಂದು ನಡೆಯಲಿರುವ ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಟಿ20 ವಿಶ್ವಕಪ್ 2026ರ ಫೈನಲ್ ಪಂದ್ಯದತ್ತ ಎಲ್ಲರ ಚಿತ್ತ ನೆಟ್ಟಿದೆ. ಅವರು ಈಗಾಗಲೇ ಭಾರತಕ್ಕಾಗಿ ಟಿ20ಐ ಮತ್ತು ಏಕದಿನ ವಿಶ್ವ ಕಪ್ ಎರಡನ್ನೂ ಗೆದ್ದಿದ್ದಾರೆ. ಇದೀಗ, ವಿಶ್ವಕಪ್ ನಂತರದ ಮುಂಬರುವ ಅತಿದೊಡ್ಡ ಪಂದ್ಯಾವಳಿಗೆ ಪುನರಾಗಮನವನ್ನು ಮಾಡಲು ಸಿದ್ಧವಾಗಿದ್ದಾರೆ.

ಇಂಡಿಯನ್ ಪ್ರೀಮಿಯರ್‌ಲೀಗ್ (ಐಪಿಎಲ್) 19ನೇ ಆವೃತ್ತಿ ಮುಂದಿನ 20 ದಿನಗಳಲ್ಲಿ ಪುನರಾರಂಭಗೊಳ್ಳಲಿದೆ. ಇತ್ತೀಚೆಗೆ, ಯುವರಾಜ್ ಸಿಂಗ್ ಲಕ್ನೋ ಸೂಪರ್‌ಜೈಂಟ್ಸ್ (ಎಲ್‌ಎಸ್‌ಜಿ) ನಾಯಕ ಮತ್ತು ಭಾರತದ ಸದ್ಯದ ಸೂಪರ್‌ಸ್ಟಾರ್‌ರಿಷಭ್ ಪಂತ್ ಅವರೊಂದಿಗೆ ಕಾಣಿಸಿಕೊಂಡಿದ್ದಾರೆ. ವಾಸ್ತವವಾಗಿ, ತರಬೇತಿ ಪಡೆಯುತ್ತಿರುವಾಗ ಪಂತ್ ಅವರು ಯುವರಾಜ್ ಅವರೊಂದಿಗೆ ಮಾತನಾಡುತ್ತಿರುವ ಚಿತ್ರವನ್ನು ಸ್ವತಃ ಲಕ್ನೋ ಸೂಪರ್‌ಜೈಂಟ್ಸ್ ಪೋಸ್ಟ್ ಮಾಡಿದೆ. 'ಐಪಿಎಲ್ 2026, ಸಿದ್ಧರಾಗಿ' ಎಂಬ ಶೀರ್ಷಿಕೆಯೊಂದಿಗೆ ಪೋಸ್ಟ್ ಮಾಡಿದೆ.

ಈ ಪೋಸ್ಟ್ ವಿವಿಧ ಊಹಾಪೋಹಗಳಿಗೆ ಕಾರಣವಾಗಿದೆ. ಯುವರಾಜ್ ಸಿಂಗ್ ಇದೀಗ ಲಕ್ನೋ ಫ್ರಾಂಚೈಸಿಗೆ ಸೇರುವ ಸಾಧ್ಯತೆ ಹೆಚ್ಚಿದೆ. ಟಿ20 ವಿಶ್ವಕಪ್ ಟೂರ್ನಿಗೆ ಮೊದಲು ಸಂಜು ಸ್ಯಾಮ್ಸನ್‌ರಂತಹ ಆಟಗಾರರಿಗೆ ಮಾರ್ಗದರ್ಶನ ನೀಡಿದ ಅನುಭವವಿರುವುದರಿಂದ, ಯುವರಾಜ್ ಸಿಂಗ್ ಲಕ್ನೋ ಫ್ರಾಂಚೈಸಿಗೆ ಸೇರಿ ಪಂತ್‌ಗೆ ತರಬೇತಿ ನೀಡುವ ಸಾಧ್ಯತೆ ಇದೆ.

ಆದಾಗ್ಯೂ, ಯುವರಾಜ್ ಎಲ್‌ಎಸ್‌ಜಿಗೆ ಸೇರುವ ವದಂತಿಗಳು ಹೊಸದೇನಲ್ಲ. ಕಳೆದ ವರ್ಷ, ಯುವರಾಜ್ ಎಲ್‌ಎಸ್‌ಜಿ ಜೊತೆ ಗಂಭೀರ ಮಾತುಕತೆ ನಡೆಸುತ್ತಿದ್ದಾರೆ ಎಂದು ಇನ್‌ಸೈಡ್‌ಸ್ಪೋರ್ಟ್ ಬಹಿರಂಗಪಡಿಸಿತು. ಮಾಜಿ ಆಲ್‌ರೌಂಡರ್ ತಂಡದ ಮುಖ್ಯ ಕೋಚ್ ಆಗಬೇಕೆಂದು ಫ್ರಾಂಚೈಸಿ ಬಯಸಿತ್ತು. ಈ ನಡೆ ಎಂದಿಗೂ ಫಲಪ್ರದವಾಗದಿದ್ದರೂ, ಎಲ್‌ಎಸ್‌ಜಿ ತಮ್ಮ ಶಿಬಿರದ ಭಾಗವಾಗಿ ಯುವರಾಜ್ ಅವರನ್ನು ಹೊಂದಬೇಕೆಂಬ ಬಯಕೆ ಇನ್ನೂ ಕಡಿಮೆಯಾಗಿಲ್ಲ.

ಐಪಿಎಲ್ 2025ನೇ ಆವೃತ್ತಿ ಎಲ್‌ಎಸ್‌ಜಿ ಪಾಲಿಗೆ ಅಂದುಕೊಂಡಷ್ಟು ಉತ್ತಮವಾಗಿರಲಿಲ್ಲ. ರಿಷಭ್ ಪಂತ್ ನಾಯಕತ್ವದಲ್ಲಿ ಎಲ್‌ಎಸ್‌ಜಿ 14 ಪಂದ್ಯಗಳಲ್ಲಿ ಕೇವಲ 6 ಗೆಲುವುಗಳೊಂದಿಗೆ ಅಂಕಪಟ್ಟಿಯಲ್ಲಿ ಏಳನೇ ಸ್ಥಾನ ಪಡೆಯುವ ಮೂಲಕ ಈ ಆವೃತ್ತಿಯಲ್ಲಿ ಅಭಿಯಾನವನ್ನು ಮುಗಿಸಿತು. ಜಹೀರ್‌ಖಾನ್ ಐಪಿಎಲ್ 2025ನೇ ಆವೃತ್ತಿಗಾಗಿ ಒಂದು ವರ್ಷದ ಅವಧಿಗೆ ಒಪ್ಪಂದಕ್ಕೆ ಸಹಿ ಹಾಕಿದ್ದರು. ಐಪಿಎಲ್ 2025ರ ಮೆಗಾ ಹರಾಜಿಗೂ ಮುಂಚಿತವಾಗಿ ಜಹೀರ್‌ಖಾನ್ ಅವರನ್ನು ತಂಡದ ಮೆಂಟರ್‌ಆಗಿ ನೇಮಿಸಿಕೊಳ್ಳಲಾಗಿತ್ತು. ಕಳಪೆ ಪ್ರದರ್ಶನದ ನಂತರ ಜಹೀರ್‌ಖಾನ್ ಅವರನ್ನು ಕೈಬಿಡಲಾಗಿತ್ತು.

ನಂತರ ಈ ಹಿಂದೆ ಟೀಂ ಇಂಡಿಯಾ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ (ಕೆಕೆಆರ್) ಜೊತೆಗಿದ್ದ ಭರತ್ ಅರುಣ್ ಅವರನ್ನು ಬೌಲಿಂಗ್ ಕೋಚ್ ಆಗಿ ನೇಮಿಸಿಕೊಳ್ಳಲಾಯಿತು. ಈಮಧ್ಯೆ, ಕಾರ್ಲ್ ಕ್ರೋವ್ ಎಲ್‌ಎಸ್‌ಜಿ ತಂಡದ ಸ್ಪಿನ್ ಬೌಲಿಂಗ್ ಕೋಚ್ ಆಗಿ ಸೇರಿಕೊಂಡಿದ್ದಾರೆ.

ಕೇನ್ ವಿಲಿಯಮ್ಸನ್ ಕೂಡ ಕಾರ್ಯತಂತ್ರದ ಸಲಹೆಗಾರರಾಗಿ ಆಯ್ಕೆಯಾಗಿರುವುದರಿಂದ, ರಿಷಭ್ ಪಂತ್ ನೇತೃತ್ವದ ತಂಡವು ಅನುಭವಿ ಮತ್ತು ಕ್ರಿಕೆಟ್ ಪ್ರತಿಭೆಗಳಿಂದ ತುಂಬಿದೆ. ಜಹೀರ್ ಬದಲಿಗೆ ಯುವರಾಜ್ ಅವರಂತಹ ವ್ಯಕ್ತಿಯನ್ನು ತಂಡದ ಮೆಂಟರ್‌ರನ್ನಾಗಿ ಸೇರುವಂತೆ ಎಲ್‌ಎಸ್‌ಜಿ ಬಯಸುತ್ತದೆ.




|| ಶ್ರೀ ಮಹಾವಿಷ್ಣುಃ ಪ್ರಸನ್ನಃ || ಶ್ರೀ ಮಹಾಗಣಪತಿಃ ಪ್ರಸನ್ನಃ || ಶ್ರೀ ದುರ್ಗಾಪರಮೇಶ್ವರೀ ಪ್ರಸನ್ನಾ ||

ಬಂಟರ ಸಂಘ ಮುಂಬಯಿ

ಶ್ರೀ ಮಹಾವಿಷ್ಣು ದೇವಸ್ಥಾನ -ಜ್ಞಾನ ಮಂದಿರ ಸಮಿತಿ

ಪ್ರಿಯ ಭಗವದ್ಭಕ್ತರೇ, ಸ್ವಸ್ತಿ । ಶ್ರೀ ವಿಶ್ವಾವಸು ನಾಮ ಸಂವತ್ಸರದ ಕುಂಭ ಮಾಸ ಫಾಲ್ಗುಣ ಬಹುಳ ಸೋಮವಾರ ದಿನಾಂಕ 09.03.2026 ರಿಂದ ಬುಧವಾರ 11.03.2026 ರ ವರೆಗೆ ಶ್ರೀ ಮಹಾವಿಷ್ಣು ಮಂದಿರದಲ್ಲಿ ಶ್ರೀ ದೇವರ 22ನೇ ವರ್ಷದ

ವರ್ಷಾವಧಿ ಜಾತ್ರಾ ಮಹೋತ್ಸವ'ವು

ಬ್ರಹ್ಮಶ್ರೀ ಕೊಲ್ಲೂರು ಶ್ರೀ ನಂದಕುಮಾರ ತಂತ್ರಿಗಳವರ ಮಾರ್ಗದರ್ಶನದಂತೆ ಪೆರ್ಡೂರು ಶ್ರೀ ನಾಗೇಂದ್ರ ಭಟ್‌ರವರ ಪೌರೋಹಿತ್ಯದೊಂದಿಗೆ ಜರಗಲಿರುವುದು.

ಧಾರ್ಮಿಕ ಕಾರ್ಯಕ್ರಮಗಳು

ತಾ. 09.03.2026 ಸೋಮವಾರದಂದು
ಬೆಳಿಗ್ಗೆ 9.00ರಿಂದ ಸಂಜೆ 6.00 ರವರೆಗೆ - ಸರಣಿ ಭಜನೆ (ವಿವಿಧ ಭಜನಾ ಮಂಡಳಿಯವರಿಂದ)
ಬೆಳಿಗ್ಗೆ 10.00 ರಿಂದ- ದೇವತಾ ಪ್ರಾರ್ಥನೆ, ತೋರಣ ಪ್ರತಿಷ್ಠೆ, ಗಣಪತಿ ಹೋಮ.
ಮಧ್ಯಾಹ್ನ 1.00 ರಿಂದ 2.00 ರವರೆಗೆ - ಅನ್ನಸಂತರ್ಪಣೆ.
ಸಂಜೆ 6.00 ರಿಂದ - ವಾಸ್ತುಪೂಜೆ, ವಾಸ್ತುಹೋಮ, ವಾಸ್ತು ಬಲಿ.
ಸಂಜೆ 6.00 ರಿಂದ 7.15 ರವರೆಗೆ- ಸಾಮೂಹಿಕ ಸತ್ಯನಾರಾಯಣ ಪೂಜೆ.
ರಾತ್ರಿ 8.00 ರಿಂದ - ಅನ್ನಸಂತರ್ಪಣೆ.

ತಾ. 10.03.2026 ಮಂಗಳವಾರದಂದು
ಬೆಳಿಗ್ಗೆ 8.00 ರಿಂದ - ಪಂಚವಿಂಶತಿ ಕಲಶ, ಪ್ರಧಾನ ಹೋಮ, ದುರ್ಗಾಹೋಮ, ಆಶ್ಲೇಷ ಬಲಿ, ಪ್ರಸನ್ನ ಪೂಜೆ. । ಬೆಳಿಗ್ಗೆ 9.00 ರಿಂದ - ಭಜನೆ.
ಮಧ್ಯಾಹ್ನ 1.00 ರಿಂದ 2.00 ರವರೆಗೆ - ಅನ್ನಸಂತರ್ಪಣೆ.
ಮಧ್ಯಾಹ್ನ 2.00 ರಿಂದ- ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಗೃಹದಲ್ಲಿ ಧಾರ್ಮಿಕ ಸಭಾಕಾರ್ಯಕ್ರಮ ತದನಂತರ "ಸ್ವರಸಂಧ್ಯಾ" ಭಕ್ತಿ ಸಂಗೀತ ಕಾರ್ಯಕ್ರಮ ಶಿಬರೂರು ಸುರೇಶ್ ಎಲ್ ಶೆಟ್ಟಿ ನೇತೃತ್ವದ ಶ್ರೀ ಮಹಾವಿಷ್ಣು ಭಜನಾ ತಂಡದವರಿಂದ.
ಸಂಜೆ 6.00 ರಿಂದ - ರಂಗ ಪೂಜೆ, ದೇವರ ಬಲಿ ಉತ್ಸವ, ಪ್ರಸಾದ ವಿತರಣೆ.
ರಾತ್ರಿ 8.00 ರಿಂದ - ಅನ್ನಸಂತರ್ಪಣೆ.

ತಾ. 11.03.2026 ಬುಧವಾರದಂದು ಬೆಳಿಗ್ಗೆ 8.00 ರಿಂದ - ಸಂಪ್ರೋಕ್ಷಣೆ, ಮಹಾಪೂಜೆ, ಮಂತ್ರಾಕ್ಷತೆ.

ಆ ಪ್ರಯುಕ್ತ ನಡೆಯುವ ಧಾರ್ಮಿಕ ಸತ್ಕರ್ಮಗಳಲ್ಲಿ ತಾವೆಲ್ಲರೂ ಭಾಗವಹಿಸಿ, ದೇವರ ಗಂಧ ಪ್ರಸಾದ ಸ್ವೀಕರಿಸಿ ಅನ್ನಸಂತಪಣೆಯಲ್ಲಿ ಪಾಲ್ಗೊಂಡು ಶ್ರೀ ಭಗವಂತನ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಬಯಸುತ್ತೇವೆ.

ಸರ್ವರಿಗೂ ಆದರದ ಸ್ವಾಗತ ಬಯಸುವ,



ಶ್ರೀ ಪ್ರವೀಣ ಭೋಜ ಶೆಟ್ಟಿ
ಅಧ್ಯಕ್ಷರು, ಬಂಟರ ಸಂಘ ಮುಂಬಯಿ



ಶಿಬರೂರು ಸುರೇಶ್ ಎಲ್. ಶೆಟ್ಟಿ
ಕಾರ್ಯಾಧ್ಯಕ್ಷರು, ಜ್ಞಾನ ಮಂದಿರ ಸಮಿತಿ



ಮಹೇಶ್ ಎಸ್. ಶೆಟ್ಟಿ
ಉಪಾಧ್ಯಕ್ಷರು



ಡಾ. ಆರ್. ಕೆ. ಶೆಟ್ಟಿ
ಗೌ. ಪ್ರ. ಕಾರ್ಯದರ್ಶಿ



ಸಿ.ಎ. ರಮೇಶ್ ಬಿ. ಶೆಟ್ಟಿ
ಗೌ. ಕೋಶಾಧಿಕಾರಿ



ಗಿರೀಶ್ ಶೆಟ್ಟಿ, ತೆಳ್ಳಾರ್
ಜತೆ ಕಾರ್ಯದರ್ಶಿ



ಶಶಿಧರ್ ಕೆ. ಶೆಟ್ಟಿ
ಜತೆ ಕೋಶಾಧಿಕಾರಿ



ಶ್ರೀಮತಿ ಚಿತ್ರಾ ಆರ್. ಶೆಟ್ಟಿ
ಕಾರ್ಯಾಧ್ಯಕ್ಷೆ, ಮಹಿಳಾ ವಿಭಾಗ



ಸವಿನ್ ಜೆ. ಶೆಟ್ಟಿ
ಕಾರ್ಯಾಧ್ಯಕ್ಷ, ಯುವ ವಿಭಾಗ



ಪ್ರಕಾಶ್ ಟಿ. ಶೆಟ್ಟಿ, ನಲ್ಯಗುತ್ತು
ಉಪ ಕಾರ್ಯಾಧ್ಯಕ್ಷರು, ಜ್ಞಾನ ಮಂದಿರ ಸಮಿತಿ



ಸುಕುಮಾರ್ ಎಸ್. ಶೆಟ್ಟಿ
ಕಾರ್ಯದರ್ಶಿ, ಜ್ಞಾನ ಮಂದಿರ ಸಮಿತಿ



ಭಾಸ್ಕರ್ ಡಿ. ಶೆಟ್ಟಿ
ಕೋಶಾಧಿಕಾರಿ, ಜ್ಞಾನ ಮಂದಿರ ಸಮಿತಿ

ಬಂಟರ ಸಂಘದ ಪದಾಧಿಕಾರಿಗಳು, ವಿಶ್ವಸ್ಥರು, ಮಾಜಿ ಅಧ್ಯಕ್ಷರುಗಳು, ಆಡಳಿತ ಸಮಿತಿಯ ಸದಸ್ಯರು, ಮಹಿಳಾ ವಿಭಾಗ, ಯುವ ವಿಭಾಗ ಮತ್ತು ಒಂಭತ್ತು ಪ್ರಾದೇಶಿಕ ಸಮಿತಿಗಳ ಕಾರ್ಯಾಧ್ಯಕ್ಷರು, ಸರ್ವ ಸದಸ್ಯರು ಹಾಗೂ ಜ್ಞಾನ ಮಂದಿರ ಸಮಿತಿಯ ಸದಸ್ಯರು.

|| ವಂದೇ ವಿಷ್ಣುಂ ಭವ ಭಯ ಹರಂ ಸರ್ವಲೋಕೈಕನಾಥಮ್ ||